CPMG / KA / BG-GPO/13/2003-2005



ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೦	ಬೆಂಗಳೂರು, ಗುರುವಾರ, ಫೆಬ್ರವರಿ ೨೪, ೨೦೦೫ (ಫಾಲ್ಗುಣ ೫, ಶಕ ವರ್ಷ ೧೯೨೬)	ಸಂಚಿಕೆ ೮

ಭಾಗ - ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾಗಿ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು.

FOREST, ECOLOGY AND ENVIRONMENT SECRETARIAT

Subject : Diversion of 129.60 ha. of forest land for construction of Varahi Irrigation Project in Dakshina Kannada District.

Read :

1. Letter No. B3: GFL. CR: 330/82-83 Dated: 12.6.1989 of Principal Chief Conservator of Forests, Bangalore.
2. State Government letter No. AHFF 114 FGL 89 dated: 12.1.1993
3. Letter No. F.No.8-107/84-FC, dated: 13.11.2000 of Government of India, Ministry of Environment and Forests, New Delhi.
4. Letter No. A5 (3)GFL. CR-333/82-83, Dated: 02.2001 of Principal Chief Conservator of Forests, Bangalore.
5. State Government letter No. FEE 114 FGL 89, dated: 19.2.2001.
6. Letter No. F.No.8-107/84-FC/825(St), dated: 20.03.2001 of Government of India, Ministry of Environment, and Forests, New Delhi.
7. State Government letter No. FEE 114 FGL 89 dated: 6.2.2004.
8. Letter No. F.No.8-107/84-FC, dated: 12/15.3.2004 of Government of India, Ministry of Environment and Forests, New Delhi.

PREAMBLE:

The Principal Chief Conservator of Forests, Bangalore vide his letter dated 12.6.89 read at (1) above has submitted the proposal to obtain the approval of Government of India for release of 275 Ha. of forest land for construction of weir across Varahi river.

Accordingly, the proposal was recommended to Government of India vide State Government letter dated 12.1.1993 read at (2) above.

The Government of India, Ministry of Environment and Forests, New Delhi vide their letter 13.11.2000 requested the State Government for the assessment of requirement of forest land for diversion in view of Conservation of flora and fauna and the possibility of reducing the height of the dam from 49.5 meter to above 36 meter.

The Principal Chief Conservator of Forests, Bangalore vide his letter dated 2.2001 read at (4) above has submitted the proposal to obtain the approval of Government of India under Section 2 of

Forest (Conservation) Act, 1980 for diversion of 115.60 ha. of forest land for construction of Varahi Irrigation Project in Dakshina Kannada District subject to certain conditions.

Accordingly, the proposal was recommended to Government of India vide State Government letter dated .19.2.2001 read at (5) above.

The Government of India, Ministry of Environment and Forests, Ministry of Environment and Forests, New Delhi vide their letter dated 20.3.2001 read at (6) above has given its approval in principle (Stage-I) subject to fulfillment of certain conditions and the same was communicated to the Principal Chief Conservator of Forests, Bangalore for compliance vide State Government letter dated 28.4.2001.

The Principal Chief Conservator of Forests, Bangalore vide in his letter dated: 23.7.2002 and 20.01.2004 has furnished the compliance report The same has been sent to Government of India vide State Government letter dated: 6.2.2004 read at (7) above.

Finally, Government of India Ministry of Environment and Forests, New Delhi vide their letter dated 12/15.03.2004 read at (8) above has conveyed its approval (Stage-II) under Section 2 of Forest (Conservation) Act, 1980 for diversion of 129.60 ha. of forest land for construction of Varahi Irrigation Project in Dakshina Kannada District subject to certain conditions.

The proposal has been examined in detail and hence the order.

Government Order No. FEE 114 FGL 89, Bangalore, Dated: 24th January, 2005

In the Circumstances explained in the preamble above Government are pleased to accord sanction under Section 2 of Forest (Conservation) Act, 1980 for diversion of 129.60 ha. of forest land for construction of Varahi Irrigation Project in Dakshina Kannada District subject to the following conditions:

1. The legal Status of the forest land shall remain unchanged.
2. The Compensatory afforestation shall be raised over equivalent non-forest land and shall be maintained at the project cost. In this regard the funds transfer to the State Forest Department shall be placed at the disposal of the concerned Deputy Conservator of Forests.
3. The non-forest land for compensatory afforestation shall be notified by the State Government as RF under Section-4 of PF under section 29 of Indian Forest Act, 1927 or the State Forest Act within a period of 6 months and Nodal Officer(Forest Conservation) shall report the compliance.
4. Demarcation of the area will be done on ground at project cost using four feet high RCC pillars with serial numbers, forward and back bearings and distance between adjacent pillars.
5. Trees shall be felled only when it becomes necessary under the supervision of State Forest Department.
6. Reservoir so created shall be declared as `Reserved Forest` under Indian Forest Act, 1927 with regulated fishing rights.
7. Canal Bank Plantation shall be raised and maintained by the State Forest Department at the project cost.
8. No Tree felling in the area between FRL and 4 m below FRL shall be carried out.
9. Water will be provided free of cost to the Forest Department for raising nursery/plantations in nearby areas.
10. Catchment area treatment plan shall be implemented under the supervision of State Forest Department.
11. Re-settlement and Rehabilitation plan for the displaced people shall be implemented immediately.
12. No labour camps shall be established on the forest land.
13. Sufficient firewood depot should be opened after procuring firewood from Karnataka Forest Development Corporation (KFDC).
14. The user agency should ensure that there should be no damage to the available Wildlife.
15. The approval under Forest (Conservation) Act, 1980 subject to the clearance under the Environment (Protection) Act, 1986, if required.
16. The forest land shall not be used for any purpose other than that specified in the proposal.
17. Along the banks of the reservoir, plantations shall be raised and maintained by the State Forest Department.
18. All the funds obtained as Net Present Value of diverted forestland should be deposited with Compensatory Afforestation Fund Management and Planning Authority (CAMPA).

19. All the safeguards and conditions stipulated by the Indian Board of Wildlife (IBWL) shall be strictly followed.
20. The catchment area treatment works shall be executed as per the plan under the supervision of the State Forest Department.
21. Irrigation Department should provide water canal to raise Irrigated plantations by the Forest Department as and when required.
22. Necessary funds shall made available to the Forest Department for raising road side and canal side plantations all along the stratch falling in the jurisdictions (to be estimated by the Forest Department).
23. The user agency has to pay the Net present value (NPV) fixed by Government vide Notification No. FEE 247 FGL 2002, dated: 17.1.2004.
24. The lessee has to pay the lease rent as fixed by the Government of Karnataka from time to time.
25. The user agency shall pay the cost of raising compensatory afforestation at the rate prevailing at the time of approval (Now it is Rs.54, 200-00 per ha.)
26. The user agency shall pay the cost of extraction of trees as estimated by the Department.
27. Any other condition to be stipulated by State Government/ Government of India/Principal Chief Conservator of Forests, Karnataka from time to time in the interest of conservation, protection or development of forests.

By order and in the name of the Governor of Karnataka,
S.R. VATSALA
Under Secretary to Government,
Forest, Ecology and Environment Department.

PR-177

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಸ್.ಡಿ. ಘೀವಾರಿ, ಹಿಂದಿನ ತಹಶೀಲ್ದಾರ್, ಬಾಗಲಕೋಟೆ ತಾಲ್ಲೂಕು ಇವರನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸುವ ಕುರಿತು.

ಓದಲಾಗಿದೆ : ದಿನಾಂಕ: 15.09.2004ರ ಸರ್ಕಾರಿ ಆದೇಶ ಸಂಖ್ಯೆ: ಕಂಇ 46 ಎಡಿಇ 2004.

ಪ್ರಸ್ತಾವನೆ:

ಶ್ರೀ ಎಸ್.ಡಿ. ಘೀವಾರಿ, ಹಿಂದಿನ ತಹಶೀಲ್ದಾರ್, ಬಾಗಲಕೋಟೆ ತಾಲ್ಲೂಕು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸದರಿ ತಾಲ್ಲೂಕಿನ ಆನದಿನ್ನಿ ಗ್ರಾಮದ ಸರ್ವೆ ನಂ.4ರಲ್ಲಿನ ಜಮೀನಿನ ಬಗ್ಗೆ ಕೆಲವು ದಾಖಲೆಗಳನ್ನು ಮಾರ್ಪಡಿಸಿ ಹಾಗೂ ಇನ್ನೂ ಕೆಲವು ದಾಖಲೆಗಳನ್ನು ಸೇರ್ಪಡಿಸಿ ಶ್ರೀಮತಿ ದುರ್ಗವ್ವ ಯಮನಪ್ಪ ಮಾದರ ಎಂಬುವವರಿಗೆ ಅಧಿಭೋಗದಾರ ಹಕ್ಕು ಪಡೆಯಲು ಹಾಗೂ ಸರಕಾರಿ ಗೈರಾಣಾ ಜಮೀನನ್ನು ಕಬಳಿಸಲು ಶಾಮೀಲಾಗಿ ಕರ್ತವ್ಯಲೋಪ ಎಸಗಿರುವರೆಂಬ ಕಾರಣಕ್ಕಾಗಿ ಇವರನ್ನು ಮೇಲೆ ಓದಲಾದ ದಿನಾಂಕ: 15.09.2004ರ ಸರ್ಕಾರಿ ಆದೇಶದಲ್ಲಿ ಅವರ ವಿರುದ್ಧ ಇಲಾಖಾ ವಿಚಾರಣೆ ಹೂಡುವುದನ್ನು ಬಾಕಿಯಿಟ್ಟು ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು. ಸದರಿ ಪ್ರಕರಣವನ್ನು ಪುನರ್ ಪರಿಶೀಲಿಸಿದ ಸರ್ಕಾರವು ಶ್ರೀ ಎಸ್.ಡಿ. ಘೀವಾರಿ ಯವರನ್ನು ಅಮಾನತ್ತಿನಲ್ಲಿ ಮುಂದುವರಿಸುವ ಅಗತ್ಯವಿಲ್ಲವೆಂದು ಮನಗಂಡು ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿಯಿಟ್ಟು ಅಮಾನತ್ತಿನಿಂದ ಬಿಡುಗಡೆ ಮಾಡಲು ತೀರ್ಮಾನಿಸಿ ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 46 ಎಡಿಇ 2004, ಬೆಂಗಳೂರು, ದಿನಾಂಕ: 24ನೇ ಜನವರಿ, 2005

ಪ್ರಸ್ತಾವನೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿರುವ ಹಿನ್ನೆಲೆಯಲ್ಲಿ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 10 (5) (ಸಿ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಎಸ್.ಡಿ. ಘೀವಾರಿ, ತಹಶೀಲ್ದಾರ್ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿಯಿಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಅವರನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ತಹಶೀಲ್ದಾರ್, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ ಇಲ್ಲಿ ಖಾಲಿಯಿರುವ ಹುದ್ದೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಮಹಂತೇಶಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3).

ಪಿ.ಆರ್.180

ವಿಷಯ : ಶ್ರೀ ಎನ್. ರಾಮ್‌ಪ್ರಸಾದ್, ದ್ವಿತೀಯ ದರ್ಜೆ ಸಹಾಯಕರು, ತಾಲ್ಲೂಕು ಕಛೇರಿ, ನಂಜನಗೂಡು ಇವರು ನಿಯಮ 18ರಡಿಯಲ್ಲಿ ಸಲ್ಲಿಸಿದ ಮೇಲ್ಮನವಿ ಬಗ್ಗೆ.

ಓದಲಾಗಿದೆ :
1. ಮೈಸೂರು ಜಿಲ್ಲಾಧಿಕಾರಿಗಳವರ ಆದೇಶ ಸಂಖ್ಯೆ: ಇಎಸ್‌ಟಿ (2) ಸಿಸಿಎ, 11/2000-01, ದಿನಾಂಕ: 16.09.2001.
2. ಶ್ರೀ ರಾಮ್ ಪ್ರಸಾದ್, ದ್ವಿತೀಯ ದರ್ಜೆ ಸಹಾಯಕರು, ಇವರು ಹಿಂದಿನ ಮೈಸೂರು ವಿಭಾಗಾಧಿಕಾರಿಗಳಿಗೆ ದಿನಾಂಕ: 20.12.2002ರಂದು ಸಲ್ಲಿಸಿದ ಮೇಲ್ಮನವಿ.

3. ಮೈಸೂರು ಜಿಲ್ಲಾಧಿಕಾರಿಯವರ ಪತ್ರ ಸಂಖ್ಯೆ: ಇಎಸ್‌ಟಿ (2) ಸಿಆರ್ 77/2002-2003 ದಿನಾಂಕ: 06.03.2003.

ಪ್ರಸ್ತಾವನೆ:

ಶ್ರೀ ರಾಮ್‌ಪ್ರಸಾದ್, ದ್ವಿತೀಯ ದರ್ಜೆ ಸಹಾಯಕರು, ಇವರು ಪಿರಿಯಾಪಟ್ಟಣ ತಾಲ್ಲೂಕು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಆಗಸ್ಟ್ 1981ರಿಂದ ಮಾರ್ಚ್ 1982ರ ವರೆಗೆ ಬೆಟ್ಟದಪುರ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಇಲಾಖೆಗೆ ಸೇರಿದ ವಿದ್ಯಾರ್ಥಿ ನಿಲಯದ ಅರೆಕಾಲಿಕ ಬೋಧಕರ ಸಂಬಳ ರೂ. 2700/-ಗಳನ್ನು ಫೋರ್ಜರಿ ಸಹಿ ಮಾಡಿ ಹಣ ದುರುಪಯೋಗ ಪಡಿಸಿಕೊಂಡು ಕರ್ತವ್ಯಲೋಪ ಎಸಗಿದ್ದ ಮೇರೆಗೆ ಅವರನ್ನು ಇಲಾಖಾ ವಿಚಾರಣೆಗೆ ಒಳಪಡಿಸಿ ಅವರ ಮೇಲಿನ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಸಿಸಿಎ ನಿಯಮಗಳ ಪ್ರಕಾರ ಪಾಲಿಸಬೇಕಾದ ಎಲ್ಲಾ ವಿಧಿ ವಿಧಾನಗಳನ್ನು ಅನುಸರಿಸಿ ಶ್ರೀ ರಾಮ್‌ಪ್ರಕಾಶ್ ಇವರಿಗೆ ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಮೈಸೂರು ಜಿಲ್ಲಾಧಿಕಾರಿಗಳು ಸಿಸಿಎ ನಿಯಮಾವಳಿ ನಿಯಮ 8(iii)ರಂತೆ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿದು ದಂಡನೆ ವಿಧಿಸಿರುತ್ತಾರೆ.

ಈ ಆದೇಶವನ್ನು ಪ್ರಶ್ನಿಸಿ ಶ್ರೀ ರಾಮ್‌ಪ್ರಸಾದ್ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ: (2)ರಂತೆ ಹಿಂದಿನ ಮೈಸೂರು ವಿಭಾಗಾಧಿಕಾರಿಗಳಿಗೆ ದಿನಾಂಕ: 20.12.2002ರಂದು ಮೇಲ್ಮನವಿ ಸಲ್ಲಿಸಿರುತ್ತಾರೆ. ವಿಭಾಗಾಧಿಕಾರಿಗಳ ಕಛೇರಿಗಳು ದಿನಾಂಕ: 01.04.2003ರಿಂದ ರದ್ದಾಗಿರುವುದರಿಂದ ಸದರಿಯವರ ಮೇಲ್ಮನವಿ ಮೇಲೆ ಓದಲಾದ ಕ್ರಮ ಸಂಖ್ಯೆ: (3)ರಂತೆ ಮೈಸೂರು ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಬಂದಿರುತ್ತದೆ. ಸಿಸಿಎ ನಿಯಮಾವಳಿಗಳಿಗೆ ಮಾಡಲಾದ ತಿದ್ದುಪಡಿ ಅನುಸಾರ ಈ ಮೇಲ್ಮನವಿ ಪರಿಶೀಲಿಸಲು ಸರ್ಕಾರ ಸಕ್ಷಮ ಅಧಿಕಾರ ಹೊಂದಿದೆ.

ಮೇಲ್ಮನವಿದಾರರಿಗೆ ಅವರ ಮೇಲ್ಮನವಿ ಬಗ್ಗೆ ಹೇಳಿಕೆ ನೀಡಲು ಮುಕ್ತ ಅವಕಾಶ ನೀಡಲಾಗಿದೆ. ಈ ಮೇಲ್ಮನವಿಯನ್ನು ದಿನಾಂಕ: 01.11.2004, 30.11.2004, 14.12.2004, 28.12.2004 ಹಾಗೂ 11.01.2005 ರಂದು ವಿಚಾರಣೆಗೆ ತೆಗೆದುಕೊಳ್ಳಲಾಯಿತು ವಿಚಾರಣೆಗೆ ಶ್ರೀ ರಾಮ್‌ಪ್ರಸಾದ್ ಹಾಜರಿದ್ದರು. ಅವರ ಮೇಲೆ ಮಾಡಲಾದ ಆರೋಪ ನಿರಾಧಾರವಾಗಿದ್ದು ಆರೋಪದಲ್ಲಿ ಕಾಣಿಸಿದ ಅವಧಿಯಲ್ಲಿ ಅವರು ಸದರಿ ಕಛೇರಿಯಲ್ಲಿ ಅಂದರೆ ಕ್ಷೇತ್ರಾಭಿವೃದ್ಧಿ ಅಧಿಕಾರಿ, ಪಿರಿಯಾಪಟ್ಟಣ ಇವರ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರಲಿಲ್ಲ. ಈ ಕುರಿತು ತಾನು ದಾಖಲೆ/ ಪುರಾವೆ ಒದಗಿಸುವುದಾಗಿ ತಿಳಿಸುತ್ತಾ ದಿನಾಂಕ: 11.01.2005ರಂದು ಮೈಸೂರು ಜಿಲ್ಲಾಧಿಕಾರಿಗಳ ಕಛೇರಿಯಿಂದ ದಿನಾಂಕ: 07.07.1982 ರಂದು ಹೊರಡಿಸಿದ 2ನೇ ದರ್ಜೆ ಗುಮಾಸ್ತ/ 1ನೇ ದರ್ಜೆ ರಾಜಸ್ವ ನಿರೀಕ್ಷಕರು / ಶೀಘ್ರಲಿಪಿಗಾರ/ ಬೆರಳಚ್ಚುಗಾರ ವರ್ಗಾವಣೆಯ ಆದೇಶದ ಪ್ರತಿಯನ್ನು ಹಾಗೂ ಇದಕ್ಕೆ ಪೂರಕವಾಗಿ ಅವರನ್ನು ವಿಶೇಷ ತಹಶೀಲ್ದಾರ್ ನ್ಯಾಯಾಲಯ, ಭೂ ಸುಧಾರಣೆ ಕೃಷ್ಣರಾಜನಗರ ತಾಲ್ಲೂಕು ರವರ ಕಛೇರಿಯ ದಿನಾಂಕ: 15.07.1982ರ ಜ್ಞಾಪನಾ ಪತ್ರದ ಪ್ರತಿಯನ್ನು ಹಾಜರುಪಡಿಸಿ ಆರೋಪಣೆಯಲ್ಲಿ ಆರೋಪಿಸಿದಂತೆ ಪಿರಿಯಾಪಟ್ಟಣ ಕ್ಷೇತ್ರಾಭಿವೃದ್ಧಿಯ ಅಧಿಕಾರಿಗಳ ಕಛೇರಿಯಲ್ಲಿ ಸದರಿ ಅವಧಿಯಲ್ಲಿ ತಾನು ಕಾರ್ಯ ನಿರ್ವಹಿಸುತ್ತಿರಲಿಲ್ಲವೆಂದು ತಿಳಿಸುತ್ತಾ ತನ್ನ ಮೇಲೆ ಮಾಡಲಾದ ಆರೋಪ ಆಧಾರರಹಿತವಾಗಿರುವುದರಿಂದ ಜಿಲ್ಲಾಧಿಕಾರಿಗಳು ವಿಧಿಸಿದ ದಂಡನೆಯನ್ನು ವಜಾಮಾಡುವಂತೆ ಕೋರಿರುತ್ತಾರೆ. ಇದಾದನಂತರ ಈ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಲಾಯಿತು.

ಮೇಲ್ಮನವಿದಾರರು ನೀಡಿದ ಹೇಳಿಕೆ ಹಾಗೂ ಅವರು ಒದಗಿಸಿದ ದಾಖಲೆಗಳನ್ನು ಮೂಲ ಕಡತದಲ್ಲಿ ಲಭ್ಯವಿರುವ ಕಾಗದಪತ್ರಗಳ ಮೇರೆಗೆ ಪರಿಶೀಲಿಸಲಾಗಿದೆ. ಶ್ರೀ ರಾಮ್‌ಪ್ರಸಾದ್ ಇವರು ಅವರ ಮೇಲೆ ಮಾಡಲಾದ ಆರೋಪದಲ್ಲಿ ನಮೂದಿಸಿದ ಅವಧಿಯಲ್ಲಿ ಅವರು ಪಿರಿಯಾಪಟ್ಟಣ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿಯಲ್ಲಿ ಇರಲಿಲ್ಲವೆಂಬ ಅಂಶ ಮೇಲ್ನೋಟಕ್ಕೆ ದೃಢಪಡುತ್ತದೆ, ಆದ್ದರಿಂದ ಈ ಅಂಶವನ್ನು ವಿಚಾರಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಪರಿಶೀಲಿಸದೇ ಇರುವ ಅಂಶ ಮೇಲ್ನೋಟಕ್ಕೆ ಕಂಡುಬಂದಿದೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಸರ್ಕಾರ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 459 ಬಿಎಂಎಂ 2004, ಬೆಂಗಳೂರು, ದಿನಾಂಕ: 28ನೇ ಜನವರಿ, 2005

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಎನ್. ರಾಮ್‌ಪ್ರಸಾದ್, ದ್ವಿದಸ ಇವರು ಮೈಸೂರು ಜಿಲ್ಲಾಧಿಕಾರಿಗಳ ಕಛೇರಿಯ ಅಧಿಕೃತ ಜ್ಞಾಪನಾ ಸಂಖ್ಯೆ: ಇಎಸ್‌ಟಿ 92/82-83 ದಿನಾಂಕ: 07.07.1982ರಲ್ಲಿ 1ನೇ ಟ್ರಿಬ್ಯುನಲ್, ಕೃಷ್ಣರಾಜನಗರ ಕಛೇರಿಯಿಂದ ಪಿರಿಯಾಪಟ್ಟಣ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿಗೆ ವರ್ಗಾವಣೆ ಆಗಿರುವುದರಿಂದ ಸದರಿಯವರು ಅವರ ಮೇಲೆ ಮಾಡಿದ ಆರೋಪದಂತೆ ಅವರು 1981-82 ಅವಧಿಯಲ್ಲಿ ಪಿರಿಯಾಪಟ್ಟಣ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿಯಲ್ಲಿ ಇರಲಿಲ್ಲ ಎಂಬ ಅಂಶ ದೃಢಪಡುತ್ತಿರುವುದರಿಂದ ಈ ಅಂಶವನ್ನು ಶ್ರೀ ರಾಮ್‌ಪ್ರಸಾದ್ ಇವರು 2ನೇ ಕಾರಣ ಕೇಳುವ ನೋಟೀಸಿಗೆ ಉತ್ತರ ನೀಡುವಾಗ ಶಿಸ್ತು ಪ್ರಾಧಿಕಾರಗಳಾದ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದಾಗ್ಯೂ ಅದನ್ನು ಪರಿಶೀಲಿಸದೇ ಇರುವುದರಿಂದ ಸದರಿ ಆದೇಶದಲ್ಲಿ ಲೋಪ ಉಂಟಾಗಿರುವುದು ಕಂಡುಬರುತ್ತದೆ. ಆದ್ದರಿಂದ ಮೈಸೂರು ಜಿಲ್ಲಾಧಿಕಾರಿಗಳು ದಿನಾಂಕ: 16.09.2001ರಂದು ವಿಧಿಸಿದ ದಂಡನಾ ಆದೇಶವನ್ನು ವಜಾಗೊಳಿಸಿ ಆದೇಶಿಸಲಾಗಿದೆ.

ಶ್ರೀ ರಾಮ್‌ಪ್ರಸಾದ್ ಇವರು ಒದಗಿಸಿದ ದಾಖಲೆಯನ್ನು ಗಣನೆಗೆ ತೆಗೆದುಕೊಂಡು ತತ್ಪರಿಣಾಮವಾಗಿ ವಿಚಾರಣಾಧಿಕಾರಿಗಳ ವರದಿಯ ಮೇರೆಗೆ ಶ್ರೀ ರಾಮ್‌ಪ್ರಸಾದ್ ಇವರಿಂದ ಲಿಖಿತ ಹೇಳಿಕೆ ಪಡೆದು ಅವರು ಒದಗಿಸಿದ ದಾಖಲೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ತದನಂತರ ಸೂಕ್ತವಾದ ಆದೇಶ ಹೊರಡಿಸಲು ಮೈಸೂರು ಜಿಲ್ಲಾಧಿಕಾರಿಗಳಿಗೆ ಸೂಚಿಸಿ ಈ ಪ್ರಕರಣವನ್ನು ಜಿಲ್ಲಾಧಿಕಾರಿಗಳಿಗೆ ಮರು ಪರಿಶೀಲನೆಗೆ ವಹಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಿ.ಬಿ. ಗಣಾಚಾರಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು-1).

ಪಿ.ಆರ್.181

ವಿಷಯ : ಶ್ರೀ ರಾಮ್ ಪ್ರಸಾದ್, ದ್ವಿತೀಯ ದರ್ಜೆ ಸಹಾಯಕರು, ತಾಲ್ಲೂಕು ಕಛೇರಿ, ನಂಜನಗೂಡು ಇವರು ನಿಯಮ 18 ರಡಿಯಲ್ಲಿ ಸಲ್ಲಿಸಿದ ಮೇಲ್ಮನವಿ ಬಗ್ಗೆ.

ಓದಲಾಗಿದೆ :

1. ಮೈಸೂರು ಜಿಲ್ಲಾಧಿಕಾರಿಗಳವರ ಆದೇಶ ಸಂಖ್ಯೆ: ಇಎಸ್‌ಟಿ (2) ಸಿಸಿಎ.ಅ.6/2001-02, ದಿನಾಂಕ: 25.05.2004.
2. ಶ್ರೀ ರಾಮ್‌ಪ್ರಸಾದ್, ದ್ವಿತೀಯ ದರ್ಜೆ ಸಹಾಯಕರು, ತಾಲ್ಲೂಕು ಕಛೇರಿ, ನಂಜನಗೂಡು ಇವರು ಸಿಸಿಎ ನಿಯಮಾವಳಿ ನಿಯಮ 18ರಡಿಯಲ್ಲಿ ದಿನಾಂಕ: 26.07.2004ರಂದು ಸರ್ಕಾರಕ್ಕೆ ಸಲ್ಲಿಸಿದ ಮೇಲ್ಮನವಿ.

ಪ್ರಸ್ತಾವನೆ:

ಶ್ರೀ ರಾಮ್‌ಪ್ರಸಾದ್, ದ್ವಿತೀಯ ದರ್ಜೆ ಸಹಾಯಕರು, ತಾಲ್ಲೂಕು ಕಛೇರಿ, ನಂಜನಗೂಡು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ದಿನಾಂಕ: 05.05.2001ರಿಂದ 09.05.2001, 11.05.2001 ರಿಂದ 01.06.2001, 04.06.2001 ಮತ್ತು 14.06.2001 ರಿಂದ 20.08.2001ರವರೆಗೆ ಅನಧಿಕೃತ ಗೈರು ಹಾಜರಾಗಿರುವ ಹಿನ್ನೆಲೆಯಲ್ಲಿ ಮತ್ತು ಸಾಕಷ್ಟು ನೋಟೀಸುಗಳನ್ನು ನೀಡಿದ್ದಾಗ್ಯೂ ಅವುಗಳಿಗೆ ಸ್ಪಂದಿಸದೇ ಇರುವುದರಿಂದ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ತೊಂದರೆಯುಂಟು ಮಾಡಿ ಕರ್ತವ್ಯ ಲೋಪ ಎಸಗಿರುವ ಹಿನ್ನೆಲೆಯಲ್ಲಿ ಸದರಿಯವರನ್ನು ಇಲಾಖಾ ವಿಚಾರಣೆಗೆ ಒಳಪಡಿಸಿ ವಿಚಾರಣೆಯಲ್ಲಿ ಅವರ ಮೇಲೆ ಮಾಡಲಾದ ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ಆದೇಶದಂತೆ ಸಿಸಿಎ ನಿಯಮಾವಳಿ ನಿಯಮ 8(vii) ಅನ್ವಯ ಸದರಿಯವರನ್ನು ಸೇವೆಯಿಂದ ತೆಗೆದು ಹಾಕಿ ಮೈಸೂರು ಜಿಲ್ಲಾಧಿಕಾರಿಗಳು ದಂಡನೆ ವಿಧಿಸಿರುತ್ತಾರೆ.

ಮೈಸೂರು ಜಿಲ್ಲಾಧಿಕಾರಿಗಳ ದಿನಾಂಕ: 25.05.2004ರ ಆದೇಶವನ್ನು ಪ್ರಶ್ನಿಸಿ ಶ್ರೀ ರಾಮ್‌ಪ್ರಸಾದ್ ಇವರು ಸಿಸಿಎ ನಿಯಮಾವಳಿ ನಿಯಮ 18ರಡಿಯಲ್ಲಿ ಮೇಲೆ ಓದಲಾದ ಕ್ರಮಸಂಖ್ಯೆ (2)ರಂತೆ ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿರುತ್ತಾರೆ.

ಈ ಮೇಲ್ಮನವಿಯನ್ನು ವಿಚಾರಣೆಗೆ ತೆಗೆದುಕೊಂಡು ಮೇಲ್ಮನವಿದಾರರಿಗೆ ಖುದ್ದಾಗಿ ಹಾಜರಾಗಿ ತನ್ನ ಪರ ಸಾಕ್ಷಿ/ ವಾದ ಮಂಡಿಸಲು ಅವಕಾಶ ಕಲ್ಪಿಸಿಕೊಡಲಾಗಿದೆ. ಅದರಂತೆ ಈ ಪ್ರಕರಣವನ್ನು ದಿನಾಂಕ: 11.01.2001ರಂದು ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಮೇಲ್ಮನವಿದಾರರು ನ್ಯಾಯಾಲಯದಲ್ಲಿ ಹಾಜರಿದ್ದರು. ಅವರು ಅನಧಿಕೃತ ಗೈರುಹಾಜರಾದ ವಿಷಯಕ್ಕೆ ಸಂಬಂಧಪಟ್ಟಂತೆ ಅವರನ್ನು ವಿಚಾರಣೆಗೆ ಒಳಪಡಿಸಿದ ಬಗ್ಗೆ ನೋಟೀಸು ಹಾಗೂ ಆರೋಪಣಾ ಪಟ್ಟಿ ಮತ್ತು ಇತರೆ ಅನುಬಂಧಗಳನ್ನು ಅವರಿಗೆ ಜಾರಿಗೊಳಿಸಿಲ್ಲವೆಂದು ತಿಳಿಸಿದರು. ಮೇಲಿನ ಅವಧಿಯಲ್ಲಿ ತನಗೆ ಮೈಯಲ್ಲಿ ಹುಷಾರಿಲ್ಲದ ಕಾರಣ ವೈದ್ಯಕೀಯ ಆಧಾರದ ಹಿನ್ನೆಲೆಯಲ್ಲಿ ರಜಾ ಕೋರಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಲಾಗಿದೆ ಎಂದು ತಿಳಿಸಿರುತ್ತಾರೆ. ಅನಧಿಕೃತ ಗೈರುಹಾಜರಾದ ಹಿನ್ನೆಲೆಯಲ್ಲಿ ಅವರನ್ನು ಸೇವೆಯಿಂದ ಅಮಾನತ್ತು ಪಡಿಸಿ, ಅಮಾನತ್ತಿನ ಅವಧಿಗೆ ಜೀವನಾಧಾರ ಭತ್ಯೆಯನ್ನು ಸಹಾ ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ತಾನು ಹುಷಾರಿಲ್ಲದ ಬಗ್ಗೆ ಜೆ.ಎಸ್.ಎಸ್. ಆಸ್ಪತ್ರೆ, ಮೈಸೂರು ರವರಿಂದ ಪಡೆದ ವೈದ್ಯಕೀಯ ಪ್ರಮಾಣಪತ್ರವನ್ನು ಹಾಜರುಪಡಿಸಿರುತ್ತಾರೆ. ಈ ಎಲ್ಲಾ ಅಂಶಗಳನ್ನೂ ಗಮನಿಸಿ ಮೈಸೂರು ಜಿಲ್ಲಾಧಿಕಾರಿಗಳು ವಿಧಿಸಿರುವ ದಂಡನೆಯನ್ನು ವಜಾ ಮಾಡಿ ಕೆಲಸಕ್ಕೆ ಪುನರ್ ನಿಯುಕ್ತಿ ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ. ಇವರ ಹೇಳಿಕೆಯನ್ನು ದಾಖಲಿಸಿಕೊಂಡು ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಲಾಯಿತು.

ಮೇಲ್ಮನವಿಯಲ್ಲಿ ಎತ್ತಿರುವ ಅಂಶಗಳನ್ನು ಹಾಗೂ ವಿಚಾರಣೆ ವೇಳೆಯಲ್ಲಿ ನೀಡಿದ ಹೇಳಿಕೆಗಳನ್ನು ಸಮಗ್ರವಾಗಿ ಪರಿಶೀಲಿಸಲಾಯಿತು. ಮೇಲ್ಮನವಿದಾರರು ವೈದ್ಯಕೀಯ ಕಾರಣಗಳ ಹಿನ್ನೆಲೆಯಲ್ಲಿ ರಜೆಯನ್ನು ಕೋರಿ ಅರ್ಜಿ ಕಳುಹಿಸಿರುವುದಾಗಿ ತಿಳಿಸಿರುವುದು ದಾಖಲೆಗಳಲ್ಲಿ ಕಂಡುಬರುತ್ತಿಲ್ಲ. ಸದರಿಯವರಿಗೆ ಇಲಾಖಾ ವಿಚಾರಣೆ ಹೂಡುವ ಕುರಿತು ನೋಟೀಸು ಹಾಗೂ ಆರೋಪಣಾ ಪಟ್ಟಿಗಳನ್ನು ಜಾರಿಗೊಳಿಸಿಲ್ಲದ ಬಗ್ಗೆ ನೀಡಿದ ಹೇಳಿಕೆಯನ್ನು ದಾಖಲೆಗಳಿಂದ ಪರಿಶೀಲನೆ ಮಾಡಲಾಗಿದೆ. ದಿನಾಂಕ: 21.09.2001ರ ಪತ್ರದೊಂದಿಗೆ ಆರೋಪಣಾ ಪಟ್ಟಿ ಹಾಗೂ ಇತರ ಅನುಬಂಧಗಳನ್ನು ಜಿಲ್ಲಾಧಿಕಾರಿಗಳು ನಂಜನಗೂಡು ತಹಶೀಲ್ದಾರ್‌ರವರಿಗೆ ಕಳುಹಿಸಿದ್ದು, ಅದನ್ನು ಕ್ರಮೇಣ ಕಸಬಾ ರಾಜಸ್ವ ನಿರೀಕ್ಷಕರಿಗೆ ಜಾರಿ ಮಾಡಲು ಸೂಚಿಸಿದ ಹಿನ್ನೆಲೆಯಲ್ಲಿ ಶ್ರೀ ರಾಮ್‌ಪ್ರಸಾದ್ ಇವರು ಸದರಿ ತಿಳುವಳಿಕೆ ಪತ್ರವನ್ನು ಸ್ವೀಕರಿಸದೆ ತಿರಸ್ಕರಿಸಿರುವುದರಿಂದ, ಆ ಪತ್ರವನ್ನು ಅವರ ಮನೆ ಬಾಗಿಲಿಗೆ ಚಿಕಟಾಯಿಸಿರುವುದಾಗಿ ಮತ್ತು ಚಿಕಟಾಯಿಸಿದ ಬಗ್ಗೆ ಮಹಜರ್ ಮಾಡಿರುವುದು ದಾಖಲೆಗಳಿಂದ ದೃಢಪಡುತ್ತದೆ. ನಿಯಮಗಳಲ್ಲಿ ಗೊತ್ತುಪಡಿಸಿದ ವಿಧಿ-ವಿಧಾನಗಳ ಪ್ರಕಾರ ಮೇಲ್ಮನವಿದಾರರಿಗೆ ನೋಟೀಸನ್ನು ಜಾರಿ ಮಾಡಿರುವುದು ದೃಢಪಟ್ಟಿರುವುದರಿಂದ ಅವರಿಗೆ ಆರೋಪಣಾ ಪಟ್ಟಿ ಜಾರಿ ಮಾಡಿಲ್ಲವೆಂಬ ವಾದ ಒಪ್ಪಲು ಸಾಧ್ಯವಿಲ್ಲ. ಅದರಂತೆ ಸದರಿಯವರಿಗೆ ವಿಚಾರಣಾಧಿಕಾರಿಗಳ ಮುಂದೆ ಹಾಜರಾಗಲು ಸಾಕಷ್ಟು ತಿಳುವಳಿಕೆಗಳನ್ನು ನೀಡಿದ್ದಾಗ್ಯೂ ಅವರು ಸತತವಾಗಿ ಗೈರು ಹಾಜರಾಗಿರುವುದು ಕಡತದಿಂದ ಕಂಡುಬರುತ್ತದೆ. ವಿಚಾರಣಾ ವರದಿಯ ಪ್ರತಿಯನ್ನು ದಂಡನೆ ವಿಧಿಸುವ ಮುನ್ನ ಮೇಲ್ಮನವಿದಾರರಿಗೆ ಜಾರಿಗೊಳಿಸಲಾಗಿದ್ದು ಅದಕ್ಕೆ ಅವರು ತಮ್ಮ ರಕ್ಷಣಾ ಹೇಳಿಕೆಯನ್ನು ನೀಡಿದ್ದು ದೃಢಪಟ್ಟಿರುತ್ತದೆ. ಸದರಿ ರಕ್ಷಣಾ ಹೇಳಿಕೆಯಲ್ಲಿ ತಾನು ವೈದ್ಯಕೀಯ ಚಿಕಿತ್ಸೆಗೆ ಒಳಗಾಗಿರುವ ವಿಷಯ ತಿಳಿಸಿರುತ್ತಾರೆ. ಆದರೆ ಈ ವಿಷಯ ಸಮರ್ಥಿಸಿಕೊಳ್ಳಲು ಯಾವುದೇ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ. ಅಮಾನತ್ತಿನ ಅವಧಿಗೆ ಸಂಬಂಧಿಸಿದಂತೆ ಸದರಿ ನೌಕರರು ಕೇಂದ್ರ ಸ್ಥಾನದಲ್ಲಿ ವಾಸ ಇಲ್ಲದ ಕಾರಣ ಅವರು ಜೀವನಾಧಾರ ಭತ್ಯೆ ಪಡೆಯಲು ಅರ್ಹರಿಲ್ಲವೆಂದು ಜಿಲ್ಲಾಧಿಕಾರಿಗಳು ತಾಳಿದ ನಿಲುವು ಸಮರ್ಪಕವಾಗಿರುತ್ತದೆ. ಪ್ರಕರಣವನ್ನು ಸಮಗ್ರವಾಗಿ ಪರಿಶೀಲಿಸಿ ನೋಡಿದಾಗ ಶ್ರೀ ರಾಮ್‌ಪ್ರಸಾದ್ ಇವರು ಮೇಲಾಧಿಕಾರಿಗಳಿಂದ ಪೂರ್ವಾನುಮತಿ ಪಡೆಯದೆ ದೀರ್ಘ ಕಾಲದವರೆಗೆ ಅನಧಿಕೃತ ಗೈರು ಹಾಜರಾಗಿ ಸರ್ಕಾರಿ ಹಾಗೂ ಸಾರ್ವಜನಿಕ ಕೆಲಸಕಾರ್ಯಗಳಿಗೆ ತೊಂದರೆ ಉಂಟು ಮಾಡಿ ಕರ್ತವ್ಯ ಲೋಪ ಎಸಗಿರುವುದು ದಾಖಲೆಗಳಿಂದ ಕಂಡುಬರುತ್ತದೆ. ಆದ್ದರಿಂದ ಮೈಸೂರು ಜಿಲ್ಲಾಧಿಕಾರಿಗಳು ಮೇಲ್ಮನವಿದಾರರಿಗೆ ವಿಧಿಸಿದ ದಂಡನೆ ಸಮರ್ಪಕವಾಗಿದೆ ಎಂದು ಮನಗಂಡು ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 236 ಎಂವಿಎಸ್ 2004, ಬೆಂಗಳೂರು, ದಿನಾಂಕ: 28ನೇ ಜನವರಿ, 2005

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಎನ್. ರಾಮ್‌ಪ್ರಸಾದ್, ದ್ವಿದಸ ಇವರ ಮೇಲ್ಮನವಿಯನ್ನು ವಜಾಗೊಳಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಡಿ.ಬಿ. ಗಣಾಚಾರಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-1).

ಪಿ.ಆರ್.182

ವಿಷಯ : ಶ್ರೀ ಬಿ.ಡಿ. ಶ್ರೀಶೈಲ, ತಹಶೀಲ್ದಾರ್, ಇವರನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸಿ ಸ್ಥಳನಿಯುಕ್ತಿ ಆದೇಶ ನೀಡುವ ಬಗ್ಗೆ.

ಓದಲಾಗಿದೆ : ದಿನಾಂಕ: 19.07.2003ರ ಸರ್ಕಾರಿ ಆದೇಶ ಸಂಖ್ಯೆ: ಕಂಇ 10 ಎಡಿಇ 2003.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 19.07.2003ರ ಸರ್ಕಾರಿ ಆದೇಶದಲ್ಲಿ ಶ್ರೀ ಬಿ.ಡಿ. ಶ್ರೀಶೈಲ, ತಹಶೀಲ್ದಾರ್, ಚಾಮರಾಜನಗರ ತಾಲ್ಲೂಕು, ಚಾಮರಾಜನಗರ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ಹೂಡುವುದನ್ನು ಬಾಕಿ ಇರಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ

ಮತ್ತು ಮೇಲ್ಮನವಿ) ನಿಯಮಾವಳಿಗಳ 1957ರ ನಿಯಮ 10(1)(ಡಿ)ರಡಿಯಲ್ಲಿ ಸದರಿ ಆದೇಶದಲ್ಲಿ ತಿಳಿಸಿರುವ ಕಾರಣಗಳಿಗಾಗಿ ಸದರಿಯವರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು.

ಈ ವಿಷಯವನ್ನು ಪುನರ್ ಅವಲೋಕಿಸಿ, ಅವರನ್ನು ಕೂಡಲೇ ಜಾರಿಗೆ ಬರುವಂತೆ ಅಮಾನತ್ತಿನಿಂದ ಬಿಡುಗಡೆಗೊಳಿಸಲು ಸರ್ಕಾರವು ನಿರ್ಧರಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 10 ಎಡಿಇ 2003, ಬೆಂಗಳೂರು, ದಿನಾಂಕ: 25ನೇ ಜನವರಿ, 2005

ಚಾಮರಾಜನಗರ ಜಿಲ್ಲೆ ಚಾಮರಾಜನಗರ ತಾಲ್ಲೂಕು ತಹಶೀಲ್ದಾರರಾಗಿ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಬಿ.ಡಿ. ಶ್ರೀಶೈಲ, ತಹಶೀಲ್ದಾರ್, ಇವರನ್ನು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 10(5)(ಸಿ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಅವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಬಾಕಿಯಿಟ್ಟು ಕೂಡಲೇ ಜಾರಿಗೆ ಬರುವಂತೆ ಅವರನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸಿದೆ.

ಶ್ರೀ ಬಿ.ಡಿ. ಶ್ರೀಶೈಲ, ತಹಶೀಲ್ದಾರ್ ಇವರನ್ನು ಪ್ರಸ್ತುತ ಖಾಲಿ ಇರುವ ಸಕಲೇಶಪುರ ತಾಲ್ಲೂಕು ತಹಶೀಲ್ದಾರರ ಹುದ್ದೆಗೆ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಮಹಂತೇಶಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3).

ಪಿ.ಆರ್.183

ಸುತ್ತೋಲೆ

ಸಂಖ್ಯೆ: ಆರ್‌ಡಿ 240 ಎಡಿಇ 2004, ಬೆಂಗಳೂರು, ದಿನಾಂಕ: 22ನೇ ಜನವರಿ, 2005

ವಿಷಯ : ದ್ವಿತೀಯ ಪಿ.ಯು.ಸಿ. ಪ್ರಶ್ನೆ ಪತ್ರಿಕೆಗಳ ಸುರಕ್ಷತೆಯ ಬಗ್ಗೆ.

ಪ್ರತಿ ವರ್ಷ ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳಲ್ಲಿ ನಡೆಸಲಾಗುವ ಪಿ.ಯು.ಸಿ. ಪ್ರಶ್ನೆ ಪತ್ರಿಕೆಗಳನ್ನು ಖಜಾನೆಯಲ್ಲಿ ಶೇಖರಿಸಲು ಮತ್ತು ಪರೀಕ್ಷಾ ಕೇಂದ್ರಗಳಿಗೆ ವಿತರಿಸಲು ವಿಶೇಷ ಪ್ರಶ್ನೆ ಪತ್ರಿಕಾ ಪಾಲಕರುಗಳಾಗಿ ತಹಶೀಲ್ದಾರರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಪ್ರಾಚಾರ್ಯರುಗಳನ್ನು ಸರ್ಕಾರಿ ಪತ್ರ ಸಂಖ್ಯೆ: ಆರ್‌ಡಿ 137 ಎಎಸ್‌ಜಿ 90, ದಿನಾಂಕ: 28.12.90ರ ಅನುಸಾರ ನೇಮಿಸಲಾಗುತ್ತಿದೆ. ಆದರೆ ಈ ಕಾರ್ಯಕ್ಕೆ ನೇಮಕಾತಿ ಹೊಂದಿದ ಕೆಲವು ತಹಶೀಲ್ದಾರರುಗಳು ಗೈರು ಹಾಜರಾಗುತ್ತಿರುವುದು ಇಲ್ಲವೇ ಅವರ ಬದಲಿಗೆ ಒಬ್ಬರು ಪ್ರತಿನಿಧಿಯನ್ನು ತಾವೇ ನೇಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಪ್ರಶ್ನೆಪತ್ರಿಕೆಗಳನ್ನು ಖಜಾನೆಯಲ್ಲಿ ಶೇಖರಿಸಿ ಪ್ರತಿದಿನ ಆಯಾ ಪರೀಕ್ಷಾ ಕೇಂದ್ರಗಳಿಗೆ ಸರಬರಾಜು ಮಾಡುವ ಕಾರ್ಯವು ಅತ್ಯಂತ ಜವಾಬ್ದಾರಿಯುತ ಹಾಗೂ ಸೂಕ್ಷ್ಮ ವಿಷಯವಾಗಿದೆ. ಅಲ್ಲದೇ ಸದರಿ ಕಾರ್ಯಕ್ಕೆ ನೇಮಕಾತಿ ಹೊಂದಿದ ತಹಶೀಲ್ದಾರರುಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸದೇ ಇದ್ದಲ್ಲಿ ಹಲವಾರು ಸಮಸ್ಯೆಗಳು ಉದ್ಭವವಾಗುತ್ತವೆ. ಆದುದರಿಂದ ಇಂತಹ ಕಾರ್ಯಕ್ಕೆ ನೇಮಕಾತಿ ಹೊಂದಿದ ತಹಶೀಲ್ದಾರರುಗಳು ಮುಂಬರುವ ಪರೀಕ್ಷೆಗಳಲ್ಲಿ ತಪ್ಪದೇ ಸ್ವತಃ ನೇಮಕಾತಿ ಹೊಂದಿದ ತಹಶೀಲ್ದಾರರುಗಳೇ ಪ್ರಶ್ನೆ ಪತ್ರಿಕೆಗಳ ಸುರಕ್ಷತೆ ಮತ್ತು ವಿತರಣಾ ಕಾರ್ಯವನ್ನು ಜವಾಬ್ದಾರಿಯುತವಾಗಿ ನಿರ್ವಹಿಸಲು ಈ ಮೂಲಕ ರಾಜ್ಯದ ಎಲ್ಲಾ ತಹಶೀಲ್ದಾರರುಗಳಿಗೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ತಪ್ಪಿದಲ್ಲಿ ಸೂಕ್ತ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು.

ಮಾಜ್ ಅಹಮದ್ ಷರೀಫ್
ಸರ್ಕಾರದ ಉಪಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು).

ಪಿ.ಆರ್.184

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಬೀದರ್ ಜಿಲ್ಲೆ, ಹುಮ್ನಾಬಾದ್ ಪಟ್ಟಣದ ವ್ಯಾಪಕಾಭಿವೃದ್ಧಿ ಯೋಜನೆಗೆ ಸರ್ಕಾರದ ತಾತ್ಕಾಲಿಕ ಅನುಮೋದನೆಯನ್ನು ನೀಡುವ ಬಗ್ಗೆ.

ಓದಲಾಗಿದೆ :
1. ದಿನಾಂಕ: 02.09.1996 ಅಧಿಸೂಚನೆ ಸಂಖ್ಯೆ ನಅಇ 355 ಟಿಟಿಪಿ 96.
2. ಮುಖ್ಯಾಧಿಕಾರಿಗಳು, ಪುರಸಭೆ ಯೋಜನಾ ಪ್ರಾಧಿಕಾರ, ಹುಮ್ನಾಬಾದ್, ಇವರ ಪತ್ರ ಸಂಖ್ಯೆ: ಪುನಹ:ವಿವಿಧ: ಸ್ಥೂಲಾಭಿ:ಯೋಜನೆ:2002-03:926, ದಿನಾಂಕ: 11.03.2003.
3. ನಿರ್ದೇಶಕರು, ನಗರ ಯೋಜನೆ ಇಲಾಖೆ ಇವರ ಏಕ ಕಡತ ಸಂ.ನಯೋ(1):505:ಸ್ಥೂಅಯೋ/2004, ದಿನಾಂಕ: 31.03.2004.

ಪ್ರಸ್ತಾವನೆ:

ಮೇಲೆ ಓದಲಾದ (1)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಬೀದರ್ ಜಿಲ್ಲೆ, ಹುಮ್ನಾಬಾದ್ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಮುಖ್ಯಾಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿ, ಯೋಜನಾ ಪ್ರಾಧಿಕಾರ, ಪುರಸಭೆ, ಹುಮ್ನಾಬಾದ್, ಇವರು ಬೀದರ್ ಜಿಲ್ಲೆ, ಹುಮ್ನಾಬಾದ್ ಪಟ್ಟಣ ಸ್ಥೂಲಾಭಿವೃದ್ಧಿ ಯೋಜನಾ ನಕ್ಷೆ ಹಾಗೂ ವರದಿಯ ಯೋಜನೆಯನ್ನು ತಯಾರಿಸಿ ತಾತ್ಕಾಲಿಕ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

2001ರ ಜನಗಣತಿಯಂತೆ ಹುಮ್ನಾಬಾದ್ ಪಟ್ಟಣದ ಜನಸಂಖ್ಯೆಯು 36511 ರಷ್ಟಿದ್ದು, 20 ವರ್ಷಗಳ ಯೋಜನಾ ಅವಧಿಗೆ, ಅಂದರೆ 2021ರ ವೇಳೆಗೆ ಜನಸಂಖ್ಯೆಯು 73833 ಆಗಬಹುದೆಂದು ಅಂದಾಜಿಸಿ, ಸ್ಥೂಲಾಭಿವೃದ್ಧಿ ಯೋಜನೆಯನ್ನು ರೂಪಿಸಲಾಗಿದೆ. ಹುಮ್ನಾಬಾದ್ ಪಟ್ಟಣದ ಜನಸಂಖ್ಯೆ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ, ಹವಾಗುಣ, ರಸ್ತೆಗಳ ಹಾಲಿ ಪರಿಚಲನಾ ವ್ಯವಸ್ಥೆಯ ಸಮಸ್ಯೆಗಳನ್ನು ವಿಶ್ಲೇಷಿಸಿ ಯೋಜನಾ ತತ್ವ ಹಾಗೂ ಸ್ಥೂಲಾಭಿವೃದ್ಧಿ ಯೋಜನೆ ತಯಾರಿಕೆ ಬಗ್ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಪ್ರಕರಣ (12)ರಲ್ಲಿ

ನಿಗದಿಪಡಿಸಿರುವ ಅಂಶಗಳನ್ನು ಪರಿಗಣಿಸಿ ಪಟ್ಟಣದ ಮುಂದಿನ ಬೆಳವಣಿಗೆಗೆ ವಿವಿಧ ಉಪಯೋಗಗಳಿಗೆ ಬೇಕಾಗಬಹುದಾದ ಜಾಗಗಳನ್ನು ಕಾಯ್ದಿರಿಸಿ ಸ್ಥೂಲಾಭಿವೃದ್ಧಿ ಯೋಜನೆಯನ್ನು ತಯಾರಿಸಲಾಗಿದ್ದು, ಕೆ.ಟಿ.ಸಿ.ಪಿ. ಕಾಯ್ದೆ, 1961ರ ಕಲಂ 13 (1) ರನ್ವಯ ಸರ್ಕಾರದ ತಾತ್ಕಾಲಿಕ ಅನುಮೋದನೆ ನೀಡುವಂತೆ ನಗರ ಯೋಜನಾ ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಈ ವಿಷಯವನ್ನು ಕೂಲಂಕುಷವಾಗಿ ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 22 ಗುಅಪ್ರಾ 2003, ಬೆಂಗಳೂರು, ದಿನಾಂಕ: 12ನೇ ಜನವರಿ, 2005

ಬೀದರ್ ಜಿಲ್ಲೆ, ಹುಮ್ನಾಬಾದ್ ಸ್ಥಳೀಯ ಸ್ಥೂಲಾಭಿವೃದ್ಧಿ ಯೋಜನಾ ಪ್ರದೇಶಕ್ಕೆ ತಯಾರಿಸಲಾಗಿರುವ ತಾತ್ಕಾಲಿಕ ಸ್ಥೂಲಾಭಿವೃದ್ಧಿ ಯೋಜನೆಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 13(1) ರನ್ವಯ ಸರ್ಕಾರವು ತಾತ್ಕಾಲಿಕ ಅನುಮೋದನೆ ನೀಡಿದೆ.

1. ನಗರ ಯೋಜನಾ ಇಲಾಖೆಯ ಕಡತ ಸಂ.ನಯೋ: ಉನಿ: (ಯೋವಿ), ಅನುಮೋದನೆ: ಮಾರ್ಗಸೂಚಿ:2003-04, ದಿನಾಂಕ: 28.02.2004 ರಂದು ಸರ್ಕಾರಕ್ಕೆ ಸಲ್ಲಿಸಲಾಗಿರುವ ವಸತಿ ವಿನ್ಯಾಸ ಮತ್ತು ವಸತಿಯೇತರ ವಿನ್ಯಾಸ ಹಾಗೂ ಏಕನಿವೇಶನ ವಸತಿ ವಿನ್ಯಾಸಗಳಲ್ಲಿ ಶೇಕಡವಾರು ಬಯಲು ಜಾಗ ಮತ್ತು ನಾಗರೀಕ ಸೌಲಭ್ಯಗಳ ವಿಸ್ತೀರ್ಣವನ್ನು ನಿಗದಿಪಡಿಸುವ ಸಂಬಂಧ ಸಿದ್ದಪಡಿಸಲಾದ ಮಾರ್ಗಸೂಚಿಗಳನ್ನು ಸ್ಥೂಲಾಭಿವೃದ್ಧಿ ಯೋಜನೆಯ ವಲಯ ನಿಯಮಾವಳಿಯಲ್ಲಿ ಸೂಕ್ತವಾಗಿ ಅಳವಡಿಸಿಕೊಳ್ಳತಕ್ಕದ್ದು. (ಅನುಬಂಧ-3).

2. ಹುಮ್ನಾಬಾದ್ ಸ.ನಂ. 137/ಎ1, ಸಂ. ನಂ.137/ಎ-2ರ ಕ್ಷೇತ್ರ 3 ಎಕರೆ 38 ಗುಂಟೆ ಹಾಗೂ 4 ಎಕರೆ 37 ಗುಂಟೆ ಜಮೀನನ್ನು ಈಗಾಗಲೇ ಜಿಲ್ಲಾಧಿಕಾರಿಗಳು, ಹುಮ್ನಾಬಾದ್ ಇವರು ದಿನಾಂಕ: 04.10.2002 ಹಾಗೂ ದಿನಾಂಕ: 12.10.2003 ಕ್ರಮವಾಗಿ ವಸತಿಗಾಗಿ ಅನ್ಯಕ್ರಾಂತವಾಗಿರುವುದರಿಂದ ಮೇಲ್ಕಂಡ ಪ್ರದೇಶಗಳನ್ನು ಸ್ಥೂಲಾಭಿವೃದ್ಧಿ ಯೋಜನೆಯಲ್ಲಿ ಉದ್ಯಾನವನ ಮತ್ತು ಬಯಲು ಜಾಗ ಭೂ ಉಪಯೋಗದಿಂದ ವಸತಿ ಭೂ ಉಪಯೋಗಕ್ಕೆ ಕಾಯ್ದಿರಿಸತಕ್ಕದ್ದು.

3. ವಲಯ ನಿಯಮಾವಳಿಯಲ್ಲಿ ಶಾರೀರಿಕ ಅಂಗವಿಕಲತೆ ಹೊಂದಿರುವವರಿಗಾಗಿ ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ಕಟ್ಟಡಗಳಲ್ಲಿ ಒದಗಿಸಬೇಕಾದ ಸೌಲಭ್ಯಗಳನ್ನು ಅಳವಡಿಸಿಕೊಳ್ಳತಕ್ಕದ್ದು. (ಅನುಬಂಧ-4).

4. ವಲಯ ನಿಯಮಾವಳಿಯಲ್ಲಿ ಹೆಚ್ಚುವರಿ ವಿದ್ಯುತ್ ವಾಹಕ ತಂತಿಗಳು ಹಾದು ಹೋಗಿರುವಂತಹ ಕಡೆಗಳಲ್ಲಿ ಕಟ್ಟಡದಿಂದ ವಿದ್ಯುತ್ ವಾಹಕ ತಂತಿಗಳ ಮಧ್ಯೆ ಬಿಡಬೇಕಾದ ಎತ್ತರ ಮತ್ತು ದೂರಗಳನ್ನು ಅಳವಡಿಸಿಕೊಳ್ಳತಕ್ಕದ್ದು. (ಅನುಬಂಧ-5).

5. ವಲಯ ನಿಯಮಾವಳಿಯಲ್ಲಿ ಸೌರ ಶಕ್ತಿಯಿಂದ ವಿದ್ಯುತ್ ದೀಪ ಹಾಗೂ ನೀರು ಕಾಯಿಸುವಿಕೆಗೆ ಬೇಕಾದ ಅಗತ್ಯ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳತಕ್ಕದ್ದು. (ಅನುಬಂಧ-6).

6. ವಲಯ ನಿಯಮಾವಳಿಯಲ್ಲಿ ಕಟ್ಟಡ ನಿರ್ಮಾಣ ಸಂದರ್ಭಗಳಲ್ಲಿ ಭೂಕಂಪ ನಿರೋಧಕ ಭದ್ರತಾ ಕ್ರಮಗಳನ್ನು ಅಳವಡಿಸಿಕೊಳ್ಳತಕ್ಕದ್ದು. (ಅನುಬಂಧ-7).

7. ವಲಯ ನಿಯಮಾವಳಿಯಲ್ಲಿ ಮಳೆ ನೀರು ಶೇಖರಣೆಗಾಗಿ ಅಗತ್ಯ ನಿಯಮಾವಳಿಗಳನ್ನು ಅಳವಡಿಸಿಕೊಳ್ಳತಕ್ಕದ್ದು. (ಅನುಬಂಧ-8).

ಹುಮ್ನಾಬಾದ್ ಪಟ್ಟಣದ ಸ್ಥೂಲಾಭಿವೃದ್ಧಿ ಯೋಜನೆಗೆ ತಾತ್ಕಾಲಿಕ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ವಿ. ಶ್ರೀಧರಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.

ಅನುಬಂಧ-3

1. Exemption for open space and civic amenities in sub-division of land.

i) Subject to the provisions of ODP in respect of land use proposed roads and minimum road width, whenever the total extent of land of the private residential layout for approval by the Planning Authority is 4000 sq.m (0.40 hectares) and below, reservation of open space and civic amenities areas as per the Zoning Regulations/ Sub Division Rules may be dispensed with.

ii) In lieu of this, the Planning Authority may collect the market value of converted equivalent land as fixed by the Sub-Registrar.

iii) The value to be recovered from the land owner in lieu of open space and civic amenities shall be in addition to the fee to be collected under Section 18 of the K.T.C.P. Act, development charges and any other fees/ charges prescribed by the Government from time to time.

iv) The Planning Authority shall deposit the amount so collected under a separate Head of Account and the amount shall be utilised only for acquisition of areas reserved as parks and open spaces in the approved ODP. The Planning Authority shall, under no circumstances divert this amount for any other purposes.

v) In case the land owner refused to pay the market value of the equivalent land in lieu of open space and civic amenity to be reserved the Planning Authority shall approve the Sub-Division in accordance with the provisions of prevailing Zoning Regulations and shall take possession of such an extent of equivalent land at free of cost from the land owner and the Authority may dispose the same through auction for the purpose decided by the Authority.

vi) These rules shall come in to force from the date of approval of ODP by the Government and shall not be invoked from retrospective effect.

II. Approval of non-residential private layouts.

A. If the private non-residential layout for approval consists of only one single unit, approval shall be given subject to the following conditions.

i) 5% of the total extent of land shall be reserved for vehicle parking and this shall be in addition to the parking space prescribed in the Zoning Regulations as per the total floor area of the building.

ii) 10% of the total extent shall be earmarked as open space.

iii) The area reserved for vehicle parking and open space shall be maintained by the land owner and this land shall not be used for any other purpose by the land owner.

iv) The Planning Authority shall collect the fee under section 18 of KTCP Act and development charges applicable and any other fees and charges prescribed by the Government from time to time.

B. If the private non-residential layout for approval consists of two or more number of plots the following conditions shall apply:

i) 5% of the total extent of land shall be reserved for vehicle parking and this shall be in addition to the parking space prescribed in the Zoning Regulations as per the total floor area of the building.

ii) 10% of the total extent of land shall be earmarked as open space.

iii) The area earmarked for parking and open space and roads shall be handed over to the local authority at free of cost for maintenance.

iv) The Planning Authority shall collect the fee under section 18 of KTCP Act and development charges and any other fees and charges prescribed by the Government from time to time.

III. Approval of single plot for residential purpose.

Any extent of land can be approved as single plot subject to the following conditions.

(a) The land in question shall be converted for non-agricultural purpose.

(b) The land shall have access from the public road and the use of land shall be in accordance with the Zoning Regulations of the ODP.

(c) The necessary development charges shall be paid to the concerned/ Local Authority. This fee is in addition to recovery of fee under section 18 of K.T.C.P. Act and other fees/ charges prescribed by the Government from time to time.

(d) If the owner of Single plot desires to sub-divide the plot at subsequent dates, he shall obtain approval by the Authority treating it as sub-division of land and the norms applies accordingly as prescribed in the Zoning Regulations.

ಅನುಬಂಧ-4

Facilities for physically handicapped persons

1. These byelaws shall apply to the physically handicapped persons having the following disabilities.-
   a. **Non-ambulatory disabilities:** Impairments that regardless of cause or manifestation, for all practical purposes, confine individuals to wheelchairs;
   b. **Semi-ambulatory disabilities:** Impairments that cause individuals to walk difficulty or insecurity. Individuals using braces or crutches, amputees, arthritics, spastics, and those with pulmonary land cardiac ills may be sent ambulatory.
   c. **Hearing disabilities:** Deafness or hearing handicaps that make an individual insecure in public areas because he is unable to communicate or hear warning signals.
   d. **Sight disabilities:** Total blindness or impairments affecting sight to the extent that the individual functioning in public areas is insecure or exposed to danger.
2. **Access path/ walk way:** The width of access path/ walk way from plot entry and surface parking to the building entry shall not be less that 1.80 m. It shall not have a gradient exceeding 5%.
3. **Surface parking:** At least two car spaces shall be provided at surface level near entrance with maximum travel distance of 30.00 m from the building entrance.
4. **Space for wheel chair users:** Adequate space shall be kept for the free movement of wheel chairs. The standard size of wheel chairs shall be taken as 1050 mm x 750 mm the doors shall have a minimum width of 900 mm to facilitate the free movement of wheel chairs.

5. **Approval to plinth level:** At least one entrance shall have approach through a ramp. The ramp shall have a minimum width of 1.80 m with maximum gradient of 1:10.
6. **Entrance landing:** Entrance landing shall be provided adjacent to ramp with the minimum dimension of 1.80 m x 2.00 m.
7. **Corridors:** The minimum width of corridors shall be 1.80 m.
8. **Staircase:** The minimum width of staircases shall be 1.50 m. The minimum number of risers on a flight shall be limited to 12. Size of treads shall not be less than 30 cm and the height of risers shall not be more than 15 cm.
9. **Lifts:**
   i. Wherever lifts are required to be installed as per byelaws, provision of at least one lift shall be made for the wheel chair users with the following cage dimensions recommended for passenger lifts of 13 persons capacity by Bureau of Indian Standards.
      a. Clear internal depth 1100 mm (1.10 m)
      b. Clear internal width 2000 m (2.00 m)
      c. Entrance door width 900 mm (0.90)
   ii. The lift lobby shall have a minimum inside measurement of 1.80 m x 1.80 m.
10. **Toilets:** One special water closet in a set of toilets shall be provided for the use of handicapped persons with wash basin keeping in view the following provisions.-
    i. The minimum size of toilet shall be 1.50 m x 1.75 m.
    ii. The maximum height of the W.C. set shall be 0.50 m above the floor.

    Hand rails: Hand rails shall be provided for ramps, staircases, lifts and toilets. The height of hand rails shall be normally 800 mm above the floor level. If the.
11. building is meant for the predominant use of children, the height of hand rails may be suitably altered.
12. **Guiding/ Warning floor material:** The floor material to guide or to warn the visually impaired persons with a change of colour or material with conspicuosuly different texture and easily distinguishable from the rest of the
13. surrounding floor materials is called guiding or warning floor material. The material with different texture shall give audible signals with sensory warning when person moves on this surface with walking stick. The guiding/ warning floor material is meant to give the directional effect or warn a person at critical places.

    This floor material shall be provided in the following areas;
    i. The access path to the building and to the parking area;
    ii. The landing lobby towards the information board, reception, lifts, staircase and toilets;
    iii. At the beginning/ end of walkway where there is vehicular traffic;
    iv. At the location abruptly changing in level and at the beginning/ end of ramp;
    v. At the entrance/ exit of the building.
14. **Proper signange:** Appropriate identification of specific facilities within a building for the handicapped persons should be done with proper signage. Visually impaired persons make use of other senses such as hearing and touch to compensate for the lack of vision; where as visual signals shall benefit those with hearing disabilities.

Signs should be designed and located such that they are easily legible by using suitable letter size (not less than 20 mm size). For visually impaired persons, information board in Braille should be installed on the wall at a suitable height and it should be possible to approach them closely. To ensure safe walking there should not be any protruding sign, which creates obstruction in walking.

The symbols/ illustrations should be in contrasting colour and properly illuminated so that with limited vision one may be able to differentiate amongst primary colours.

ಅನುಬಂಧ-5

DISTANCE OF BUILDING FROM ELECTRICAL LINES

No building shall be erected below an electrical line, as well as within the horizontal distance from the electrical line indicated in the Table-8. The vertical distance below the level of the electrical line and the topmost surface of the building corresponding to the minimum horizontal distance, shall be as indicated in Table-8 The minimum vertical clearance is not applicable if the horizontal distance exceeds the minimum prescribed.

TABLE-8

Distance of buildings from electrical lines

Sl. No.	Electrical lines	Vertical clearance in m	Horizontal clearance in m
1.	Low land medium voltage line service lines up to 11 KV	2.5	1.2
2.	High voltage lines up to and including 11 KV	3.7	1.2
3.	High Voltage line above 11 and up to and including 33 KV	3.7	2.0

ಅನುಬಂಧ-6

SOLAR WATER HEATER REQUIREMENTS

Solar water heaters shall be provided as per the table for different categories of buildings.

TABLE-9

Solar lighting and water heater requirements

Sl. No.	Type of use	100 litres per day shall be provided for every unit
1.	Restaurants service food and drinks with seating/ serving area of more than 100 sq m and above.	40 sq m of seating or serving area.
2.	Lodging establishments and tourist homes	3 rooms
3.	Hostel and guest houses	6 beds/ persons capacity
4.	Industrial canteens	50 workers
5.	Nursing homes and hospitals	4 beds
6.	Kalyana Mantapas, community hall and convention hall (with dining hall and kitchen)	30 sq m of floor area
7.	Recreational clubs	100 sq m of floor area
8.	Residential buildings:	
	(a) Single dwelling unit measuring 200 sq m of floor area or site area of more than 400 sq m whichever is more.	
	(b) 500 lpd for multi dwelling unit/ apartments for every 5 units and multiples thereof.	
9.	Solar photovoltaic lighting systems shall be installed in multi unit residential buildings (with more than five units) for lighting the set back areas, drive ways, and internal corridors.	

ಅನುಬಂಧ-7

SAFETY MEASURES AGAINST EARTHQUAKE IN BUILDING CONSTRUCTION

Buildings with ground plus four floors and above or buildings with a height of 15 m and above shall be designed and constructed adopting the norms prescribed in the National Building Code and into the "criteria for earthquake resistant design of structures" bearing No. IS 1893-2002 published by the Bureau of Indian Standards, making the buildings resistant to earthquake? The supervision certificate and the completion certificate of every such building shall contain a certificate recorded by the registered engineer/ architect that the norms of the National Building Code and IS No.1893-2002 have been followed in the design and construction of buildings for making the buildings resistant to earthquake.

ಅನುಬಂಧ-8

RAIN WATER HARVESTING

1. Every building with a plinth area of exceeding 100 sq m and built on a site measuring not less than 200 sq m shall have one or more rain water harvesting structures having a minimum total capacity as detailed in Schedule-III.

   Provided that the authority may approve the rainwater harvesting structures of specifications different from those in Schedule-III. Subject to the minimum capacity of rain water harvesting is being ensured in each case.

2. The owner of every building shall ensure that the rainwater harvesting structure is maintained in good repaid for storage of water for non-potable purposes or recharge of ground water at all times.

SCHEDULE-III

Rain Water Harvesting

Rain water harvesting in a building site includes storage or recharging into ground of rain water falling on the terrace or on any paved or unpaved surface within the building site.

The following systems may be adopted for harvesting the rain water drawn from terrace and the paved surface.

1. Open well of a minimum of 1.00 m dia and 6.00 m in depth into which rain water may be channelled and allowed after filtration for removing silt and floating material. The well shall be provided with ventilating covers. The water from the open well may be used for non potable domestic purposes such as washing, flushing and for watering the garden, etc.
2. Rainwater harvesting for recharge of ground water may be done through a bore well around which a pit of one meter width may be excavated up to a depth of at least 3.00 m and refilled with stone aggregate and sand. The filtered rain water may be channelled to the refilled pit for recharging the bore well.
3. An impervious storage tank of required capacity may be constructed in the setback or other than space and the rain water may be channelled to the storage tank. The storage tank may be raised to a convenient height above the surface and shall always be provided with ventilating the surface and shall always be provided with ventilating covers and shall have draw off taps suitably place so that the rain water may be drawn off for domestic, washing, gardening and such other purposes. The storage tanks shall be provided with an overflow.
4. The surplus rain water after storage may be recharged into ground through percolation pits or trenches or combination of pits and trenches. Depending on the geomorphologic and topographical condition, the pits may be of the size of 1.20 m width x 1.20 m length x 2.00 m to 2.50 m depth. The trenches can be or 0.60 m width x 2.00m to 6.00 m length x 1.50 m to 2.00 depth. Terrace water shall be channelled to pits or trenches. Such pits or trenches shall be backfilled with filter media comprising the following materials.-
   - i. 40 mm stone aggregate as bottom layer up to 50% of the depth;
   - ii. 20 mm stone aggregate as lower middle layer up to 20% of the depth;
   - iii. Course sand as upper middle layer up to 20% of the depth;
   - iv. A thin layer of fine sand as top layer;
   - v. Top 10% of the pits/ trenches will be empty and a splash is to be provided in this portion in such a way that roof top water falls on the splash pad;
   - vi. Brick masonry wall is to be constructed on the exposed surface of pits/ trenches and the cement mortar plastered;
   - vii. The depth of wall below ground shall be such that the wall prevents lose soil entering into pits/ trenches. The projection of the wall above ground shall at least be 15 cm;
   - viii. Perforated concrete slabs shall be provided on the pits/ trenches.
5. If the open space surrounding the building is not paved, the top layer up to a sufficient depth shall be removed land refilled with courses and to allow percolation of rain water into ground.

The terrace shall be connected to the open well/ bore well/ storage tank/ recharge pit/ trench by means of H.D.P.E. / P.V.C. pipes through filter media. A valve system shall be provided to enable the first washings from roof or terrace catchments, as they would contain undesirable dirt. The mouths of all pipes and opening shall be covered with mosquito (insect) proof wire net. For the efficient discharge of rain water, there shall be at least two rain water pipes of 100 mm dia for a roof area of 100 sq m.

Rain water harvesting structures shall be sited as not to endanger the stability of building or earthwork. The structures shall be designed such that dampness is caused in any part of the walls or foundation of the building or those of an adjacent building.

ವಿ. ಶ್ರೀಧರಮೂರ್ತಿ

ಪಿ.ಆರ್.185 ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.

ಕಂದಾಯ ಸಚಿವಾಲಯ

ವಿಷಯ : ಅಖಿಲ ಭಾರತ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟ, ಬೆಂಗಳೂರು ಇದಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಕುರಿತು ಆದೇಶ.

ಓದಲಾಗಿದೆ : 1. ಜಿಲ್ಲಾ ನೋಂದಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಇವರ ಪತ್ರ ಸಂಖ್ಯೆ: ರಿ.ಸಂ. 910/1992-93, ದಿನಾಂಕ: 31.05.2004, 09.07.2004 ಮತ್ತು 17.11.2004.

2. ಒಕ್ಕೂಟದ ಅಧ್ಯಕ್ಷರು ಮತ್ತು ಪ್ರತಿವಾದಿಯವರಿಗೆ ಜಾರಿ ಮಾಡಲಾದ ಕಾರಣ ಕೇಳುವ ಸೂಚನಾ ಪತ್ರ ಸಂಖ್ಯೆ: ಕಂ.ಇ. 27 ಮುನೊಸೊ 2004 ದಿನಾಂಕ: 28.08.2004.
3. ಒಕ್ಕೂಟದ ಅಧ್ಯಕ್ಷರು ಕಾರಣ ಕೇಳುವ ಸೂಚನಾ ಪತ್ರಕ್ಕೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 15.09.2004.
4. ಪ್ರತಿವಾದಿಯವರು ಕಾರಣ ಕೇಳುವ ಸೂಚನಾ ಪತ್ರಕ್ಕೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 04.10.04.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಪತ್ರಗಳಲ್ಲಿ ಜಿಲ್ಲಾ ನೋಂದಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ಸಲ್ಲಿಸಿರುವ ವರದಿಯಲ್ಲಿ ಅಖಿಲ ಭಾರತ ಹಿಂದೂ ದೇವಾಲಯಗಳ ಅರ್ಚಕರ ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟ, ಬೆಂಗಳೂರು ಈ ಸಂಘವು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರನ್ವಯ ನೋಂದಾಯಿಸಲ್ಪಟ್ಟಿದ್ದು, ಸದರಿ ಸಂಘದ ವಿರುದ್ಧ ದೂರುಗಳು ಬಂದ ಹಿನ್ನೆಲೆಯಲ್ಲಿ ಜಿಲ್ಲಾ ನೋಂದಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ಕಾಯ್ದೆಯ ಕಲಂ -25ರಡಿ ವಿಚಾರಣೆ ನಡೆಸಿದ್ದು, ಈ ಸಂಘದಲ್ಲಿ ಎರಡು ಗುಂಪುಗಳಿದ್ದು, ಎರಡೂ ಗುಂಪುಗಳು ಅವರವರಿಗೆ ಸರಿಕಂಡ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಂಘದ ಲೆಕ್ಕಪತ್ರಗಳನ್ನು ಸರಿಯಾಗಿ ನಿರ್ವಹಿಸದೆ ಸಂಘದ ಬೈಲಾವನ್ನು ಉಲ್ಲಂಘಿಸಿರುವುದರ ಜೊತೆಗೆ ದಿನಾಂಕ: 31.03.2002ರ ನಂತರ ಸಂಘದ ಲೆಕ್ಕಪತ್ರ ಹಾಗೂ ಕಾರ್ಯಕಾರಿ ಸಮಿತಿಯ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ, ಹಾಗೂ ಎರಡೂ ಗುಂಪುಗಳು ಕ್ರಮವಾಗಿ ದಿನಾಂಕ: 22.04.2003 ಮತ್ತು 24.04.2003ರಂದು ಸರ್ವಸದಸ್ಯರ ಸಭೆ ನಡೆಸಿ 2002-03ನೇ ಸಾಲಿನ ಲೆಕ್ಕಪತ್ರಗಳನ್ನು ದಾಖಲಿಸಲು ಶುಲ್ಕವನ್ನು ಪಾವತಿ ಮಾಡಿರುತ್ತಾರೆ. ಆದ ಕಾರಣ ಸದರಿ ಲೆಕ್ಕಪತ್ರಗಳನ್ನು ದಾಖಲಿಸಿಕೊಳ್ಳಲಾಗಿಲ್ಲ. ಮೇಲ್ಕಂಡ ಸದರಿ ಸಂಘವನ್ನು ಸರಿದಾರಿಗೆ ತರುವ ದೃಷ್ಟಿಯಿಂದ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ-27ಎ ಪ್ರಕಾರ ಆಡಳಿತಾಧಿಕಾರಿಯನ್ನು ನೇಮಿಸುವುದು ಸೂಕ್ತವೆಂದು ಅಭಿಪ್ರಾಯ ನೀಡಿರುತ್ತಾರೆ.

ಜಿಲ್ಲಾ ನೋಂದಣಾಧಿಕಾರಿಯವರ ವರದಿಯನ್ನು ಪರಿಶೀಲಿಸಿ, ಸರ್ಕಾರವು ಮೇಲೆ ಓದಲಾದ(2)ರಲ್ಲಿ ಸಂಘದ ಅಧ್ಯಕ್ಷರು ಮತ್ತು ಪ್ರತಿವಾದಿಗೆ ಕಾರಣ ಕೇಳುವ ಸೂಚನಾ ಪತ್ರವನ್ನು ದಿನಾಂಕ: 28.08.2004ರಂದು ಜಾರಿ ಮಾಡಿ, ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಕ ಮಾಡಬಾರದು ಎಂಬ ಬಗ್ಗೆ ವಿವರಣೆ ಕೇಳಲಾಗಿತ್ತು.

ಮೇಲೆ ಓದಲಾದ-(3) ಮತ್ತು (4)ರಲ್ಲಿ ಸಂಘದ ಅಧ್ಯಕ್ಷರು ಮತ್ತು ಪ್ರತಿವಾದಿಯವರು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ಒಬ್ಬರ ಮೇಲೊಬ್ಬರು ಆರೋಪ ಮತ್ತು ಪ್ರತ್ಯಾರೋಪವನ್ನು ಮಾಡಿದ್ದು, ಈ ಇಬ್ಬರೂ ಜಿಲ್ಲಾ ನೋಂದಣಾಧಿಕಾರಿಯವರು ಕಾಯ್ದೆಯ ಕಲಂ-25ರಡಿ ಕೈಗೊಳ್ಳಲಾದ ತನಿಖಾ ವರದಿಯನ್ನು ಅಲ್ಲಗಳೆದಿರುತ್ತಾರೆ. ಅಲ್ಲದೆ ಈ ಇಬ್ಬರೂ ಸಲ್ಲಿಸಿರುವ ಕ್ರಮವಾಗಿ ದಿನಾಂಕ: 22.04.2004 ಮತ್ತು 24.04.2004ರಂದು ಪ್ರತ್ಯೇಕವಾಗಿ ನಡೆಸಿದ ಸರ್ವ ಸದಸ್ಯರ ಸಭೆಯ ನಡವಳಿ, ಲೆಕ್ಕಪತ್ರ ಹಾಗೂ ಕಾರ್ಯಕಾರಿ ಸಮಿತಿಯನ್ನು ಅಂಗೀಕರಿಸಿ ಸಂಘದ ಆಡಳಿತವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಅನುವು ಮಾಡಿಕೊಡುವಂತೆ ಕೋರಿರುತ್ತಾರೆ. ಈ ಮೇಲ್ಕಂಡ ಹೇಳಿಕೆಗಳನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿದ್ದು, ಸಂಸ್ಥೆಯ ಅಧ್ಯಕ್ಷರು ಮತ್ತು ಪ್ರತಿವಾದಿಯು ಸಲ್ಲಿಸಿರುವ ಹೇಳಿಕೆಯು ಸಮರ್ಥನೀಯವಾಗಿಲ್ಲವೆಂದು ಕಂಡು ಬಂದ ಕಾರಣ ಹಾಗೂ ಸಂಘವು ಕಾಯ್ದೆಯ ಕಲಂ 11, 12 ಮತ್ತು 13ನ್ನು ಉಲ್ಲಂಘಿಸಿರುವುದರಿಂದ ಅಖಿಲ ಭಾರತ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟ, ಬೆಂಗಳೂರು ಈ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960ರ ಕಲಂ-27ಎ ಪ್ರಕಾರ ಸಹಾಯಕ ಆಯುಕ್ತರು, ಮುಜರಾಯಿ, ಕಾಮಗಾರಿಗಳು, ನಗರ ಸಭಾವಲಯ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು-1, ಇವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಲು ಸರ್ಕಾರವು ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 27 ಮುನೋಸೊ 2004, ಬೆಂಗಳೂರು, ದಿನಾಂಕ: 20ನೇ ಜನವರಿ, 2005

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಅಖಿಲ ಭಾರತ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟ, ಬೆಂಗಳೂರು ಈ ಸಂಘಕ್ಕೆ ಸಾರ್ವಜನಿಕರ ಹಿತದೃಷ್ಟಿಯಿಂದ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960ರ ಕಲಂ-27ಎ ಪ್ರಕಾರ ನಿಯಮಿತವಾದ ಅಧಿಕಾರವನ್ನು ಚಲಾಯಿಸಿ, ಸಹಾಯಕ ಆಯುಕ್ತರು, ಮುಜರಾಯಿ, ಕಾಮಗಾರಿಗಳು, ನಗರ ಸಭಾವಲಯ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು-1, ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ 6 ತಿಂಗಳ ಅವಧಿಗೆ ಅಥವಾ ಸಂಘಕ್ಕೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವವರೆಗೆ ಅಥವಾ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸಿದೆ.

ಆಡಳಿತಾಧಿಕಾರಿಯವರು ನಿಗದಿತ ಅವಧಿಯೊಳಗಾಗಿ ಸಂಘದ ಅವ್ಯವಹಾರಗಳನ್ನು ಸರಿಪಡಿಸಿ, ಸಂಘಕ್ಕೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರ ಮಾಡಬೇಕೆಂದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಪಿ. ಮಂಜುನಾಥ್
ಪೀಠಾಧಿಕಾರಿ,
ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ).

ಪಿ.ಆರ್.186

ವಿಷಯ : ಶ್ರೀ ವಿ.ಎನ್. ರೇವಣ್ಣರ್, ಹಿಂದಿನ ತಹಶೀಲ್ದಾರ್, ಚೆನ್ನಪಟ್ಟಣ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಲಿ ನಿವೃತ್ತರು ಇವರ ವಿರುದ್ಧ ಇಲಾಖಾ ವಿಚಾರಣೆ- ಇವರಿಗೆ ದಂಡನೆ ವಿಧಿಸುವ ಕುರಿತು.

ಓದಲಾಗಿದೆ :
1. ದಿನಾಂಕ: 10.01.2002ರ ಸರ್ಕಾರಿ ಆದೇಶ ಸಂಖ್ಯೆ: ಕಂಇ 59 ಎಡಿಇ 2001 (2).
2. ದಿನಾಂಕ: 07.02.2002ರ ಗೌರವಾನ್ವಿತ ಉಪ ಲೋಕಾಯುಕ್ತರ ಆದೇಶ ಸಂಖ್ಯೆ: ಲೋಕ:ಐಎನ್‌ಕ್ಯೂ:98:14-ಎ: 2001-02.
3. ಹೆಚ್ಚುವರಿ ನಿಬಂಧಕರು, ವಿಚಾರಣೆಗಳು-4, ಕರ್ನಾಟಕ ಲೋಕಾಯುಕ್ತ ಕಛೇರಿ ಇವರ ದಿನಾಂಕ: 30.06.03ರ ವಿಚಾರಣಾ ವರದಿ ಸಂಖ್ಯೆ: ಲೋಕ:ಎಆರ್‌ಇ-4:ಇಎನ್‌ಕ್ಯೂ-12:2002-03.
4. ಗೌರವಾನ್ವಿತ ಕರ್ನಾಟಕ ಲೋಕಾಯುಕ್ತರ ದಿನಾಂಕ: 17.10.03ರ ಪತ್ರ ಸಂಖ್ಯೆ: ಲೋಕ:ಎಆರ್‌ಇ-4:ಇಎನ್‌ಕ್ಯೂ-12:2002-03.

5. ದಿನಾಂಕ: 27.01.04ರ ಎರಡನೇ ಕಾರಣ ಕೇಳುವ ನೋಟೀಸು ಸಂಖ್ಯೆ: ಆರ್‌ಡಿ 59 ಎಡಿಇ 01.
6. ಶ್ರೀ ವಿ.ಎನ್. ರೇವಣ್ಕರ್, ನಿವೃತ್ತ ತಹಶೀಲ್ದಾರ್ ಇವರ ದಿನಾಂಕ: 21.02.2004ರ ಲಿಖಿತ ಉತ್ತರ.

ಪ್ರಸ್ತಾವನೆ:

ಶ್ರೀ ವಿ.ಎನ್. ರೇವಣ್ಕರ್, ಹಿಂದಿನ ತಹಶೀಲ್ದಾರ್, ಚೆನ್ನಪಟ್ಟಣ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಲಿ ಸೇವೆಯಿಂದ ನಿವೃತ್ತರು ಇವರು ಸದರಿ ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಅಕ್ರಮ ಭೂ ಮಂಜೂರಾತಿಯಲ್ಲಿ ಭಾಗಿಯಾಗಿರುವರೆಂಬ ಸಂಬಂಧದಲ್ಲಿ ಶ್ರೀ ವಿ.ಎಂ. ಶಿವರಾಮ್ ಎಂಬುವವರು ದಿನಾಂಕ:09.12.98ರಂದು ಕರ್ನಾಟಕ ಲೋಕಾಯುಕ್ತ ಕಛೇರಿಗೆ ಸಲ್ಲಿಸಿರುವ ದೂರಿನ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 9ರನ್ವಯ ತನಿಖೆ ಜರುಗಿಸಿ, ಸದರಿ ತನಿಖೆಯಿಂದ ಆರೋಪಿತರ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆಯೆಂದು ಕಂಡು ಬಂದಿದ್ದರ ಹಿನ್ನೆಲೆಯಲ್ಲಿ ಸದರಿ ಆರೋಪಿತರ ವಿರುದ್ಧದ ಆರೋಪಗಳ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಅವರ ವಿರುದ್ಧ ಇಲಾಖಾ ವಿಚಾರಣೆ ಜರುಗಿಸಲು ಗೌರವಾನ್ವಿತ ಉಪ ಲೋಕಾಯುಕ್ತರು, ಬೆಂಗಳೂರು ಇವರಿಗೆ ಪ್ರಕರಣವನ್ನು ವಹಿಸಲಾಗಿತ್ತು.

ಅದರಂತೆ ಈ ಪ್ರಕರಣದಲ್ಲಿ ಕೂಲಂಕುಷವಾಗಿ ವಿಚಾರಣೆ ಜರುಗಿಸಿ ವಿಚಾರಣಾ ವರದಿಯನ್ನು ಸಲ್ಲಿಸುವಂತೆ ಉಪ ನಿಬಂಧಕರು, ವಿಚಾರಣೆಗಳು-2, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮೇಲೆ ಕ್ರಮಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ ಗೌರವಾನ್ವಿತ ಉಪ ಲೋಕಾಯುಕ್ತರು ನೇಮಿಸಿರುತ್ತಾರೆ.

ಅದರಂತೆ ಈ ಪ್ರಕರಣದಲ್ಲಿ ವಿಚಾರಣೆ ಜರುಗಿಸಿ ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ವರದಿಯನ್ನು ಸಲ್ಲಿಸಿರುವ ಹೆಚ್ಚುವರಿ ನಿಬಂಧಕರು, ವಿಚಾರಣೆಗಳು-4 ಇವರು ಶ್ರೀ ವಿ.ಎನ್. ರೇವಣ್ಕರ್, ನಿವೃತ್ತ ತಹಶೀಲ್ದಾರ್ ಇವರ ವಿರುದ್ಧದ ಆರೋಪಗಳು ಸಾಬೀತಾಗಿರುವುದಾಗಿ ಅಭಿಪ್ರಾಯ ಪಟ್ಟಿರುತ್ತಾರೆ. ಸದರಿ ವಿಚಾರಣಾ ವರದಿಯೊಂದಿಗೆ ಕಳುಹಿಸಿರುವ ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ವಿ.ಎನ್. ರೇವಣ್ಕರ್, ಹಿಂದಿನ ತಹಶೀಲ್ದಾರ್, ಚೆನ್ನಪಟ್ಟಣ ತಾಲ್ಲೂಕು ಹಾಲಿ ನಿವೃತ್ತರು ಇವರು ಅತ್ಯಂತ ಗುರುತರವಾದ ಕರ್ತವ್ಯ ನಿರ್ಲಕ್ಷ್ಯತೆಯನ್ನು ಎಸಗಿರುವುದರಿಂದ ಅವರ ನಿವೃತ್ತಿ ವೇತನದಲ್ಲಿ ಶೇ.25ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಬೇಕೆಂದು ಗೌ: ಲೋಕಾಯುಕ್ತರು ಅಭಿಪ್ರಾಯಪಟ್ಟಿರುತ್ತಾರೆ.

ವಿಚಾರಣಾಧಿಕಾರಿಗಳ ವಿಚಾರಣಾ ವರದಿಯೊಂದಿಗೆ ಶ್ರೀ ವಿ.ಎನ್. ರೇವಣ್ಕರ್, ನಿವೃತ್ತ ತಹಶೀಲ್ದಾರ್ ಇವರಿಗೆ ವಿಧಿಸಲು ಉದ್ದೇಶಿಸಿರುವ ದಂಡನೆಯ ಬಗ್ಗೆ ತಮ್ಮ ಲಿಖಿತ ಸಮಜಾಯಿಷಿಯನ್ನು ಸಲ್ಲಿಸುವಂತೆ ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ 2ನೇ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು. ಅದಕ್ಕೆ ಉತ್ತರವಾಗಿ ಆರೋಪಿತ ನಿವೃತ್ತ ಅಧಿಕಾರಿಯು ಮೇಲೆ ಕ್ರಮ ಸಂಖ್ಯೆ (6)ರಲ್ಲಿ ಓದಲಾದ ತಮ್ಮ ಲಿಖಿತ ಸಮಜಾಯಿಷಿಯಲ್ಲಿ ಈ ಪ್ರಕರಣ ನಡೆದ ಅವಧಿಯಲ್ಲಿ ತಾವು ಚೆನ್ನಪಟ್ಟಣ ತಾಲ್ಲೂಕಿನ ತಹಶೀಲ್ದಾರರಾಗಿ ಕಾರ್ಯನಿರ್ವಹಿಸಿರುವುದಿಲ್ಲ ಎಂದು, ಆದುದರಿಂದ ತಾವು ಯಾವುದೇ ಅಕ್ರಮಗಳನ್ನು ಎಸಗಿರುವುದಿಲ್ಲವೆಂದು, ಇದರಿಂದಾಗಿ ಸಾರಾಸಗಟಾಗಿ ಗೌರವಾನ್ವಿತ ಲೋಕಾಯುಕ್ತರ ವಿಚಾರಣಾ ವರದಿಯನ್ನು ಅಲ್ಲಗಳೆಯುವುದಾಗಿ ತಿಳಿಸಿ ತಮ್ಮನ್ನು ಆರೋಪ ಮುಕ್ತರನ್ನಾಗಿಸುವಂತೆ ಕೋರಿರುತ್ತಾರೆ. ಇಂತಹ ಲಿಖಿತ ಸಮಜಾಯಿಷಿಗೆ ಪೂರಕವಾಗಿ ಆಪಾದಿತ ಅಧಿಕಾರಿಯು ಯಾವುದೇ ಸಮರ್ಥಿಸುವಂತಹ ಹೊಸ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲವಾದ್ದರಿಂದ ಸರ್ಕಾರವು ಇವರ ಲಿಖಿತ ಸಮಜಾಯಿಷಿಯನ್ನು ಒಪ್ಪಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಸದರಿ ಆಪಾದಿತರು ಸೇವೆಯಿಂದ ನಿವೃತ್ತರಾಗಿರುವುದರಿಂದ ಇವರಿಗೆ ವಿಧಿಸಲು ಉದ್ದೇಶಿಸಿರುವ ದಂಡನೆಯ ಸ್ವರೂಪದ ಬಗ್ಗೆ ಕರ್ನಾಟಕ ಲೋಕ ಸೇವಾ ಆಯೋಗದ ಸಹಮತಿಯನ್ನು ಪಡೆದು ವಿಚಾರಣಾಧಿಕಾರಿಗಳು ತಳೆದಿರುವ ಅಭಿಪ್ರಾಯವನ್ನು ಸಂಬಂಧಿತ ದಾಖಲೆಗಳೊಂದಿಗೆ ಸರಕಾರ ಪರಿಶೀಲಿಸಿದ ನಂತರ ಸದರಿ ವಿಚಾರಣಾ ವರದಿಯನ್ನು ಒಪ್ಪಿಕೊಂಡು ಆಪಾದಿತ ನಿವೃತ್ತ ಅಧಿಕಾರಿಗೆ ಸೂಕ್ತ ದಂಡನೆಯನ್ನು ವಿಧಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: 59 ಎಡಿಇ 2001, ಬೆಂಗಳೂರು, ದಿನಾಂಕ: 27ನೇ ಜನವರಿ, 2005

ಪ್ರಸ್ತಾವನೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 ರಡಿಯಲ್ಲಿ ಸರ್ಕಾರವು ಶ್ರೀ ವಿ.ಎನ್. ರೇವಣ್ಕರ್, ಹಿಂದಿನ ತಹಶೀಲ್ದಾರ್, ಚೆನ್ನಪಟ್ಟಣ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಲಿ ನಿವೃತ್ತರು ಇವರ ನಿವೃತ್ತಿ ವೇತನದಲ್ಲಿ ಶೇ.25ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಈ ಆದೇಶವನ್ನು ಕರ್ನಾಟಕ ಲೋಕಸೇವಾ ಆಯೋಗವು ತನ್ನ ದಿನಾಂಕ: 21.10.2004ರ ಪತ್ರ ಸಂಖ್ಯೆ: ಪಿಎಸ್‌ಸಿ 81 ಸಿಎನ್‌ಎಸ್ 2004ರಲ್ಲಿ ನೀಡಿದ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಮಹಂತೇಶಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3).

ಪಿ.ಆರ್.187

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಇ-ಆಡಳಿತವನ್ನು ಅನುಷ್ಠಾನಗೊಳಿಸುವ ಬಗ್ಗೆ- ಮುಖ್ಯ ಮಾಹಿತಿ ಅಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳು.

ಓದಲಾಗಿದೆ : ಸರ್ಕಾರದ ಆದೇಶ ಸಂಖ್ಯೆ: ಮಾತಂಇ 16 ಎಂಡಿಎ 2002, ದಿನಾಂಕ: 22.08.2002.

ಪ್ರಸ್ತಾವನೆ:

ರಾಜ್ಯ ಸರ್ಕಾರವು ವಿವಿಧ ಇಲಾಖೆಗಳ ಮೂಲಕ ಕೈಗೊಂಡ ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಪ್ರತಿಯೊಬ್ಬರಿಗೂ ಮಾಹಿತಿಯನ್ನು ಸುಲಭವಾಗಿ ಲಭ್ಯಗೊಳಿಸುವ ಉದ್ದೇಶದಿಂದ ಸರ್ಕಾರದ ದಿನನಿತ್ಯದ ಕೆಲಸಕಾರ್ಯಗಳಲ್ಲಿ ಇ-ಆಡಳಿತವನ್ನು ಹೆಚ್ಚು ಹೆಚ್ಚಾಗಿ ಬಳಸಲು ರಾಜ್ಯಸರ್ಕಾರವು ಇ-ಆಡಳಿತ ಕಾರ್ಯತಂತ್ರ ಯೋಜನೆಯನ್ನು ಅನುಮೋದಿಸಿರುತ್ತದೆ. ಈ ಅಧಿಕಾರಿಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಅನುವಾಗುವಂತೆ ಅವಶ್ಯವಿರುವ ವಿಶೇಷ ತರಬೇತಿಯನ್ನು ನೀಡಲೂ ಸಲಹೆ ಮಾಡಿದೆ. ಈ ಕಾರ್ಯತಂತ್ರದ ಸೂಚನೆಗಳ ಮೇರೆಗೆ ಪ್ರತಿಯೊಂದು ಇಲಾಖೆಗೂ ಇ-ಆಡಳಿತವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆಯಾ ಇಲಾಖೆಗಳು ತಮ್ಮ ಒಬ್ಬ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನು ನೇಮಿಸಬೇಕಾಗಿರುತ್ತದೆ. ಇದಕ್ಕನುಗುಣವಾಗಿ ಪ್ರತಿಯೊಂದು ಇಲಾಖೆಯು ತಮ್ಮ ಇಲಾಖೆಯಿಂದ ಒಬ್ಬ ಅಧಿಕಾರಿಯನ್ನು

ಮುಖ್ಯ ಮಾಹಿತಿ ಅಧಿಕಾರಿಯೆಂದು ನಾಮನಿರ್ದೇಶನ ಮಾಡಿರುತ್ತದೆ. ಹೀಗೆ ನಾಮನಿರ್ದೇಶನಗೊಂಡ ಅಧಿಕಾರಿಗಳನ್ನು ಮುಖ್ಯ ಮಾಹಿತಿ ಅಧಿಕಾರಿಗಳನ್ನಾಗಿ ನಿಯುಕ್ತಿಗೊಳಿಸಿ, ಅವರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸುತ್ತಾ ಸರ್ಕಾರವು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 38 ವಿಮಾಆ 2003, ಬೆಂಗಳೂರು, ದಿನಾಂಕ: 2ನೇ ಫೆಬ್ರವರಿ, 2005

ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಇ-ಆಡಳಿತವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ ಅನುಬಂಧದಲ್ಲಿ ತೋರಿಸಿರುವಂತೆ ಆಯಾ ಇಲಾಖೆಗಳಿಂದ ನಾಮನಿರ್ದೇಶಿಸಲ್ಪಟ್ಟ ಅಧಿಕಾರಿಗಳನ್ನು ಮುಖ್ಯ ಮಾಹಿತಿ ಅಧಿಕಾರಿಗಳನ್ನಾಗಿ ನಿಯುಕ್ತಿಗೊಳಿಸುತ್ತ, ಸರ್ಕಾರವು ಆ ಅಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಈ ಕೆಳಗಿನಂತೆ ನಿಗದಿಪಡಿಸಿರುತ್ತದೆ:

1. ಸಂಬಂಧಪಟ್ಟ ಇಲಾಖೆಯಲ್ಲಿ ಇ-ಆಡಳಿತವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಪೂರ್ಣ ಜವಾಬ್ದಾರಿ ಅವರದಾಗಿರುತ್ತದೆ.
2. ತಮ್ಮ ಇಲಾಖೆಯಲ್ಲಿನ ಪ್ರತಿಯೊಂದು ಶಾಖೆಯನ್ನು ಗಣಕೀಕರಣಗೊಳಿಸುವ ಕಾರ್ಯವನ್ನು ಪ್ರಾರಂಭಿಸುವುದು.
3. ಇಲಾಖೆಯ ತಾಂತ್ರಿಕ ಸಲಹಾ ಸಮಿತಿಯ ಸಭೆಗಳಿಗೆ ತಪ್ಪದೆ ಹಾಜರಾಗುವುದು.
4. ಇಲಾಖೆಯ ಗಣಕೀಕರಣಕ್ಕಾಗಿ ಯೋಜನಾ ವರದಿ (System Study) ತಯಾರಿಸುವುದು.
5. ಇಲಾಖಾ ಮುಖ್ಯಸ್ಥರು ಇ-ಆಡಳಿತವನ್ನು ಅನುಷ್ಠಾನಗೊಳಿಸಲು ಕರೆದ ಇಲಾಖೆಯ ತಾಂತ್ರಿಕ ಸಭೆಗಳನ್ನು ನಡೆಸಲು ವ್ಯವಸ್ಥೆ ಮಾಡುವುದು ಮತ್ತು ಸಭೆಗೆ ಹಾಜರಾಗುವುದು.
6. ಇಲಾಖೆಯಲ್ಲಿ ಇ-ಆಡಳಿತ ನಿರ್ವಹಿಸಲು ಅವಶ್ಯವಿರುವ ಯಂತ್ರಾಂಶ ಮತ್ತು ತಂತ್ರಾಂಶಗಳನ್ನು ನಿರ್ಧರಿಸಲು ಅವಶ್ಯವಿರುವ ಸಭೆಗಳನ್ನು ಏರ್ಪಡಿಸುವುದು.
7. ಮಾಹಿತಿಗಳನ್ನು ಸಾರ್ವಜನಿಕರಿಗೆ ಮತ್ತು ಇತರೆ ಇಲಾಖೆಗಳಿಗೆ ಸುಲಭವಾಗಿ ಹಾಗೂ ಶೀಘ್ರವಾಗಿ ಒದಗಿಸುವಲ್ಲಿ ಇಲಾಖಾ ಮುಖ್ಯಸ್ಥರಿಗೆ ಸಹಕರಿಸುವುದು.
8. ಆಯಾ ಇಲಾಖೆಯ ತಾಂತ್ರಿಕ ತಂಡದ ಸದಸ್ಯರುಗಳಿಗೆ ಟೆಂಡರ್ ತಯಾರಿಸುವಲ್ಲಿ, ಟೆಂಡರ್ ಪರಿಷ್ಕರಣೆ ಮಾಡುವಲ್ಲಿ ಹಾಗೂ ಒಪ್ಪಂದ ಪತ್ರಗಳನ್ನು ತಯಾರಿಸುವಲ್ಲಿ ಸಹಕರಿಸುವುದು.
9. ಇಲಾಖೆಯನ್ನು ಗಣಕೀಕರಣಗೊಳಿಸುವ ಸಂಸ್ಥೆಗಳಿಗೆ ಅವಶ್ಯವಿರುವ ಮಾಹಿತಿ ಒದಗಿಸುವುದು.
10. ಇಲಾಖೆಯ ಗಣಕೀಕರಣದ ಉಸ್ತುವಾರಿ ಕೈಗೊಳ್ಳುವುದು.
11. ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ ನಿಯತಕಾಲಿಕವಾಗಿ ತರಬೇತಿ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವುದು.
12. ಮುಖ್ಯ ಮಾಹಿತಿ ಅಧಿಕಾರಿಗಳಿಗೆ ಇ-ಆಡಳಿತ ಸಚಿವಾಲಯವು ಏರ್ಪಡಿಸುವ ತರಬೇತಿಗಳಿಗೆ ತಪ್ಪದೇ ಹಾಜರಾಗುವುದು.
13. ಆಯಾ ಇಲಾಖೆಗೆ ಸಂಬಂಧಪಟ್ಟ ಇ-ಆಡಳಿತ ಮತ್ತು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಇತರ ಎಲ್ಲಾ ಜವಾಬ್ದಾರಿಗಳು.
14. ಮುಖ್ಯ ಮಾಹಿತಿ ಅಧಿಕಾರಿಗಳು ಮೇಲೆ ಕಾಣಿಸಿದಂತೆ ಕೆಲಸಕಾರ್ಯಗಳನ್ನು ಕಾರ್ಯಗತಗೊಳಿಸಲು ಅನುವಾಗುವುದಕ್ಕಾಗಿ ತಮ್ಮ ಇಲಾಖೆಯ ಮುಖ್ಯಸ್ಥರ ಅನುಮತಿಯೊಂದಿಗೆ ಒಬ್ಬರು ಅಥವಾ ಇಬ್ಬರು ಸಿಬ್ಬಂದಿ ವರ್ಗದವರನ್ನು ಬಳಸಿಕೊಳ್ಳಬಹುದಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ. ಸತ್ಯವತಿ

ಸರ್ಕಾರದ ಉಪಕಾರ್ಯದರ್ಶಿ, ಇ-ಆಡಳಿತ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಸು).

ಪಿ.ಆರ್.188

INFRASTRUCTURE DEVELOPMENT SECRETARIAT

Subject : Inter Model Survey for Commuter Rail Service in Bangalore-Payment of final instalment of fees to M/s RITES-orders.

Read :
1. G.O. No. IDD 115 IDM 2000, Dated: 03.10.2001.
2. G.O. No. IDD 115 IDM 2000, Dated: 30.03.2004.
3. Letter No. RITES/ UT/blr/IMS/01/2004, Dated: 16.12.2004 from Joint General Manager, RITES (UT), Bangalore.

Preamble:

1. In G.O. read at (1) above the Government of Karnataka (GoK) had sanctioned a follow up study on the Inter Model Survey for Commuter Rail Service in Bangalore by M/s. RITES, New Delhi, at a total cost of Rs. 45 lakhs on a 2:1 cost sharing basis with the Ministry of Railways.

2. In G.O. No. IDD 115 IDM 2000 Dated: 30.03.2004, Government of Karnataka has sanctioned Rs.3 lakhs as its final installment share out of Rs.4.50 lakhs payable to M/s RITES authorizing its General Manager to draw the amount on a payee's receipt countersigned by the Under Secretary to Government, Department of Personnel and Administrative Reforms (Accounts), Karnataka Government Secretariat, Bangalore, But the amount could not be drawn from SHT, Bangalore, due to modified drawing procedures on token system introduced by Finance Department.

3. In the letter read at (3) above M/s RITES have requested to sanction and release Rs.3.00 lakhs from and out of the current year's budget. Hence the following orders.

Government Order No. IDD 115 IDM 2000, Bangalore, Dated: 29th January, 2005

1. Sanction is accorded for payment of Rs.3 lakhs (Rupees three lakhs only) to M/s. RITES. New Delhi. being the 10% of the total fee of the cost of Rs.45.00 lakhs towards submission of final report on the Inter Model Survey for Commuter Rail Service in Bangalore.

2. The Government of Karnataka hereby release Rs.3 lakhs (Rupees three lakhs only) as its share out of Rs.4.50 lakhs (Four lakhs fifty thousands only) payable to M/s. RITES towards submission of final report on Inter Model Survey for Commuter Rail Service in Bangalore.

3. The General Manager, M/s RITES is authorized to draw the amount on a payee's receipt countersigned by the Under Secretary to Government, Infrastructure Development Department, Government of Karnataka, Bangalore.

4. The expenditure shall be met out of the Head of Account "3451-00-090-1-06-125-Secretariat Economic Services-Infrastructure Preliminary Studies-Modernization (Plan)"

5. This order issues presuming the concurrence of the Finance Department vide G.O.No.FD 1 TFP 96 Dated: 10.07.1996.

By Order and in the name of the Governor of Karnataka,

T.B. RENUKA PRASAD

Under Secretary to Government,

Infrastructure Development Department.

PR-189

AGRICULTURE AND HORTICULTURE SECRETARIAT

Subject : Implementation of NOVOD Board sponsored project on "Tree Borne Oil Seeds" during 2004-2005.

Read :
1. Government of India letter No.30-109-NOVOD-2004-05, Dated:19.10.2004.
2. Letter No.AD/OPDP/AHO-1/9/2004-05 Dated: 04.11.2004 of the Director of Horticulture.

Preamble:

National Oil Seeds and Vegetable Oils Development Board (NOVOD), Ministry of Agriculture, Government of India has accorded the approval for implementation of the NOVOD sponsored project on "Tree Borne Oil Seeds" during 2004-2005 with an outlay of Rs.38.075 lakhs. As per the letter read at (1) above.

The Director of Horticulture has furnished a detailed proposal for Rs.26.875 Lakhs for Development of Tree Borne Oil Seed crops like Neem, Simarouba, Kokum, Pongamia etc., in the State with assistance from NOVOD Board and has sought approval for implementing the scheme during 2004-05.

This has been examined and the following order is passed.

Government Order No. AHD 297 HPP 2004, Bangalore, Dated:19th January, 2005

Government is pleased to accord approval to the Director of Horticulture for implementation of NOVOD Board sponsored project on "Tree Borne Oil Seeds" during 2004-2005 at a total cost of Rs.26.875 lakhs (Rupes Twenty six lakhs and eighty seven thousand five hundred only). The component details are as given below:

Sl. No.	Details	Actual expenditure (Rs.in lakhs)
1.	Elite Nursery raising and plantation	17.05
2.	Establishment of TBO garden/park	5.20
3.	Farmers training	2.60
4.	Trainers training	2.025
	Total	**26.875**

The proejct will be implemented strictly in accordance with the terms and conditions stipulated by NOVOD in its letter cited at reference (1) above.

Purchases if any are to be made strictly in accordance with the Karnataka Transparency in public Procurements Act 1999.

The Director of Horticulture will arrange to prepare physical and financial targets district wise and will make MMRs. It will be communicated to the implementing officers under intimation to the Government.

The receipt from NOVOD Board be accounted under 0401-00-800-2-02-Receipt from NOVOD Board. The expenditure may be incurred under Head of Account 2401-00-114-0-02-000-NOVOD Board Assisted Scheme-059 other expenditure. (Horticulture).

This order issues with the concurrence of Finance Department vide its Note No. FD 713 Exp4/200 Dated: 13.01.2005.

By Order and in the name of the Governor of Karnataka,

N. MANJULA GEETHA

Under Secretary to Government,

Agriculture and Horticulture Department.

PR-190

ಕಾನೂನು ಸಚಿವಾಲಯ

ವಿಷಯ : ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ಕೃಷ್ಣರಾಜಪುರ ನ್ಯಾಯಾಲಯದ ಕಾರ್ಯಾವಧಿಯನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ: ಲಾ 12 ಎಲ್‌ಸಿಇ 2002, ದಿನಾಂಕ: 02.12.2003.
2. ಕರ್ನಾಟಕ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ ಜನರಲ್‌ರವರ ಪತ್ರ ಸಂಖ್ಯೆ: ಜೆಓಬಿ:2-367(3) 2004, ದಿನಾಂಕ: 08.12.2004.

ಪ್ರಸ್ತಾವನೆ:

ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್ .ಸಿ. ಕೃಷ್ಣರಾಜಪುರ ಬೆಂಗಳೂರು, ಗ್ರಾಮಾಂತರ ಜಿಲ್ಲೆ, ನ್ಯಾಯಾಲಯವನ್ನು ಸೃಜಿಸಲು ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ಮಂಜೂರಾತಿಯನ್ನು ನೀಡಲಾಗಿದ್ದು, ಸದರಿ ನ್ಯಾಯಾಲಯದ ಕಾರ್ಯಾವಧಿಯು ದಿನಾಂಕ: 1.12.2004ಕ್ಕೆ ಪೂರ್ಣಗೊಂಡಿದೆ.

ಸದರಿ ನ್ಯಾಯಾಲಯಕ್ಕೆ ಮಂಜೂರಾತಿ ಪ್ರಿಸೈಡಿಂಗ್ ಅಧಿಕಾರಿ ಮತ್ತು ಹೊಂದಿಕೊಂಡ ಹುದ್ದೆಗಳನ್ನು ದಿನಾಂಕ: 02.12.2004ರಿಂದ ಎರಡು ವರ್ಷಗಳ ಅವಧಿಗೆ ಮುಂದುವರೆಸಲು ಮೇಲೆ ಓದಲಾದ (2)ರ ಪತ್ರದಲ್ಲಿ ಕೋರಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಲಾ 139 ಎಲ್‌ಎಸಿ 2004, ಬೆಂಗಳೂರು, ದಿನಾಂಕ: 12ನೇ ಜನವರಿ 2005

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೃಷ್ಣರಾಜಪುರದ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದ ಪ್ರಿಸೈಡಿಂಗ್ ಅಧಿಕಾರಿ ಮತ್ತು ಹೊಂದಿಕೊಂಡ ಸಿಬ್ಬಂದಿ ಹುದ್ದೆಗಳ ಕಾರ್ಯಾವಧಿಯನ್ನು ದಿನಾಂಕ: 02.12.2004ರಿಂದ ಎರಡು ವರ್ಷಗಳ ಅವಧಿಗೆ ಮುಂದುವರೆಸಿದೆ.

ಈ ನ್ಯಾಯಾಲಯದ ವೆಚ್ಚವನ್ನು ಲೆಕ್ಕಶೀರ್ಷಿಕೆ "2014-00-105-0-01-ಯೋಜನೇತರ" ಅಡಿಯಲ್ಲಿ ಭರಿಸುವುದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 1 ಜೆಎಫ್‌ಪಿ 96, ದಿನಾಂಕ: 10.07.1996 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಚಿಕ್ಕ ಹನುಮಂತಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಇಲಾಖೆ (ಆಡಳಿತ-1).

ಪಿ.ಆರ್.191

ವಿಷಯ : ಶ್ರೀ ಎಂ. ಕೃಷ್ಣಮೂರ್ತಿ, ಕಿರಿಯ ಸಹಾಯಕ, ಕಾನೂನು ಇಲಾಖೆ ಆಡಳಿತ-1, ಮತ್ತು ಶ್ರೀ ಮುನಿರತ್ನಂ, ಕೆ. ದಲಾಯತ್ ಆಡಳಿತ-1 ಶಾಖೆ, ಕಾನೂನು ಇಲಾಖೆ, ಇವರ ವಿರುದ್ಧ ಮಾಡಲಾದ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ.

ಓದಲಾಗಿದೆ : ಕಾರಣ ಕೇಳುವ ತಿಳುವಳಿಕೆ ಪತ್ರ ಸಂಖ್ಯೆ: ಲಾ 47 ಎಲ್‌ಎಎಂ 2004, ದಿನಾಂಕ: 30.10.2004.

ಪ್ರಸ್ತಾವನೆ:

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 12ರನ್ವಯ ಶ್ರೀ ಎಂ. ಕೃಷ್ಣಮೂರ್ತಿ, ಕಿರಿಯ ಸಹಾಯಕ, ಆಡಳಿತ-1 ಶಾಖೆ ಮತ್ತು ಶ್ರೀ ಮುನಿರತ್ನಂ, ದಲಾಯತ್ ಆಡಳಿತ-1, ಕಾನೂನು ಇಲಾಖೆ, ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಪ್ರಸ್ತಾಪಿಸಲಾಗಿದ್ದು, ಸದರಿಯವರ ವಿರುದ್ಧ ಮೇಲೆ (1) ರಲ್ಲಿ ಓದಲಾದ ಕಾರಣ ಕೇಳುವ ತಿಳುವಳಿಕೆ ಪತ್ರದೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಕಳುಹಿಸಿಕೊಡಲಾಗಿತ್ತು. ಸದರಿಯವರು, ದೋಷಾರೋಪಣೆಗಳಿಗೆ ರಕ್ಷಣಾ ಹೇಳಿಕೆಯನ್ನು ನೀಡಿರುವುದಿಲ್ಲ. ಆದ್ದರಿಂದ, ಅವರ ಉತ್ತರ ಏನೂ ಇಲ್ಲ ಎಂದು ಪರಿಭಾವಿಸಿ ಮೇಲ್ಕಂಡ ಸದರಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಸರ್ಕಾರವು ನಿರ್ಧರಿಸಿ, ಈ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯುವ ಸಲುವಾಗಿ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಗಳನ್ನು ನೇಮಿಸಲು ಸರ್ಕಾರವು ತೀರ್ಮಾನಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಲಾ 47 ಎಲ್‌ಎಎಂ 2004, ಬೆಂಗಳೂರು, ದಿನಾಂಕ: 3ನೇ ಜನವರಿ, 2005

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11(2) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಎಂ. ಕೃಷ್ಣಮೂರ್ತಿ, ಕಿರಿಯ ಸಹಾಯಕ, ಆಡಳಿತ-1, ಕಾನೂನು ಇಲಾಖೆ ಮತ್ತು ಶ್ರೀ ಕೆ. ಮುನಿರತ್ನಂ, ದಲಾಯತ್, ಆಡಳಿತ-1 ಶಾಖೆ, ಕಾನೂನು ಇಲಾಖೆ, ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಶ್ರೀ ಈಶ್ವರ್ ಪ್ರಸಾದ್, ಸರ್ಕಾರದ ಅಧೀನ ಕಾರ್ಯದರ್ಶಿ, ಆಡಳಿತ-2 ಕಾನೂನು ಇಲಾಖೆ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಶ್ರೀ ಬಾಬುಪಟೇಲ್ ಶಾಖಾಧಿಕಾರಿ, ಆಡಳಿತ-2, ಕಾನೂನು ಇಲಾಖೆ ಇವರನ್ನು ಮಂಡನಾಧಿಕಾರಿಯನ್ನಾಗಿಯೂ ನೇಮಕ ಮಾಡಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಚಿಕ್ಕ ಹನುಮಂತಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಇಲಾಖೆ (ಆಡಳಿತ-1).

ಪಿ.ಆರ್.192

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಇ–ಆಡಳಿತವನ್ನು ಅನುಷ್ಠಾನಗೊಳಿಸುವ ಬಗ್ಗೆ – ಮುಖ್ಯ ಮಾಹಿತಿ ಅಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳು.

ಓದಲಾಗಿದೆ : ಸರ್ಕಾರದ ಆದೇಶ ಸಂ. ಮಾತಂಇ 16 ಎಂಡಿಎ 2002 ದಿನಾಂಕ 22.08.2002.

ಪ್ರಸ್ತಾವನೆ:

ರಾಜ್ಯ ಸರ್ಕಾರವು ವಿವಿಧ ಇಲಾಖೆಗಳ ಮೂಲಕ ಕೈಗೊಂಡ ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಪ್ರತಿಯೊಬ್ಬರಿಗೂ ಮಾಹಿತಿಯನ್ನು ಸುಲಭವಾಗಿ ಲಭ್ಯಗೊಳಿಸುವ ಉದ್ದೇಶದಿಂದ ಸರ್ಕಾರದ ದಿನನಿತ್ಯದ ಕೆಲಸಕಾರ್ಯಗಳಲ್ಲಿ ಇ-ಆಡಳಿತವನ್ನು ಹೆಚ್ಚು ಹೆಚ್ಚಾಗಿ ಬಳಸಲು ರಾಜ್ಯಸರ್ಕಾರವು ಇ–ಆಡಳಿತ ಕಾರ್ಯತಂತ್ರ ಯೋಜನೆಯನ್ನು ಅನುಮೋದಿಸಿರುತ್ತದೆ. ಈ ಅಧಿಕಾರಿಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಅನುವಾಗುವಂತೆ ಅವಶ್ಯವಿರುವ ವಿಶೇಷ ತರಬೇತಿಯನ್ನು ನೀಡಲೂ ಸಲಹೆ ಮಾಡಿದೆ. ಈ ಕಾರ್ಯತಂತ್ರದ ಸೂಚನೆಗಳ ಮೇರೆಗೆ ಪ್ರತಿಯೊಂದು ಇಲಾಖೆಗೂ ಇ–ಆಡಳಿತವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಆಯಾ ಇಲಾಖೆಗಳು ತಮ್ಮ ಒಬ್ಬ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನು ನೇಮಿಸಬೇಕಾಗಿರುತ್ತದೆ. ಇದಕ್ಕನುಗುಣವಾಗಿ ಪ್ರತಿಯೊಂದು ಇಲಾಖೆಯು ತಮ್ಮ ಇಲಾಖೆಯಿಂದ ಒಬ್ಬ ಅಧಿಕಾರಿಯನ್ನು ಮುಖ್ಯ ಮಾಹಿತಿ ಅಧಿಕಾರಿಯೆಂದು ನಾಮನಿರ್ದೇಶನ ಮಾಡಿರುತ್ತದೆ. ಹೀಗೆ ನಾಮನಿರ್ದೇಶನಗೊಂಡ ಅಧಿಕಾರಿಗಳನ್ನು ಮುಖ್ಯ ಮಾಹಿತಿ ಅಧಿಕಾರಿಗಳನ್ನಾಗಿ ನಿಯುಕ್ತಿಗೊಳಿಸಿ, ಅವರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸುತ್ತಾ ಸರ್ಕಾರವು ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 38 ವಿಮಾಆ 2003 ಬೆಂಗಳೂರು, ದಿನಾಂಕ: 2ನೇ ಫೆಬ್ರುವರಿ, 2005

ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಇ–ಆಡಳಿತವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ ಅನುಬಂಧದಲ್ಲಿ ತೋರಿಸಿರುವಂತೆ ಆಯಾ ಇಲಾಖೆಗಳಿಂದ ನಾಮನಿರ್ದೇಶಿಸಲ್ಪಟ್ಟ ಅಧಿಕಾರಿಗಳನ್ನು ಮುಖ್ಯ ಮಾಹಿತಿ ಅಧಿಕಾರಿಗಳನ್ನಾಗಿ ನಿಯುಕ್ತಿಗೊಳಿಸುತ್ತ, ಸರ್ಕಾರವು ಆ ಅಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳು ಈ ಕೆಳಗಿನಂತೆ ನಿಗದಿಪಡಿಸಿರುತ್ತದೆ:

1. ಸಂಬಂಧಪಟ್ಟ ಇಲಾಖೆಯಲ್ಲಿ ಇ–ಆಡಳಿತವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಪೂರ್ಣ ಜವಾಬ್ದಾರಿ ಅವರದಾಗಿರುತ್ತದೆ.
2. ತಮ್ಮ ಇಲಾಖೆಯಲ್ಲಿನ ಪ್ರತಿಯೊಂದು ಶಾಖೆಯನ್ನು ಗಣಕೀಕರಣಗೊಳಿಸುವ ಕಾರ್ಯವನ್ನು ಪ್ರಾರಂಭಿಸುವುದು.
3. ಇಲಾಖೆಯ ತಾಂತ್ರಿಕ ಸಲಹಾ ಸಮಿತಿಯ ಸಭೆಗಳಿಗೆ ತಪ್ಪದೆ ಹಾಜರಾಗುವುದು.
4. ಇಲಾಖೆಯ ಗಣಕೀಕರಣಕ್ಕಾಗಿ ಯೋಜನಾ ವರದಿ (System Study) ತಯಾರಿಸುವುದು.
5. ಇಲಾಖಾ ಮುಖ್ಯಸ್ಥರು ಇ–ಆಡಳಿತವನ್ನು ಅನುಷ್ಠಾನಗೊಳಿಸಲು ಕರೆದ ಇಲಾಖೆಯ ತಾಂತ್ರಿಕ ಸಭೆಗಳನ್ನು ನಡೆಸಲು ವ್ಯವಸ್ಥೆ ಮಾಡುವುದು ಮತ್ತು ಸಭೆಗೆ ಹಾಜರಾಗುವುದು.
6. ಇಲಾಖೆಯಲ್ಲಿ ಇ–ಆಡಳಿತ ನಿರ್ವಹಿಸಲು ಅವಶ್ಯವಿರುವ ಯಂತ್ರಾಂಶ ಮತ್ತು ತಂತ್ರಾಂಶಗಳನ್ನು ನಿರ್ಧರಿಸಲು ಅವಶ್ಯವಿರುವ ಸಭೆಗಳನ್ನು ಏರ್ಪಡಿಸುವುದು.
7. ಮಾಹಿತಿಗಳನ್ನು ಸಾರ್ವಜನಿಕರಿಗೆ ಮತ್ತು ಇತರೆ ಇಲಾಖೆಗಳಿಗೆ ಸುಲಭವಾಗಿ ಹಾಗೂ ಶೀಘ್ರವಾಗಿ ಒದಗಿಸುವಲ್ಲಿ ಇಲಾಖಾ ಮುಖ್ಯಸ್ಥರಿಗೆ ಸಹಕರಿಸುವುದು.
8. ಆಯಾ ಇಲಾಖೆಯ ತಾಂತ್ರಿಕ ತಂಡದ ಸದಸ್ಯರುಗಳಿಗೆ ಟೆಂಡರ್ ತಯಾರಿಸುವಲ್ಲಿ, ಟೆಂಡರ್ ಪರಿಷ್ಕರಣೆ ಮಾಡುವಲ್ಲಿ ಹಾಗೂ ಒಪ್ಪಂದ ಪತ್ರಗಳನ್ನು ತಯಾರಿಸುವಲ್ಲಿ ಸಹಕರಿಸುವುದು.
9. ಇಲಾಖೆಯನ್ನು ಗಣಕೀಕರಣಗೊಳಿಸುವ ಸಂಸ್ಥೆಗಳಿಗೆ ಅವಶ್ಯವಿರುವ ಮಾಹಿತಿ ಒದಗಿಸುವುದು.
10. ಇಲಾಖೆಯ ಗಣಕೀಕರಣದ ಉಸ್ತುವಾರಿ ಕೈಗೊಳ್ಳುವುದು.
11. ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ ನಿಯತಕಾಲಿಕವಾಗಿ ತರಬೇತಿ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸುವುದು.
12. ಮುಖ್ಯ ಮಾಹಿತಿ ಅಧಿಕಾರಿಗಳಿಗೆ ಇ–ಆಡಳಿತ ಸಚಿವಾಲಯವು ಏರ್ಪಡಿಸುವ ತರಬೇತಿಗಳಿಗೆ ತಪ್ಪದೇ ಹಾಜರಾಗುವುದು.
13. ಆಯಾ ಇಲಾಖೆಗೆ ಸಂಬಂಧಪಟ್ಟ ಇ–ಆಡಳಿತ ಮತ್ತು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಇತರ ಎಲ್ಲಾ ಜವಾಬ್ದಾರಿಗಳು.
14. ಮುಖ್ಯ ಮಾಹಿತಿ ಅಧಿಕಾರಿಗಳು ಮೇಲೆ ಕಾಣಿಸಿದಂತೆ ಕೆಲಸಕಾರ್ಯಗಳನ್ನು ಕಾರ್ಯಗತಗೊಳಿಸಲು ಅನುವಾಗುವುದಕ್ಕಾಗಿ ತಮ್ಮ ಇಲಾಖೆಯ ಮುಖ್ಯಸ್ಥರ ಅನುಮತಿಯೊಂದಿಗೆ ಒಬ್ಬರು ಅಥವಾ ಇಬ್ಬರು ಸಿಬ್ಬಂದಿ ವರ್ಗದವರನ್ನು ಬಳಸಿಕೊಳ್ಳಬಹುದಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿ. ಸತ್ಯವತಿ

ಸರ್ಕಾರದ ಉಪ ಕಾರ್ಯದರ್ಶಿ, ಇ–ಆಡಳಿತ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಸು)

ANNEXURE to Govt. Order No.DPAR 38 EGV 2003 Dated. 02/02/2005.

ಕ್ರ.ಸಂ.	ಇಲಾಖೆಯ ಹೆಸರು.	ಮುಖ್ಯ ಮಾಹಿತಿ ಅಧಿಕಾರಿಗಳ ಹೆಸರು	ವಿಳಾಸ
1	ಸಾರಿಗೆ ಇಲಾಖೆ.	ಶ್ರೀ. ಅಯ್ಯಪ್ಪ.ಎಮ್.ಕೆ.	ಜಂಟಿ ನಿರ್ದೇಶಕರು, ಸಾರಿಗೆ ಇಲಾಖೆ, ಬಹು ಮಹಡಿ ಕಟ್ಟಡ, ಡಾ.ಅಂಬೇಡ್ಕರ್ ರಸ್ತೆ, ಬೆಂಗಳೂರು–560 001
2	ಉದ್ಯೋಗ ಮತ್ತು ತರಬೇತಿ ಇಲಾಖೆ.	ಶ್ರೀಮತಿ. ಅನುರಾಧ.ವಿ. ರಾವ್.	ಸಹಾಯಕ ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಪ್ರಶಾಂತ ಕಾಂಪ್ಲೆಕ್ಸ್, ಕಾಳಿಂಗ ರಾವ್ ರಸ್ತೆ, ಬೆಂಗಳೂರು–560 027
3	ಅಂಗವಿಕಲರ ಕ್ಷೇಮಾಭಿವೃದ್ಧಿ ಇಲಾಖೆ.	ಶ್ರೀ. ಅರವಿಂದ ಬಾಬು.ಬಿ.ಎಸ್.	ಕಛೇರಿ ವ್ಯವಸ್ಥಾಪಕರು, ಅಂಗವಿಕಲರ ಕ್ಷೇಮಾಭಿವೃದ್ಧಿ ಇಲಾಖೆ. ನೆಲಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ರಸ್ತೆ, ಬೆಂಗಳೂರು–1

ಕ್ರ.ಸಂ.	ಇಲಾಖೆಯ ಹೆಸರು.	ಮುಖ್ಯ ಮಾಹಿತಿ ಅಧಿಕಾರಿಗಳ ಹೆಸರು	ವಿಳಾಸ
4	SCRB, ರಾಜ್ಯ ಅಪರಾಧ ದಾಖಲಾತಿ ವಿಬಾಗ.	ಶ್ರೀ. ಬಲರಾಮನ್.ಎಸ್.ಕೆ.	ಪೊಲೀಸ ಉಪ ಮಹಾನಿರೀಕ್ಷಕರು, ರಾಜ್ಯ ಅಪರಾಧ ದಾಖಲಾತಿ ವಿಬಾಗ. ಬಹು ಮಹಡಿ ಕಟ್ಟಡ, ಡಾ, ಅಂಬೇಡ್ಕರ್ ರಸ್ತೆ,, ಬೆಂಗಳೂರು–560 001
5	ಕಾಲೇಜು ಶಿಕ್ಷಣ ಇಲಾಖೆ.	ಶ್ರೀ. ಭಾಗ್ಯವನ್.ಎಸ್.ಮುನಿಗೌಡರ್	ಉಪ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ., ಬೆಂಗಳೂರು–1
6	ಅಡ್ವೋಕೇಟ್ ಜನರಲ್ ಕಛೇರಿ	ಶ್ರೀ. ಭಾರ್ಗವ.	ಸಹಾಯಕ ಆಡಳಿತಾಧಿಕಾರಿಗಳು, ಅಡ್ವೋಕೇಟ್ ಜನರಲ್, ಹೈ ಕೋರ್ಟ್ ಕಟ್ಟಡ, ಡಾ, ಅಂಬೇಡ್ಕರ್ ರಸ್ತೆ, ಬೆಂಗಳೂರು–1
7	ಸಾರ್ವಜನಿಕ ಶಿಕ್ಷಣ ಇಲಾಖೆ,	ಶ್ರೀ. ಎಂ.ವಿ. ಪಾರ್ಥ ಸಾರಥಿ ರಾಜು.	ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೆ.ಆರ್. ಸರ್ಕಲ್, ನೃಪತುಂಗ ರಸ್ತೆ, ಬೆಂಗಳೂರು.
8	ಸೈನಿಕರ ಕಲ್ಯಾಣ ಮತ್ತು ಪುನರ್ವಸತಿ ಕೇಂದ್ರ.	ಶ್ರೀ. ದೇವರಾಜ್ ಅರಸ್	ಜಂಟಿ ನಿರ್ದೇಶಕರು, ಸೈನಿಕರ ಕಲ್ಯಾಣ ಮತ್ತು ಪುನರ್ವಸತಿ ಕೇಂದ್ರ. ನಂ, 58, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಭವನ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ರಸ್ತೆ, ಬೆಂಗಳೂರು
9	ಕಾರ್ಮಿಕ ವಿಮಾ ನಿರ್ದೇಶನಾಲಯ,	ಡಾ. ಗಂಗಾಧರ ಸ್ವಾಮಿ	ಸಹಾಯಕ ನಿರ್ದೇಶಕರು, ಕಾರ್ಮಿಕ ವಿಮಾ ನಿರ್ದೇಶನಾಲಯ, ಬೆಂಗಳೂರು–560 001.
10	ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.	ಶ್ರೀ. ಗಿರೀಶ. ಆರ್.	ಉಪ ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ನಂ. 49, ಖನಿಜ ಭವನ್, ರೇಸ್ ಕೋರ್ಸ ರಸ್ತೆ, ಬೆಂಗಳೂರು–1
11	ಕೃಷಿ ಇಲಾಖೆ.	ಶ್ರೀ. ಗೋಲ್ಲರ್. ಆರ್.ಬಿ.	ಜಂಟಿ ನಿರ್ದೇಶಕರು, ಕೃಷಿ ಇಲಾಖೆ. ಶೇಷಾದ್ರಿ ರಸ್ತೆ, ಬೆಂಗಳೂರು–1
12	ಕೃಷಿ ಮಾರುಕಟ್ಟೆ ನಿರ್ದೇಶನಾಲಯ.	ಶ್ರೀ. ಗೋಪಾಲ್.ಕೆ.ಟಿ.	ಜಂಟಿ ನಿರ್ದೇಶಕರು, ಕೃಷಿ ಮಾರುಕಟ್ಟೆ ನಿರ್ದೇಶನಾಲಯ, ನಂ. 16, ಅಂಚೆ ಪೆಟ್ಟಿಗೆ ಸಂಖ್ಯೆ–5309 ರಾಜಭವನ ರಸ್ತೆ, ಬೆಂಗಳೂರು–1
13	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ.	ಡಾ. ಹರೀಶ್	ಸಂಶೋಧನಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆನಂದ ರಾವ್ ವೃತ್ತ. ಬೆಂಗಳೂರು–560 009.
14	ಸಣ್ಣ ಉಳಿತಾಯ ಮತ್ತು ಲಾಟರಿ ಇಲಾಖೆ.	ಶ್ರೀಮತಿ. ಕಲಾವತಿ.ವಿ	ಸಹಾಯಕ ನಿರ್ದೇಶಕರು, ಸಣ್ಣ ಉಳಿತಾಯ ಮತ್ತು ಲಾಟರಿ ಇಲಾಖೆ. ವಿಶ್ವೇಶ್ವರಯ್ಯ ಗೋಪುರ, ಡಾ, ಅಂಬೇಡ್ಕರ್ ರಸ್ತೆ, ಬೆಂಗಳೂರು–1
15	ಭಾಷಾಂತರ ನಿರ್ದೇಶನಾಲಯ	ಶ್ರೀ. ಮಹದೇವ್.ಜಿ.	ಸಂಶೋಧನಾಧಿಕಾರಿ, ಭಾಷಾಂತರ ನಿರ್ದೇಶನಾಲಯ, 3ನೇ ಮಹಡಿ, ಎಫ್ ಬ್ಲಾಕ್, ಕಾವೇರಿ ಭವನ, ಬೆಂಗಳೂರು.
16	ಹಿಂದುಳಿದ ವರ್ಗಗಳ ನಿರ್ದೇಶನಾಲಯ.	ಶ್ರೀ. ಮಲ್ಲೇಶಪ್ಪ.ಹೆಚ್.ಸಿ.	ಉಪ ನಿರ್ದೇಶಕರು, ಹಿಂದುಳಿದ ವರ್ಗಗಳ ನಿರ್ದೇಶನಾಲಯ., ಬೆಂಗಳೂರು–1.
17	ರೇಷ್ಮೆ ಇಲಾಖೆ.	ಶ್ರೀಮತಿ. ಮಂಜುಳದೇವಿ.ಕೆ.ಎನ್.	ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಬಹು ಮಹಡಿ ಕಟ್ಟಡ, ಡಾ.ಅಂಬೇಡ್ಕರ್ ರಸ್ತೆ, ಬೆಂಗಳೂರು–560 001.
18	ಕಾರ್ಮಿಕ ಇಲಾಖೆ.	ಶ್ರೀ. ಮಂಜುನಾಥ.ಜಿ.	ಸಹಾಯಕ ಕಾರ್ಮಿಕ ಆಯುಕ್ತರು, ಕಾರ್ಮಿಕ ಆಯುಕ್ತರ ಕಛೇರಿ. ಕರ್ನಾಟಕ ಭವನ, ಐ.ಟಿ.ಐ. ಕಾಪೌಂಡ್, ಬನ್ನೇರು ಘಟ್ಟ ರಸ್ತೆ, ಬೆಂಗಳೂರು–29.

ಕ್ರ.ಸಂ.	ಇಲಾಖೆಯ ಹೆಸರು.	ಮುಖ್ಯ ಮಾಹಿತಿ ಅಧಿಕಾರಿಗಳ ಹೆಸರು	ವಿಳಾಸ
19	ಕಾನೂನು ಮಾಪನ ಇಲಾಖೆ.	ಶ್ರೀ. ಮಹಮದ್ ಜಹಂಗೀರ್	ಉಪ ನಿಯಂತ್ರಕರು, ಕಾನೂನು ಮಾಪನ ಇಲಾಖೆ. ಅಲಿಅಸ್ಕರ್ ರೋಡ್, ಬೆಂಗಳೂರು.
20	ಮೀನುಗಾರಿಕೆ ಇಲಾಖೆ	ಡಾ. ಮೂರ್ತಿ.ಸಿ.ಕೆ.	ಜಂಟಿ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಮಹಾವೀರ ಸಂಕೀರ್ಣ, ಕೆಂಪೆ ಗೌಡ ರಸ್ತೆ, ಬೆಂಗಳೂರು–9
21	ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ,	ಶ್ರೀ. ನಾಗರಾಜ.ಎ.	ಜಂಟಿ ನಿರ್ದೇಶಕರು, ಸಹಕಾರಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಶಂಕರ ಮಠ ರಸ್ತೆ, ಬಸವನಗುಡಿ, ಬೆಂಗಳೂರು.
22	ವಾಣಿಜ್ಯ ತೆರಿಗೆ ಇಲಾಖೆ.	ಶ್ರೀ. ನಾಗಾರ್ಜುನ್	ವಾಣಿಜ್ಯ ತೆರಿಗೆ ಉಪ ಆಯುಕ್ತರು, ವಾಣಿಜ್ಯ ತೆರಿಗೆ ಕಛೇರಿ, ಕೆಂಪೆ ಗೌಡ ರಸ್ತೆ, ಬೆಂಗಳೂರು–560 009.
23	ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ	ಶ್ರೀ. ನಾರಾಯಣ.ಕೆ.	ಜಂಟಿ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ಬಹು ಮಹಡಿ ಕಟ್ಟಡ, ಡಾ, ಅಂಬೇಡ್ಕರ್ ರಸ್ತೆ, ಬೆಂಗಳೂರು–560 001.
24	ಮಾಹಿತಿ ಮತ್ತು ಪ್ರಚಾರ ಇಲಾಖೆ.	ಶ್ರೀ. ನರೇಂದ್ರನಾಥ.ಆರ್.	ಉಪ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಶಿವಾಜಿ ನಗರ ಬಸ್ ನಿಲ್ದಾಣ, ಬೆಂಗಳೂರು.
25	ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.	ಶ್ರೀ. ಶಿವಶಂಕರ್	ಜಂಟಿ ನಿರ್ದೇಶಕರು, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹು ಮಹಡಿ ಕಟ್ಟಡ, ಡಾ, ಅಂಬೇಡ್ಕರ್ ರಸ್ತೆ, ಬೆಂಗಳೂರು–1
26	ಪಶು ಸಂಗೋಪನಾ ಇಲಾಖೆ.	ಶ್ರೀ. ಪರ್ವೀಝ್ ಅಹಮದ್ ಪೀರಾನ್	ಉಪ ನಿರ್ದೇಶಕರು, ಪಶು ಸಂಗೋಪನ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, ಡಾ,ಅಂಬೇಡ್ಕರ್ ರಸ್ತೆ, ಬೆಂಗಳೂರು–1
27	ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ.	ಶ್ರೀಮತಿ. ರಾಗಿಣಿ.ಬಿ.ಆರ್.	ಸಿಸ್ಟಮ್ ಅನಾಲಿಸ್ಟ್, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಆರಮನೆ ರಸ್ತೆ, ಬೆಂಗಳೂರು–1.
28	ಸಹಕಾರ ಸಂಘಗಳು.	ಶ್ರೀ. ಪಾಟೀಲ್.ಎಸ್.ಎಮ್.	ಜಂಟಿ ರಿಜಿಸ್ಟ್ರಾರ್, ಸಹಕಾರ ಸಂಘ ಗಳ ರಿಜಿಸ್ಟ್ರಾರ್, ಚಾಮರಾಜ ಪೇಟೆ, ಬೆಂಗಳೂರು–1.
29	ಬರ ಪರಿಹಾರ ಮತ್ತು ಉಸ್ತುವಾರಿ ಕೋಶ.	ಶ್ರೀ. ಪ್ರಭುಲಿಂಗಪ್ಪ.ಎ.ವಿ.	ಕಿರಿಯ ವಿಜ್ಞಾನಿ, ಬರ ಪರಿಹಾರ ಮತ್ತು ಉಸ್ತುವಾರಿ ಕೋಶ, ನಂ. 902, BWSSB ಕಟ್ಟಡ, ಕಾವೇರಿ ಭವನ, ಬೆಂಗಳೂರು–9
30	ರಾಜ್ಯ ಲೆಕ್ಕಪತ್ರ ಇಲಾಖೆ.	ಶ್ರೀ. ಪ್ರಸಾದ್. ಆರ್.ಕೆ.	ಹೆಚ್ಚುವರಿ ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, 6ನೇ ಮಹಡಿ, ಕಾವೇರಿ ಭವನ, ಬೆಂಗಳೂರು.
31	ಮುದ್ರಣಾ ನಿರ್ದೇಶನಾಲಯ	ಶ್ರೀ. ಪ್ರಶಾಂತ್.ಆರ್.ಕೆ	ಉಪ ನಿರ್ದೇಶಕರು, ಮುದ್ರಣಾ ನಿರ್ದೇಶನಾಲಯ, ಸರಕಾರಿ ಕೇಂದ್ರ ಮುದ್ರಣಾಲಯ, K.I.A.D.B, ಪೀಣ್ಯ 1ನೇ ಹಂತ, ಬೆಂಗಳೂರು.
32	ಕೃಷ್ಣ ಭಾಗ್ಯ ಜಲ ನಿಗಮ	ಶ್ರೀ. ಪಶುಪತಿ.ಆರ್.ಎಸ್.	ಕಾರ್ಯ ನಿರ್ವಾಹಕ ನಿರ್ದೇಶಕರು, ಕೃಷ್ಣ ಭಾಗ್ಯ ಜಲ ನಿಗಮ, ಪಿ.ಡಬ್ಲ್ಯೂ.ಡಿ ಕಛೇರಿ, 3 ನೆ ಮಹಡಿ, ಕೆ.ಆರ್, ವೃತ್ತ, ಬೆಂಗಳೂರು–1.
33	ಸಾಮೂಹಿಕ ಶಿಕ್ಷಣ ಇಲಾಖೆ,	ಡಾ. ರಾಜ ನಾಯಕ್.ಆರ್.ಎನ್.	ಉಪ ನಿರ್ದೇಶಕರು, ಸಾಮೂಹಿಕ ಶಿಕ್ಷಣ ಇಲಾಖೆ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–3.

ಕ್ರ.ಸಂ.	ಇಲಾಖೆಯ ಹೆಸರು.	ಮುಖ್ಯ ಮಾಹಿತಿ ಅಧಿಕಾರಿಗಳ ಹೆಸರು	ವಿಳಾಸ
34	ಗ್ರಂಥಾಲಯಗಳ ನಿರ್ದೇಶನಾಲಯ.	ಶ್ರೀ. ರಾಜೇಂದ್ರ ಕುಮಾರ್.ಪಿ.ವೈ.	ನಿರ್ದೇಶಕರು, ಗ್ರಂಥಾಲಯಗಳ ನಿರ್ದೇಶನಾಲಯ, ವಿಶ್ವೇಶ್ವರಯ್ಯ ಗೋಪುರ, ಡಾ, ಅಂಬೇಡ್ಕರ್ ರಸ್ತೆ, ಬೆಂಗಳೂರು-1
35	ಅರಣ್ಯ ಇಲಾಖೆ.	ಶ್ರೀ. ಮುನಿರೆಡ್ಡಿ.ಎಮ್.	ಮುಖ್ಯ ಆರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಇಲಾಖೆ. ಆರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
36	ಕರ್ನಾಟಕ ಗೆಜೆಟಿಯರ್,	ಶ್ರೀ. ರಾಜು.ಎಸ್.ಎನ್.	ಸಂಪಾದಕರು, ಮುಖ್ಯ ಸಂಪಾದಕರ ಕಛೇರಿ, ಕರ್ನಾಟಕ ಗೆಜೆಟಿಯರ್, ಕಾವೇರಿ ಭವನ, ಬೆಂಗಳೂರು-560 009
37	ಸಿ.ಓ.ಡಿ.	ಡಾ. ರವೀಂದ್ರನಾಥ್	ಪೊಲೀಸ್ ಉಪ ಮಹಾನಿರೀಕ್ಷಕರು, ಆರ್ಥಿಕ ಅಪರಾಧಗಳು, ಸಿ.ಓ.ಡಿ. ಅರಮನೆ ರಸ್ತೆ, ಬೆಂಗಳೂರು-1
38	ಪೌರಾಡಳಿತ ಇಲಾಖೆ.	ಶ್ರೀ. ಚನ್ನಪ್ಪಗೌಡ.	ಜಂಟಿ ನಿರ್ದೇಶಕರು, ಪೌರಾಡಳಿತ ಇಲಾಖೆ. ವಿಶ್ವೇಶ್ವರಯ್ಯ ಗೋಪುರ, ಡಾ, ಅಂಬೇಡ್ಕರ್ ರಸ್ತೆ, ಬೆಂಗಳೂರು-1
39	ಸಾರ್ವಜನಿಕ ವ್ಯಾಜ್ಯಗಳ ನಿರ್ದೇಶನಾಲಯ,	ಶ್ರೀ. ರೇಣುಕಾಚಾರ್ಯ.ಎಸ್.	ಹೆಡ್ ಕ್ವಾರ್ಟರ್ಸ್ ಅಸಿಸ್ಟೆಂಟ್, ಸಾರ್ವಜನಿಕ ವ್ಯಾಜ್ಯಗಳ ನಿರ್ದೇಶನಾಲಯ, ಕಾವೇರಿ ಭವನ, ಬೆಂಗಳೂರು-560 009
40	ಪ್ರವಾಸೋದ್ಯಮ ಇಲಾಖೆ.	ಶ್ರೀ. ಗೋಪಾಲ್	ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಖನಿಜ ಭವನ, ಬೆಂಗಳೂರು-1
41	ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ,	ಶ್ರೀ. ಮೃತ್ಯುಂಜಯ	ಉಪ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಕೃಷಿ ಭವನ, ಬೆಂಗಳೂರು
42	ಕೆ.ಜಿ.ಐ.ಡಿ	ಶ್ರೀಮತಿ. ಸಾವಿತ್ರಿ.ಕೆ.	ಉಪ ನಿರ್ದೇಶಕರು, ಕೆ.ಜಿ.ಐ.ಡಿ, ವಿಶ್ವೇಶ್ವರಯ್ಯ ಗೋಪುರ, ಡಾ, ಅಂಬೇಡ್ಕರ್ ರಸ್ತೆ, ಬೆಂಗಳೂರು-1
43	ವಾಸ್ತು ಶಿಲ್ಪಿ ಇಲಾಖೆ.	ಶ್ರೀಮತಿ. ಸಾವಿತ್ರಿ.ಕೆ.ಎನ್.	ಉಪ ವಾಸ್ತು ಶಿಲ್ಪಿಗಳು, ವಾಸ್ತು ಶಿಲ್ಪಿ ಇಲಾಖೆ, ಕೆ.ಆರ್, ವೃತ್ತ, ನೃಪತುಂಗ ರಸ್ತೆ, ಬೆಂಗಳೂರು-1
44	ಯುವ ಜನ ಸೇವೆ & ಕ್ರೀಡಾ ಇಲಾಖೆ.	ಶ್ರೀ. ಶೆಟ್ಟರ್.ಸಿ.ಜಿ.	ಜಂಟಿ ನಿರ್ದೇಶಕರು, ಯುವ ಜನ ಸೇವೆ & ಕ್ರೀಡಾ ಇಲಾಖೆ, ಬೆಂಗಳೂರು-560 001
45	ಪುರಾತನ ಮತ್ತು ಮ್ಯೂಸಿಯಂ,	ಶ್ರೀ. ಸಿದ್ದನ್ ಗೌಡರ್.ಹೆಚ್.ಎಮ್.	ಉಪ ನಿರ್ದೇಶಕರು, ಪುರಾತನ ಮತ್ತು ಮ್ಯೂಸಿಯಂ, ಮ್ಯೂಸಿಯಂ ರೋಡ್, ಬೆಂಗಳೂರು
46	ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ.	ಶ್ರೀ. ಶ್ರೀನಿವಾಸ್.ಎನ್.	ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಪೂರ್ವ ವಲಯ , ನಂ, 52, RBNM ಸ್ಕೂಲ್ ಮುಂಭಾಗ, ಸೆಂಟ್ ಜಾನ್ಸ್ ರಸ್ತೆ. ಬೆಂಗಳೂರು-42
47	ಕಾವೇರಿ ನೀರಾವರಿ ನಿಗಮ ನಿಯಮಿತ.	ಶ್ರೀ. ಸುರೇಶ್ ಕುಮಾರ್.	ಕಾವೇರಿ ನೀರಾವರಿ ನಿಗಮ ನಿಯಮಿತ, ಕಾಫೀ ಬೋರ್ಡ್ ಕಟ್ಟಡ, ನಂ.1, ಡಾ, ಅಂಬೇಡ್ಕರ್ ರಸ್ತೆ, ಬೆಂಗಳೂರು-560 001
48	ಔಷಧ ನಿಯಂತ್ರಣ ಇಲಾಖೆ.	ಶ್ರೀ. ಹಂಬರ್.ಎಮ್.ವಿ.	ಸಹಾಯಕ ಔಷಧ ನಿಯಂತ್ರಕರು, ಅರಮನೆ ರಸ್ತೆ, ಬೆಂಗಳೂರು
49	ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ.	ಶ್ರೀ. ಸೈಯದ್ ಇಲ್ಯಾಯಸ್ಅಹಮದ್.	ಉಪ ನಿರ್ದೇಶಕರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ. ಕೆ.ಆರ್.ವೃತ್ತ. ಬೆಂಗಳೂರು-560 001
50	ಮುದ್ರಾಂಕ ಮತ್ತು ನೊಂದಣಿ ಇಲಾಖೆ.	ಶ್ರೀ. ತಿಪ್ಪಣ್ಣ ಗೌಡ.	ಸಹಾಯಕ ಮಹಾ ನಿರೀಕ್ಷಕರು, ಮುದ್ರಾಂಕ ಮತ್ತು ನೊಂದಣಿ ಇಲಾಖೆ. ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು-560 009

ಕ್ರ.ಸಂ.	ಇಲಾಖೆಯ ಹೆಸರು.	ಮುಖ್ಯ ಮಾಹಿತಿ ಅಧಿಕಾರಿಗಳ ಹೆಸರು	ವಿಳಾಸ
51	ಸಮಾಜ ಕಲ್ಯಾಣ ನಿರ್ದೇಶನಾಲಯ.	ಶ್ರೀ. ತಿಮ್ಮಯ್ಯ.ಎಮ್.ವಿ.	ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ನಿರ್ದೇಶನಾಲಯ, ಬಹು ಮಹಡಿ ಕಟ್ಟಡ ಡಾ.ಅಂಬೇಡ್ಕರ್ ರಸ್ತೆ, ಬೆಂಗಳೂರು–560 001
52	ಪದವಿ ಪೂರ್ವ ಶಿಕ್ಷಣ ಇಲಾಖೆ.	ಶ್ರೀ. ತುಳಸಿಕುಮಾರ್.ಟಿ.ಎಸ್.	ಸಹಾಯಕ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು–1
53	ಕರ್ನಾಟಕ ರಾಜ್ಯ ಪತ್ರಾಲಯ,	ಶ್ರೀಮತಿ. ಉಷಾ ಸುರೇಶ್.	ಉಪ ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಲಯ, ರೂಮ್ ನಂ. 11, ವಿಧಾನ ಸೌಧ, ಬೆಂಗಳೂರು
54	ಗಣಿ ಮತ್ತು ಭೂ ಗರ್ಭ ಶಾಸ್ತ್ರ ಇಲಾಖೆ.	ಶ್ರೀ. ವೇಣುಗೋಪಾಲ್.ಪಿ.	ಉಪ ನಿರ್ದೇಶಕರು, ಗಣಿ ಮತ್ತು ಭೂ ಗರ್ಭ ಶಾಸ್ತ್ರ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
55	ಜಲಾನಯನ ಇಲಾಖೆ,	ಶ್ರೀ. ವೀರರಾಜು.ಪಿ.ವಿ	ಜಂಟಿ ನಿರ್ದೇಶಕರು, ಜಲಾನಯನ ಇಲಾಖೆ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು–560 009
56	ಖಜಾನೆ ನಿರ್ದೇಶನಾಲಯ.	ಶ್ರೀ. ವಿಜಯ ಕೃಷ್ಣ ಕುಮಾರ್.ಕೆ.ಟಿ.	ಉಪ ಖಜಾಧಿಕಾರಿಗಳು, ವಿಶ್ವೇಶ್ವರಯ್ಯ ಗೋಪುರ, ಪೋಡಿಯಂ ಬ್ಲಾಕ್, ಡಾ. ಅಂಬೇಡ್ಕರ್ ರಸ್ತೆ, ಬೆಂಗಳೂರು–1
57	ಜಲ ಸಂಪನ್ಮೂಲ ಇಲಾಖೆ.	ಶ್ರೀ. ವಿಜಯಕುಮಾರ್.ಆರ್.ಎನ್.	ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಲ ಸಂಪನ್ಮೂಲ ಇಲಾಖೆ. ಆನಂದ ರಾವ್ ವೃತ್ತ, ಬೆಂಗಳೂರು
58	ಕೈ ಮಗ್ಗ ಮತ್ತು ನಿರ್ದೇಶನಾಲಯ.	ಶ್ರೀ. ಯೋಗೇಶ್.ಸಿ.ಎಸ್.	ಸಹಾಯಕ ನಿರ್ದೇಶಕರು, ಕೈ ಮಗ್ಗ ಮತ್ತು ಜವಳಿ ನಿರ್ದೇಶನಾಲಯ, 14/3 A, 3ನೇ ಮಹಡಿ, RP ಭವನ, ನೃಪತುಂಗ ರಸ್ತೆ, ಬೆಂಗಳೂರು–1

ಜಿ. ಸತ್ಯವತಿ
ಸರ್ಕಾರದ ಉಪ ಕಾರ್ಯದರ್ಶಿ, ಇ-ಆಡಳಿತ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಸು)

ಪಿ.ಆರ್. 193

ಲೋಕೋಪಯೋಗಿ ಸಚಿವಾಲಯ

ವಿಷಯ : ರಾಜ್ಯದಲ್ಲಿನ ಕೆಲವು ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು.

ಓದಲಾಗಿದೆ :
1. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಬೆಂಗಳೂರು, ಇವರ ಪತ್ರ ಸಂಖ್ಯೆ: ಸಂಖ್ಯೆ:ಮುಇಂ: ಸಂಕದಃ ಎಇ–8:ಬೆಂ.ವಿ.ರಾ.ನಗರ ರಸ್ತೆಮೇಲ್ದರ್ಜೆಪ್ರಸ್ತಾವನೆ: 2004–05, ದಿನಾಂಕ:16–10–04.
2. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಬೆಂಗಳೂರು, ಇವರ ಪತ್ರ ಸಂಖ್ಯೆ: ಸಂಖ್ಯೆ: ಮುಇಂ:ಸಂಕದಃರಸ್ತೆ ಶಾಖೆ:ಎಇ–4:ಮೈ.ವಿ. :2004–05, ದಿನಾಂಕ:7–12–04.
3. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಬೆಂಗಳೂರು, ಇವರ ಪತ್ರ ಸಂಖ್ಯೆ: ಸಂಖ್ಯೆ: ಮುಇಂ:ಸಂಕದಃರಸಃಕುಣಿಗಲ್:ಮೇಲ್ದರ್ಜೆ: ಸಂಇ5: 50:2004–05, ದಿನಾಂಕ:26–11–04.
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉ) ಧಾರವಾಡ, ಇವರ ಪತ್ರ ಸಂಖ್ಯೆ: ಸಂಖ್ಯೆ: ಸಿಇಎನ್: ಲೋಇ: ಜೆಎಸ್ಎ: ರಸ್ತೆ: ಮೇಲ್ದರ್ಜೆ: 2004–05, ದಿನಾಂಕ:13–1–05.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ) ಬೆಂಗಳೂರು, ಇವರ ಪತ್ರ ಸಂಖ್ಯೆ: ಸಂಖ್ಯೆ: ಮುಇಂ:ಸಂಕದಃರಸ್ತೆಶಾಖೆ:ಮೇಲ್ದರ್ಜೆ:ಸಇಂ–ಎ ಹಾಸನಃ2004–05, ದಿನಾಂಕ 8–12–2004

ಪ್ರಸ್ತಾವನೆ:

ಮೇಲೆ ಓದಲಾದ ಪತ್ರಗಳಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಹಾಗೂ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ)ಧಾರವಾಡ ಇವರು ಸಲ್ಲಿಸಿರುವ ಈ ಕೆಳಕಂಡ ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ತಾಲ್ಲೂಕು	ರಸ್ತೆಯ ಹೆಸರು	ಉದ್ದ ಕಿಮೀಗಳಲ್ಲಿ
ರಾಮನಗರ	ದೇವರಸೇಗೌಡನದೊಡ್ಡಿ–ಹಳ್ಳಿಮಾಳ–ಮದರಸಾಬರದೊಡ್ಡಿ ಸೇರುವ ರಸ್ತೆ	5.00
	ಕಂಚುಗಾರನಹಳ್ಳಿಯಿಂದ ಮನಗಾನಹಳ್ಳಿ ಮಾರ್ಗವಾಗಿ ರಾಷ್ಟ್ರೀಯಹೆದ್ದಾರಿ 209ಸೇರುವ ರಸ್ತೆ	5.00
	ಬಿ.ಎಂ.ರಸ್ತೆಯಿಂದ ಮುತ್ತುರಾಯನಪಾಳ್ಯದ ಮಾರ್ಗವಾಗಿ ಕುರುಬರಕರೇನಹಳ್ಳಿಯನ್ನು ಸೇರುವ ರಸ್ತೆ	5.00
	ರಾಮಪುರದಿಂದ ಗುಡ್ಡದಹಳ್ಳಿ ಮಾರ್ಗವಾಗಿ ಕಾಕರಮಾನಹಳ್ಳಿ ಸೇರುವ ರಸ್ತೆ	5.00

ತಾಲ್ಲುಕು	ರಸ್ತೆಯ ಹೆಸರು	ಉದ್ದ ಕಿಮೀಗಳಲ್ಲಿ
ಕನಕಪುರ	ಕಗ್ಗಲಹಳ್ಳಿಯಿಂದ ಕೊಟ್ಟಗೆಹಳ್ಳಿಯನ್ನು ಸೇರುವ ರಸ್ತೆ	4.00
	ತುಗಣಿ-ಗೋಪಸಂದ್ರ-ರಾಮಪುರ-ಬಸವನಬನ್ನಿಕುಪ್ಪೆ-ಹನುಮಂತಪುರದಿಂದ ಬಿ.ಎಂ.ರಸ್ತೆಯನ್ನು ಸೇರುವ ರಸ್ತೆ	4.50
	ಹಾರೋಹಳ್ಳಿ-ಬಿಡದಿ ಕ್ರಾಸ್‌ರಸ್ತೆಯಿಂದ ಹುಲಿಗೊಂಡನಹಳ್ಳಿಯಿಂದ ನಾರಾಯಣಪುರ ಕಡಸಿಕೊಪ್ಪ ಮಾರ್ಗವಾಗಿ ದೊಂಬರತೊಟ್ಟಿಯನ್ನು ಸೇರುವ ರಸ್ತೆ	3.75
	ದೊಡ್ಡಕುರುಬರಹಳ್ಳಿಯಿಂದ ದೊಡ್ಡಕಬ್ಬಾಳುವನ್ನು ಸೇರುವ ರಸ್ತೆ	4.25
ಕುಣಿಗಲ್	ರಾಷ್ಟ್ರೀಯ ಹೆದ್ದಾರಿ 48 ರಿಂದ ಅಗ್ರಹಾರ-ಸಿಂಗೋನಹಳ್ಳಿ-ಮಂತ್ಯ-ಅಮೃತೂರು-ಇಂದಿರಾನಗರ ಸರ್ಕಲ್‌ನ್ನು ಸೇರುವ ರಸ್ತೆ	7.00
	ರಾಷ್ಟ್ರೀಯ ಹೆದ್ದಾರಿ 48 ರಿಂದ ದಾಸನಪುರ ಬಸವಮತ್ತಿಕೆರೆ ಮಾರ್ಗವಾಗಿ ಕೊತ್ತಿಪುರ-ಹೇರೂರು-ಗೌಡನಗೆರೆಯನ್ನು ಸೇರುವ ರಸ್ತೆ	6.00
	ಕೊತ್ತಿಗೆರೆ ಕಿಮೀ 14 ರಿಂದ ಹುರುಳುಗೆರೆ-ದೇವರಕನ್ನಸಂದ್ರ-ಯಲ್ಲಾಪುರ ಮಾರ್ಗವಾಗಿ ಯಡಿಯೂರು-ಕಲ್ಲೂರು ರಸ್ತೆಯನ್ನು ಸೇರುವ ರಸ್ತೆ	13.00
ಹುಣಸೂರು	ಬಿ.ಎಂ ರಸ್ತೆಯಿಂದ ಹುಣಸೂರು TAPCMS ಮಾರ್ಗವಾಗಿ ಧರ್ಮಪುರ ರಸ್ತೆಯನ್ನು ಸೇರುವ ರಸ್ತೆ	1.40
	ಬಿ.ಎಂ.ರಸ್ತೆಯಿಂದ ಶಿಕ್ಷಕ ಭವನ ಹುಣಸೂರು ಕಾಫಿ ವರ್ಕ್ಸ್ ಮಾರ್ಗ ಎಂ.ಬಿ.ರಸ್ತೆಗೆ ಸೇರುವ ರಸ್ತೆ	1.00
	ಬಿಳಿಕೆರೆ ಕರಿಮುದ್ದನಹಳ್ಳಿ ರಸ್ತೆಯ ಸರಪಳಿ 0.245 ಯಿಂದ ಎಂ.ಬಿ.ರಸ್ತೆಯನ್ನು ಸೇರುವ ರಸ್ತೆ	0.515
	ಹುಣಸೂರು-ಪಿರಿಯಾಪಟ್ಟಣ ರಸ್ತೆಯಿಂದ ಹುಣಸೂರು-ಹೆಚ್.ಡಿ.ಕೋಟೆಯನ್ನು ಸೇರುವ ರಸ್ತೆ	2.00
	ಹುಣಸೂರು-ಹೊಸರಾಮನಹಳ್ಳಿ ರಸ್ತೆಯಿಂದ ಬಿಳಿಕೆರೆ-ತರೀಕೆರೆ ರಸ್ತೆಯನ್ನು ಸೇರುವ ರಸ್ತೆ	4.00
ಸಕಲೇಶಪುರ	ಎಸ್.ಎ.ಸಿ ರಸ್ತೆಯ 5.60 ಕಿಮೀನಿಂದ ಬೈಕೆರೆಹಳ್ಳಿ-ನಾಗರಹಳ್ಳಿ-ನಾಗರಕಾಲೋನಿ-ನಾಗರಗಡಿ ಮಾರ್ಗವಾಗಿ ಎಸ್.ಎ.ಸಿ ರಸ್ತೆಯನ್ನು ಕಿಮೀ 2.50 ರಲ್ಲಿ ಸೇರುವ ರಸ್ತೆ	11.00
ಹಾಸನ	ಬೀಜಿಮಾರನಹಳ್ಳಿಯಿಂದ ಶ್ರೀ ಮಲ್ಲೇಶ್ವರ ದೇವಸ್ಥಾನ ಸೇರುವ ರಸ್ತೆ	3.50
ಬೆಂಗಳೂರು (ಉತ್ತರ)	ಗೊಲ್ಲಹಳ್ಳಿ-ಹೆಸರಘಟ್ಟ ರಸ್ತೆಯ ಸರಪಳಿ 1.50 ಕಿಮೀ ಯಿಂದ 9.60 ಕಿಮೀಗೆ ಸೇರುವ ರಸ್ತೆ	8.10
ಸಿದ್ದಾಪುರ	ಸಂತೇಗುಳಿಯಿಂದ ನಿಲ್‌ಕುಡ ರಸ್ತೆ	16.00
ಕುಂದಾಪುರ	ಹಟ್ಟಿ ಅಂಗಡಿಯಿಂದ ಹಟ್ಟಿ ಕುದುರು ರಸ್ತೆ	4.00

ಸರ್ಕಾರಿ ಆದೇಶ ಸಂಖ್ಯೆ: ಲೋಇ 137 ಸಿಆರ್‌ಎಂ 2004, ಬೆಂಗಳೂರು, ದಿನಾಂಕ:29ನೇ ಜನವರಿ, 2005

ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಹಾಗೂ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉತ್ತರ)ಧಾರವಾಡ ಇವರು ಸಲ್ಲಿಸಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳಲು ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ.

ತಾಲ್ಲೂಕು	ರಸ್ತೆಯ ಹೆಸರು	ಉದ್ದ ಕಿಮೀಗಳಲ್ಲಿ
ರಾಮನಗರ	ದೇವರಸೇಗೌಡನದೊಡ್ಡಿ-ಹಳ್ಳಿಮಾಳ-ಮದರಸಾಬರದೊಡ್ಡಿ ಸೇರುವ ರಸ್ತೆ	5.00
	ಕಂಚುಗಾರನಹಳ್ಳಿಯಿಂದ ಮನಗಾನಹಳ್ಳಿ ಮಾರ್ಗವಾಗಿ ರಾಷ್ಟ್ರೀಯಹೆದ್ದಾರಿ 209ಸೇರುವ ರಸ್ತೆ	5.00
	ಬಿ.ಎಂ.ರಸ್ತೆಯಿಂದ ಮುತ್ತುರಾಯನಪಾಳ್ಯದ ಮಾರ್ಗವಾಗಿ ಕುರುಬರಕರೇನಹಳ್ಳಿಯನ್ನು ಸೇರುವ ರಸ್ತೆ	5.00
	ರಾಮಪುರದಿಂದ ಗುಡ್ಡದಹಳ್ಳಿ ಮಾರ್ಗವಾಗಿ ಕಾಕರಮಾನಹಳ್ಳಿ ಸೇರುವ ರಸ್ತೆ	5.00
ಕನಕಪುರ	ಕಗ್ಗಲಹಳ್ಳಿಯಿಂದ ಕೊಟ್ಟಗೆಹಳ್ಳಿಯನ್ನು ಸೇರುವ ರಸ್ತೆ	4.00
	ತುಗಣಿ-ಗೋಪಸಂದ್ರ-ರಾಮಪುರ-ಬಸವನಬನ್ನಿಕುಪ್ಪೆ-ಹನುಮಂತಪುರದಿಂದ ಬಿ.ಎಂ.ರಸ್ತೆಯನ್ನು ಸೇರುವ ರಸ್ತೆ	4.50
	ಹಾರೋಹಳ್ಳಿ-ಬಿಡದಿ ಕ್ರಾಸ್‌ರಸ್ತೆಯಿಂದ ಹುಲಿಗೊಂಡನಹಳ್ಳಿಯಿಂದ ನಾರಾಯಣಪುರ ಕಡಸಿಕೊಪ್ಪ ಮಾರ್ಗವಾಗಿ ದೊಂಬರತೊಟ್ಟಿಯನ್ನು ಸೇರುವ ರಸ್ತೆ	3.75
	ದೊಡ್ಡಕುರುಬರಹಳ್ಳಿಯಿಂದ ದೊಡ್ಡಕಬ್ಬಾಳುವನ್ನು ಸೇರುವ ರಸ್ತೆ	4.25
ಕುಣಿಗಲ್	ರಾಷ್ಟ್ರೀಯ ಹೆದ್ದಾರಿ 48 ರಿಂದ ಅಗ್ರಹಾರ-ಸಿಂಗೋನಹಳ್ಳಿ-ಮಂತ್ಯ-ಅಮೃತುರಾರು-ಇಂದಿರಾನಗರ ಸರ್ಕಲ್‌ನ್ನು ಸೇರುವ ರಸ್ತೆ	7.00
	ರಾಷ್ಟ್ರೀಯ ಹೆದ್ದಾರಿ 48 ರಿಂದ ದಾಸನಪುರ ಬಸವಮತ್ತಿಕೆರೆ ಮಾರ್ಗವಾಗಿ ಕೊತ್ತಿಪುರ-ಹೇರೂರು-ಗೌಡನಗೆರೆಯನ್ನು ಸೇರುವ ರಸ್ತೆ	6.00
	ಕೊತ್ತಿಗೆರೆ ಕಿಮೀ 14 ರಿಂದ ಹುರುಳುಗೆರೆ-ದೇವರಕನ್ನಸಂದ್ರ-ಯಲ್ಲಾಪುರ ಮಾರ್ಗವಾಗಿ ಯಡಿಯೂರು-ಕಲ್ಲೂರು ರಸ್ತೆಯನ್ನು ಸೇರುವ ರಸ್ತೆ	13.00

ತಾಲ್ಲೂಕು	ರಸ್ತೆಯ ಹೆಸರು	ಉದ್ದ ಕಿಮೀಗಳಲ್ಲಿ
ಹುಣಸೂರು	ಬಿ.ಎಂ ರಸ್ತೆಯಿಂದ ಹುಣಸೂರು TAPCMS ಮಾರ್ಗವಾಗಿ ಧರ್ಮಪುರ ರಸ್ತೆಯನ್ನು ಸೇರುವ ರಸ್ತೆ	1.40
	ಬಿ.ಎಂ.ರಸ್ತೆಯಿಂದ ಶಿಕ್ಷಕ ಭವನ ಹುಣಸೂರು ಕಾಫಿ ವರ್ಕ್ಸ್ ಮಾರ್ಗ ಎಂ.ಬಿ.ರಸ್ತೆಗೆ ಸೇರುವ ರಸ್ತೆ	1.00
	ಬಿಳಿಕೆರೆ ಕರಿಮುದ್ದನಹಳ್ಳಿ ರಸ್ತೆಯ ಸರಪಳಿ 0.245 ಯಿಂದ ಎಂ.ಬಿ.ರಸ್ತೆಯನ್ನು ಸೇರುವ ರಸ್ತೆ	0.515
	ಹುಣಸೂರು–ಪಿರಿಯಾಪಟ್ಟಣ ರಸ್ತೆಯಿಂದ ಹುಣಸೂರು–ಹೆಚ್.ಡಿ.ಕೋಟೆಯನ್ನು ಸೇರುವ ರಸ್ತೆ	2.00
	ಹುಣಸೂರು–ಹೊಸರಾಮನಹಳ್ಳಿ ರಸ್ತೆಯಿಂದ ಬಿಳಿಕೆರೆ–ತರೀಕೆರೆ ರಸ್ತೆಯನ್ನು ಸೇರುವ ರಸ್ತೆ	4.00
ಸಕಲೇಶಪುರ	ಎಸ್.ಎ.ಸಿ ರಸ್ತೆಯ 5.60 ಕಿಮೀನಿಂದ ಬೈಕೆರೆಹಳ್ಳಿ–ನಾಗರಹಳ್ಳಿ–ನಾಗರಕಾಲೋನಿ–ನಾಗರಗಡಿ ಮಾರ್ಗವಾಗಿ ಎಸ್.ಎ.ಸಿ ರಸ್ತೆಯನ್ನು ಕಿಮೀ 2.50 ರಲ್ಲಿ ಸೇರುವ ರಸ್ತೆ	11.00
ಹಾಸನ	ಬೀಜೆಮಾರನಹಳ್ಳಿಯಿಂದ ಶ್ರೀ ಮಲ್ಲೇಶ್ವರ ದೇವಸ್ಥಾನ ಸೇರುವ ರಸ್ತೆ	3.50
ಬೆಂಗಳೂರು (ಉತ್ತರ)	ಗೊಲ್ಲಹಳ್ಳಿ–ಹೆಸರಘಟ್ಟ ರಸ್ತೆಯ ಸರಪಳಿ 1.50 ಕಿಮೀ ಯಿಂದ 9.60 ಕಿಮೀಗೆ ಸೇರುವ ರಸ್ತೆ	8.10
ಸಿದ್ದಾಪುರ	ಸಂತೇಗುಳಿಯಿಂದ ನಿಲ್‌ಕುಡ ರಸ್ತೆ	16.00
ಕುಂದಾಪುರ	ಹಟ್ಟಿ ಅಂಗಡಿಯಿಂದ ಹಟ್ಟಿ ಕುದುರು ರಸ್ತೆ	4.00

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಶೇಖ್ ಅಬ್ದುಲ್ ವಾಜಿದ್

ಪಿ.ಆರ್.194

ಸರ್ಕಾರದ ಅಧೀನ ಕಾರ್ಯದರ್ಶಿ

ಲೋಕೋಪಯೋಗಿ ಇಲಾಖೆ (ಸಂಪರ್ಕ).

ಕಾನೂನು ಸಚಿವಾಲಯ

ವಿಷಯ : ಮಂಗಳೂರು ಜಿಲ್ಲೆ ಮೂಡಬಿದ್ರಿ ಹೋಬಳಿಗೆ-ನೋಟರಿ ಹುದ್ದೆಯನ್ನು ಹೆಚ್ಚುವರಿಯಾಗಿ ಸೃಜಿಸುವ ಬಗ್ಗೆ.

ಓದಲಾಗಿದೆ : 1. ದಿನಾಂಕ: 29.01.2004ರ ಶಾಸಕರು, ಮೂಡಬಿದ್ರಿ ಇವರ ಪತ್ರ.

2. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಕ್ಷಿಣ ಕನ್ನಡ, ಮಂಗಳೂರು ಇವರ ಪತ್ರ ದಿನಾಂಕ: 27.05.2004.

ಪ್ರಸ್ತಾವನೆ:

ಮೇಲೆ ಓದಲಾಗಿರುವ ದಿನಾಂಕ: 29.01.2004ರ ಪತ್ರದಲ್ಲಿ ಮಾನ್ಯ ಶಾಸಕರು, ಮೂಡಬಿದ್ರಿ ಹೋಬಳಿ ಇಲ್ಲಿಗೆ ಎರಡು ಹೆಚ್ಚುವರಿ ನೋಟರಿ ಹುದ್ದೆ ಸೃಜಿಸುವಂತೆ ಕೋರಲಾಗಿದ್ದುದರ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ.

ಮೇಲೆ ಓದಲಾದ (2)ರ ದಿನಾಂಕ: 27.05.2004ರ ಪತ್ರದಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಕ್ಷಿಣ ಕನ್ನಡ ಇವರು ಮೂಡಬಿದ್ರೆ ಹೋಬಳಿಯಲ್ಲಿ ಪ್ರಸ್ತುತ ನೋಟರಿ ಹುದ್ದೆ ಇಲ್ಲದಿರುವುದರಿಂದ ಜನರ ಅನುಕೂಲಕ್ಕಾಗಿ ನೋಟರಿ ಹುದ್ದೆ ಸೃಜಿಸುವ ಅಗತ್ಯತೆ ಇದೆಯೆಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ 24 ಎಲ್‌ಸಿಎಲ್ 2004, ಬೆಂಗಳೂರು, ದಿನಾಂಕ: 24ನೇ ಜನವರಿ, 2005

ದಕ್ಷಿಣ ಕನ್ನಡ-ಮಂಗಳೂರು ಜಿಲ್ಲೆ ಮೂಡಬಿದ್ರಿ ಹೋಬಳಿಗೆ ಒಂದು ನೋಟರಿ ಹುದ್ದೆಯನ್ನು ಹೆಚ್ಚುವರಿಯಾಗಿ ಸೃಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಎಸ್. ಈಶ್ವರ ಪ್ರಸಾದ್

ಪಿ.ಆರ್.195

ಸರ್ಕಾರದ ಅಧೀನ ಕಾರ್ಯದರ್ಶಿ, ಕಾನೂನು ಇಲಾಖೆ (ಆಡಳಿತ-2).

ವಿಷಯ : ಶ್ರೀಮತಿ ಬಿ ನಾಗಸುಂದ್ರಮ್ಮ ನೋಟರಿ, ಸಕಲೇಶಪುರ ಇವರ ರಾಜೀನಾಮೆ ಅಂಗೀಕರಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಲಾ 03 ಎಲ್‌ಸಿಎಲ್ 2000, ದಿನಾಂಕ: 03.08.2000.

2. ನೋಟರಿಯವರ ಮನವಿ ದಿನಾಂಕ: 10.05.2004.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1) ದಿನಾಂಕ: 03.08.2000ದ ಸರ್ಕಾರಿ ಆದೇಶದಲ್ಲಿ ಶ್ರೀಮತಿ ಬಿ. ನಾಗಸುಂದ್ರಮ್ಮ ಇವರನ್ನು ಸಕಲೇಶಪುರ ಕಂದಾಯ ತಾಲ್ಲೂಕಿಗೆ ನೋಟರಿಯಾಗಿ ನೇಮಿಸಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (2)ರ ದಿನಾಂಕ: 10.05.2004ರ ಮನವಿ ಪತ್ರದಲ್ಲಿ ಶ್ರೀಮತಿ ಬಿ. ನಾಗಸುಂದ್ರಮ್ಮರವರು ಸಹಾಯಕ ಸರ್ಕಾರಿ ಅಭಿಯೋಜಕರು-ವ- ಸಹಾಯಕ ಸರ್ಕಾರಿ ವಕೀಲರಾಗಿ ನೇಮಕಾತಿ ಹೊಂದಿರುವುದರಿಂದ ತಾವು ನೋಟರಿ ಹುದ್ದೆಗೆ ರಾಜೀನಾಮೆ ನೀಡುತ್ತಿರುವುದಾಗಿ ತಿಳಿಸಿ ಅದನ್ನು ಅಂಗೀಕರಿಸಲು ಕೋರಿರುತ್ತಾರೆ. ಆದ್ದರಿಂದ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ 46 ಎಲ್‌ಸಿಎಲ್ 2004, ಬೆಂಗಳೂರು, ದಿನಾಂಕ: 18ನೇ ಜನವರಿ, 2005

ಶ್ರೀಮತಿ ಬಿ. ನಾಗಸುಂದ್ರಮ್ಮ ನೋಟರಿ, ಸಕಲೇಶಪುರ ಇವರು ನೋಟರಿ ಹುದ್ದೆಗೆ ಸಲ್ಲಿಸಿರುವ ರಾಜೀನಾಮೆಯನ್ನು ದಿನಾಂಕ: 10.05.2004 ರಿಂದ ಜಾರಿಗೆ ಬರುವಂತೆ ಅಂಗೀಕರಿಸಲಾಗಿದೆ ಮತ್ತು ಸದರಿಯವರ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ತೆಗೆದು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಎಸ್. ಈಶ್ವರ ಪ್ರಸಾದ್

ಪಿ.ಆರ್.196

ಸರ್ಕಾರದ ಅಧೀನ ಕಾರ್ಯದರ್ಶಿ, ಕಾನೂನು ಇಲಾಖೆ (ಆಡಳಿತ-2).

ವಿಷಯ : ಶ್ರೀ ರುದ್ರಯ್ಯ ಎಂ. ಗಂಜಿಗಟ್ಟಿ, ನೋಟರಿ, ಹಾವೇರಿ ಇವರ ರಾಜೀನಾಮೆ ಅಂಗೀಕರಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಲಾ 198 ಎಲ್‌ಸಿಎಲ್ 1999, ದಿನಾಂಕ: 28.01.2000.

2. ನೋಟರಿಯವರ ಮನವಿ ದಿನಾಂಕ: 10.05.2004.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1) ದಿನಾಂಕ: 28.01.2000ದ ಸರ್ಕಾರಿ ಆದೇಶದಲ್ಲಿ ಶ್ರೀ ರುದ್ರಯ್ಯ ಎಂ. ಗಂಜಿಗಟ್ಟಿ, ವಕೀಲರು, ಹಾವೇರಿ ಇವರನ್ನು ಕಂದಾಯ ತಾಲ್ಲೂಕಿನ ನೋಟರಿಯಾಗಿ ನೇಮಕ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮಾಂಕ (2)ರ ದಿನಾಂಕ: 10.05.2004ರ ಮನವಿ ಪತ್ರದಲ್ಲಿ ಶ್ರೀ ರುದ್ರಯ್ಯ ಎಂ. ಗಂಜಿಗಟ್ಟಿ ರವರು ಸಹಾಯಕ ಸರ್ಕಾರಿ ಅಭಿಯೋಜಕರಾಗಿ ನೇಮಕಾತಿ ಹೊಂದಿರುವುದರಿಂದ ತಾವು ನೋಟರಿ ಹುದ್ದೆಗೆ ರಾಜೀನಾಮೆ ಸಲ್ಲಿಸಿರುವುದಾಗಿ ತಿಳಿಸಿ ಅದನ್ನು ಅಂಗೀಕರಿಸಲು ಕೋರಿರುತ್ತಾರೆ. ಆದ್ದರಿಂದ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ 49 ಎಲ್‌ಸಿಎಲ್ 2004, ಬೆಂಗಳೂರು, ದಿನಾಂಕ: 18ನೇ ಜನವರಿ, 2005

ಶ್ರೀ ರುದ್ರಯ್ಯ ಎಂ. ಗಂಜಿಗಟ್ಟಿ, ನೋಟರಿ, ಹಾವೇರಿ ಇವರು ನೋಟರಿ ಹುದ್ದೆಗೆ ಸಲ್ಲಿಸಿರುವ ರಾಜೀನಾಮೆಯನ್ನು ದಿನಾಂಕ: 10.05.2004 ರಿಂದ ಜಾರಿಗೆ ಬರುವಂತೆ ಅಂಗೀಕರಿಸಲಾಗಿದೆ ಮತ್ತು ಸದರಿಯವರ ಹೆಸರನ್ನು ನೋಟರಿ ರಿಜಿಸ್ಟರ್‌ನಿಂದ ತೆಗೆದುಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಎಸ್. ಈಶ್ವರ ಪ್ರಸಾದ್

ಸರ್ಕಾರದ ಅಧೀನ ಕಾರ್ಯದರ್ಶಿ,

ಕಾನೂನು ಇಲಾಖೆ (ಆಡಳಿತ-2).

ಪಿ.ಆರ್.197

ವಿಷಯ : ದಾವಣಗೆರೆ ಜಿಲ್ಲೆ ದಾವಣಗೆರೆ ಕಂದಾಯ ತಾಲ್ಲೂಕು ಕ್ಷೇತ್ರಕ್ಕೆ ಒಂದು ನೋಟರಿ ಹುದ್ದೆಯನ್ನು ಹೆಚ್ಚುವರಿಯಾಗಿ ಸೃಜಿಸುವ ಬಗ್ಗೆ.

ಓದಲಾಗಿದೆ : 1. ದಿನಾಂಕ: 22.07.2004ರ ಶಾಸಕರು, ಕಡೂರು ಇವರ ಪತ್ರ.

2. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ ಇವರ ಪತ್ರ ದಿನಾಂಕ: 14.10.2004.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1) ದಿನಾಂಕ: 22.07.2004ರ ಪತ್ರದಲ್ಲಿ ಕಡೂರು ಕ್ಷೇತ್ರದ ಶಾಸಕರು ಉಪ ಮುಖ್ಯ ಮಂತ್ರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ದಾವಣಗೆರೆ ಜಿಲ್ಲೆಯ ಜನಸಂಖ್ಯೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ದಾವಣಗೆರೆಗೆ ಇನ್ನೊಂದು ನೋಟರಿ ಹುದ್ದೆ ಸೃಜಿಸುವಂತೆ ಕೋರಿರುತ್ತಾರೆ.

ಅದರಂತೆ ಈ ಬಗ್ಗೆ ಪರಿಶೀಲಿಸಲು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ದಾವಣಗೆರೆ ಇವರ ಅಭಿಪ್ರಾಯ ಕೋರಲಾಗಿ, ಮೇಲೆ ಓದಲಾದ ಕ್ರಮಾಂಕ (2)ರ ದಿನಾಂಕ: 14.10.04ರ ಪತ್ರದಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ ಇವರು ದಾವಣಗೆರೆ ಜಿಲ್ಲಾ ಕೇಂದ್ರವಾಗಿದ್ದು ಎಲ್ಲಾ ಜಿಲ್ಲಾ ಕಛೇರಿಗಳು ಮತ್ತು ತಾಲ್ಲೂಕು ಕಛೇರಿಗಳು ಇರುತ್ತವೆ. ಇದು ಒಂದು ವಾಣಿಜ್ಯ ಕೇಂದ್ರವಾಗಿರುತ್ತದೆ. ಹಾಗೂ ಒಟ್ಟು 11 ನ್ಯಾಯಾಲಯಗಳೂ ಸಹ ಕಾರ್ಯನಿರ್ವಹಿಸುತ್ತಿರುತ್ತವೆ. ಜನಸಂಖ್ಯೆ ಅಧಿಕವಾಗುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚುವರಿಯಾಗಿ ಒಂದು ನೋಟರಿ ಹುದ್ದೆ ಸೃಜಿಸುವ ಅಗತ್ಯತೆ ಇದೆಯೆಂದು ಅಭಿಪ್ರಾಯ ನೀಡಿರುತ್ತಾರೆ. ಈ ಹಿನ್ನೆಲೆಯನ್ನು ಪರಿಗಣಿಸಿ ಸರ್ಕಾರವು ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಲಾ 64 ಎಲ್‌ಸಿಎಲ್ 2004, ಬೆಂಗಳೂರು, ದಿನಾಂಕ: 19ನೇ ಜನವರಿ, 2005

ದಾವಣಗೆರೆ ಜಿಲ್ಲೆಯ ದಾವಣಗೆರೆ ಕಂದಾಯ ತಾಲ್ಲೂಕು ಕ್ಷೇತ್ರಕ್ಕೆ ಒಂದು ನೋಟರಿ ಹುದ್ದೆಯನ್ನು ಹೆಚ್ಚುವರಿಯಾಗಿ ಸೃಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಎಸ್. ಈಶ್ವರ ಪ್ರಸಾದ್

ಸರ್ಕಾರದ ಅಧೀನ ಕಾರ್ಯದರ್ಶಿ,

ಕಾನೂನು ಇಲಾಖೆ (ಆಡಳಿತ-2).

ಪಿ.ಆರ್.198

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬಿಜಾಪುರ ಜಿಲ್ಲೆ ಹಾಗೂ ತಾಲ್ಲೂಕು ಪಡಗಾನೂರ ಜಿನುಗು ಕೆರೆ ನಿರ್ಮಾಣಕ್ಕಾಗಿ ಶಿವಣಗಿ ಗ್ರಾಮದ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಂಡ ನ್ಯಾಯಾಲಯದ ಆದೇಶದಂತೆ ರೂ.658470/- ಗಳನ್ನು ಪಾವತಿಸಲು ಹಣಭರವಸೆ ಪತ್ರ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ದಿನಾಂಕ: 01.09.2004ರ ಪತ್ರ ವ್ಯವಹಾರದೊಂದಿಗೆ ಅಂತ್ಯಗೊಂಡಿರುವ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂ:ಮುಇಂ/ ಸನೀಉವ/ ಭೂಸ್ವಾಪ್ರ/ 2004-2005/ 4342.

ಪ್ರಸ್ತಾವನೆ:

ಬಿಜಾಪುರ ಜಿಲ್ಲೆ ಸಿಂಧಗಿ ತಾಲ್ಲೂಕು ಪಡಗಾನೂರ ಜಿನುಗು ಕೆರೆ ನಿರ್ಮಾಣಕ್ಕಾಗಿ ಶಿವಣಗಿ ಗ್ರಾಮದ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆಯನ್ನು ದಿನಾಂಕ: 20.11.1997ರಲ್ಲಿ ಹೊರಡಿಸಿ ದಿನಾಂಕ: 11.12.1997ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ ಹಾಗೂ ಕಲಂ 6(1) ರಡಿ ಅಧಿಸೂಚನೆಯನ್ನು ದಿನಾಂಕ: 14.01.1999ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ. ಭೂಪರಿಹಾರ ಧನದ ಬಗ್ಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಉಪವಿಭಾಗಾಧಿಕಾರಿಗಳು, ಬಿಜಾಪುರ ಉಪವಿಭಾಗ ಇವರು ದಿನಾಂಕ 19.08.2000ರಲ್ಲಿ ಐತೀರ್ಪು ಹೊರಡಿಸಿ, ಜಮೀನುಗಳು ಕೆಂಪು ಮಸಾರಿ ಇದ್ದು ಫಲವತ್ತಾದ ಜಮೀನು ಇರುವುದಿಲ್ಲವಾದ್ದರಿಂದ ಉಪನೋಂದಣಾಧಿಕಾರಿಗಳು, ಬಿಜಾಪುರ ಇವರು ಸಲ್ಲಿಸಿದ ಮಾರಾಟ ಪತ್ರಿಕೆಯನ್ನು ಪರಿಶೀಲಿಸಿ ಸರಾಸರಿ ಮಾರಾಟ ಬೆಲೆ ಪ್ರತಿ ಎಕರೆಗೆ ರೂ.13,000/- ಗಳೆಂದು ಶೇ.30ರಷ್ಟು ನಷ್ಟ ಭರಣ ಹಣ ಹಾಗೂ ಶೇ.12ರಷ್ಟು (ದಿನಾಂಕ: 12.01.1998ರಿಂದ 15.06.2000ರ ವರೆಗೆ) ಹೆಚ್ಚುವರಿ ಮಾರುಕಟ್ಟೆ ಬೆಲೆ ಎಂದು ನಿಗದಿಪಡಿಸಿ ಒಟ್ಟು 16 ಎಕರೆ 11 ಗುಂಟೆ ಜಮೀನುಗಳಿಗೆ 3,32,536/- ರೂ.ಗಳಿಗೆ ಐತೀರ್ಪು ಆದೇಶ ಹೊರಡಿಸಿರುತ್ತಾರೆ.

ಭೂಸ್ವಾಧೀನಕ್ಕೆ ಒಳಪಟ್ಟ 16 ಎಕರೆ 11 ಗುಂಟೆ ಜಮೀನಿನ ಪೈಕಿ (ಸರ್ವೆ ನಂ. 432ರ 4.18 ಎಕರೆ ಜಮೀನು ಮಾಲೀಕರನ್ನು ಹೊರತುಪಡಿಸಿ) 11.33 ಎಕರೆ ಜಮೀನಿನ ಭೂಮಾಲೀಕರು ದಿನಾಂಕ: 19.08.2000ರ ಐತೀರ್ಪಿನಲ್ಲಿ ನಿಗದಿಪಡಿಸಿರುವ ಪರಿಹಾರಧನವನ್ನು ಒಪ್ಪಿಕೊಳ್ಳದೆ ಭೂಸ್ವಾಧೀನ ಕಾಯ್ದೆ ಕಲಂ 18(2)ರಡಿ ಹೆಚ್ಚಿನ ಪರಿಹಾರಕ್ಕಾಗಿ ಎಲ್ಎಸಿ 223/01 ರಿಂದ 226/01 ರವರೆಗೆ ಮತ್ತು 272/02ರಲ್ಲಿ ಪ್ರಿನ್ಸಿಪಲ್ ಜಡ್ಜ್ (ಸೀನಿಯರ್ ಡಿವಿಜನ್) ಮತ್ತು ಸಿಜೆಎಂ ನ್ಯಾಯಾಲಯ, ಬಿಜಾಪುರ ಇಲ್ಲಿ ದಾವೆ ದಾಖಲಿಸಿದ್ದು ನ್ಯಾಯಾಲಯವು ಈ ಬಗ್ಗೆ ದಿನಾಂಕ: 11.09.2003ರಲ್ಲಿ ಈ ಎಲ್ಲಾ ಪ್ರಕರಣಗಳಿಗೆ ನೀಡಿದ ಏಕರೂಪ ಆದೇಶದಲ್ಲಿ ಹೆಚ್ಚಿನ ಪರಿಹಾರ ನೀಡಲು ಆದೇಶಿಸಿದೆ. ಸಿವಿಲ್ ನ್ಯಾಯಾಲಯದ (ಸೀನಿಯರ್ ಡಿವಿಜನ್) ಆದೇಶದ ಮೇಲೆ ಮೇಲ್ಮನವಿ ಸಲ್ಲಿಸುವ ಅಗತ್ಯವಿಲ್ಲವೆಂದು ಕಾನೂನು ಇಲಾಖೆಯು ದಿನಾಂಕ: 16.09.2004ರ ಸಂಖ್ಯೆ: ಎಲ್ಎಡಬ್ಲ್ಯೂ 1187 ಎಲ್ಬಿಎಸ್ 2003ರಲ್ಲಿ ಅಭಿಪ್ರಾಯ ನೀಡಿರುವುದರಿಂದ ಭೂಮಾಲೀಕರಿಗೆ ನೀಡಬೇಕಾದ ಪರಿಹಾರಧನವನ್ನು ಲೆಕ್ಕಹಾಕಲಾಗಿದ್ದು ಒಟ್ಟು ಮೊತ್ತ ರೂ.6,58,470/- ಗಳನ್ನು ಬಿಡುಗಡೆ ಮಾಡುವಂತೆ ಕೋರಿ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಸರ್ಕಾರಕ್ಕೆ ಮೇಲೆ ಓದಲಾದ ದಿನಾಂಕ: 01.09.2004ರ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿರುವುದರಿಂದ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 88 ಭೂಸ್ವಾಪ್ರ 2004, ಬೆಂಗಳೂರು, ದಿನಾಂಕ: 29ನೇ ಜನವರಿ, 2005

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಬಿಜಾಪುರ ಜಿಲ್ಲೆ ಸಿಂಧಗಿ ತಾಲ್ಲೂಕು ಪಡಗಾನೂರ ಜಿನುಗು ಕೆರೆ ನಿರ್ಮಾಣಕ್ಕಾಗಿ ಶಿವಣಗಿ ಗ್ರಾಮದ ಭೂಸ್ವಾಧೀನ ಪ್ರಕರಣಗಳಲ್ಲಿ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯವು ಎಲ್ಎಸಿ ಸಂಖ್ಯೆ: 223, 224, 225, 226/01 ಮತ್ತು 272/02 ಗಳಲ್ಲಿ ನೀಡಿದ ಆದೇಶದಂತೆ ಲೆಕ್ಕ ಹಾಕಲಾದ ಒಟ್ಟು ಪರಿಹಾರಧನದ ಮೊತ್ತ ರೂ6,58,470/- (ಆರು ಲಕ್ಷದ ಐವತ್ತೆಂಟು ಸಾವಿರದ ನಾಲ್ಕು ನೂರ ಎಪ್ಪತ್ತು ರೂಪಾಯಿಗಳು ಮಾತ್ರ) ಗಳನ್ನು ಲೆಕ್ಕಶೀರ್ಷಿಕೆ 4702 (ಯೋಜನೆ) ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳ ಇತ್ಯರ್ಥ ಅಡಿ ಎರಡನೇ ಪೂರಕ ಅನುದಾನದಲ್ಲಿ ಸೇರಿಸಿ ಪಾವತಿಸಲು ಸರ್ಕಾರವು ಮಂಜೂರಾತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಬ್ಲ್ಯೂಡಿ 1077/ ಎಫ್‌ಸಿ-1/2004 ದಿನಾಂಕ: 17.11.2004ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎನ್. ಮಂಜುನಾಥ
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಪಿ.ಆರ್.199

ಒಳಾಡಳಿತ ಸಚಿವಾಲಯ

ವಿಷಯ : ಶೀಘ್ರ ವಿಲೇವಾರಿ ನ್ಯಾಯಾಲಯಗಳಲ್ಲಿ 30 ಸರ್ಕಾರಿ ಅಭಿಯೋಜಕರ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ :
1. ಮಹಾ ನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಜೆಓಬಿ (1) 585:2000 ದಿನಾಂಕ: 30.04.2004.
2. ಸರ್ಕಾರಿ ಆದೇಶ ಸಂಖ್ಯೆ: ಲಾ 369 ಎಲ್ಎಎಮ್ 2000 ದಿನಾಂಕ: 29.05.2001.
3. ಸರ್ಕಾರಿ ಆದೇಶ ಸಂಖ್ಯೆ: ಲಾ 11 ಎಲ್‌ಸಿಇ 2003, ದಿನಾಂಕ: 20.03.2003.
4. ಸರ್ಕಾರಿ ಆದೇಶ ಸಂಖ್ಯೆ: ಲಾ 11 ಎಲ್‌ಸಿಇ 2003, ದಿನಾಂಕ: 31.10.2003.
5. ಸರ್ಕಾರಿ ಆದೇಶ ಸಂಖ್ಯೆ: ಲಾ 11 ಎಲ್‌ಸಿಇ 2003 ದಿನಾಂಕ: 20.03.2004.

ಪ್ರಸ್ತಾವನೆ:

ಮೇಲೆ (2) ಮತ್ತು (3)ರಲ್ಲಿ ಸೃಜಿಸಲಾಗಿರುವ ಶೀಘ್ರ ವಿಲೇವಾರಿ ನ್ಯಾಯಾಲಯಗಳಿಗೆ ಶೀಘ್ರವಾಗಿ ಸರ್ಕಾರಿ ಅಭಿಯೋಜಕರನ್ನು ನೇಮಿಸುವಂತೆ ಮೇಲೆ (1)ರಲ್ಲಿ ಓದಲಾಗಿರುವ ದಿನಾಂಕ: 30.04.2004ರ ಪತ್ರದಲ್ಲಿ ಕೋರಿಕೆ ಸಲ್ಲಿಸಲಾಗಿದೆ. ಸರ್ಕಾರಿ ಅಭಿಯೋಜಕರು ಇಲ್ಲದೆ ಶೀಘ್ರ ವಿಲೇವಾರಿ ನ್ಯಾಯಾಲಯಗಳು ಕಾರ್ಯನಿರ್ವಹಿಸಲು ಆಗದೇ ಇರುವುದರಿಂದ ಶೀಘ್ರ ವಿಲೇವಾರಿ ನ್ಯಾಯಾಲಯಗಳು ಯಾವ ಉದ್ದೇಶಕ್ಕಾಗಿ ಸ್ಥಾಪಿಸಲಾಗಿದೆಯೋ ಆ ಉದ್ದೇಶವನ್ನು ಸಾಕಾರಗೊಳಿಸಲು ಆಗದೇ ಇರುವುದರಿಂದ ಸರ್ಕಾರಿ ಅಭಿಯೋಜಕರನ್ನು ನೇಮಿಸುವಂತೆ ಕೋರಲಾಗಿದೆ. ಕರ್ನಾಟಕ ಉಚ್ಚ ನ್ಯಾಯಾಲಯವು ಕ್ರಿಮಿನಲ್ ಅಪೀಲು ಸಂಖ್ಯೆ: 2064:02 ರಲ್ಲಿ ಶೀಘ್ರ ವಿಲೇವಾರಿ ನ್ಯಾಯಾಲಯಗಳಲ್ಲಿನ ವಿಶೇಷ ಸರ್ಕಾರಿ ಅಭಿಯೋಜಕರ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ಆಗಿರುವ ವಿಳಂಬವನ್ನು ಕರ್ನಾಟಕ ಸರ್ಕಾರದ ಗಮನಕ್ಕೆ ತಂದಿರುತ್ತದೆ.

ಕರ್ನಾಟಕ ನ್ಯಾಯಾಂಗ ಆಡಳಿತವನ್ನು ಮೇಲ್ದರ್ಜೆಗೆ ಏರಿಸುವ ಸಲುವಾಗಿ 11ನೇ ಹಣಕಾಸು ಆಯೋಗವು ರೂ. 2,702-00 ಲಕ್ಷಗಳನ್ನು ನೀಡಿರುವುದರಿಂದ ಮತ್ತು ಶೀಘ್ರ ವಿಲೇವಾರಿ ನ್ಯಾಯಾಲಯಗಳನ್ನು ಸ್ಥಾಪಿಸಿದ ಉದ್ದೇಶವನ್ನು ಅನುಷ್ಠಾನಗೊಳಿಸುವ ಅಗತ್ಯವಿರುವುದರಿಂದ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಒಇ 32 ಪಿಪಿಇ 2004, ಬೆಂಗಳೂರು, ದಿನಾಂಕ: 25ನೇ ಜನವರಿ, 2005

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಗಾಗಿ ರೂ9580-260-10880-320-13440-380-14200ರ ವೇತನ ಶ್ರೇಣಿಯಲ್ಲಿ 30 ಸರ್ಕಾರಿ ಅಭಿಯೋಜಕರ ಹುದ್ದೆಗಳನ್ನು ಈ ಕೆಳಕಂಡ ಶೀಘ್ರ ವಿಲೇವಾರಿ ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ದಿನಾಂಕ: 12.11.2004ರಿಂದ ಜಾರಿಗೆ ಬರುವಂತೆ ಶೀಘ್ರ ವಿಲೇವಾರಿ ನ್ಯಾಯಾಲಯಗಳ ಕಾರ್ಯ ಮುಗಿಯುವವರೆಗೆ ಅಥವಾ ಒಂದು ವರ್ಷದ ಅವಧಿಯವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ತಾತ್ಕಾಲಿಕವಾಗಿ ಸೃಜಿಸಲು ಮಂಜೂರಾತಿಯನ್ನು ನೀಡಲಾಗಿದೆ.

1.	3ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಬೀದರ್.	2.	3ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಬೆಂಗಳೂರುನಗರ.
3.	1ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಹಾವೇರಿ.	4.	4ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಬೆಂಗಳೂರುನಗರ.
5.	1ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ರಾಮದುರ್ಗ.	6.	5ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಬೆಂಗಳೂರುನಗರ.
7.	3ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಶಿವಮೊಗ್ಗ.	8.	6ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಬೆಂಗಳೂರುನಗರ.
9.	7ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಬೆಂಗಳೂರುನಗರ.	10.	1ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಜಮಖಂಡಿ.

11.	2ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಬಾಗಲಕೋಟೆ.	12.	1ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಹೊಸಪೇಟೆ.
13.	8ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಬೆಂಗಳೂರುನಗರ.	14.	2ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಬಿಜಾಪುರ.
15.	9ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಬೆಂಗಳೂರುನಗರ.	16.	10ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಬೆಂಗಳೂರುನಗರ.
17.	2ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ, ಬೆಂಗಳೂರು.	18.	3ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ, ಬೆಂಗಳೂರು.
19.	4ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಬೆಳಗಾವಿ.	20.	4ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ, ಬೆಂಗಳೂರು.
21.	2ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಕಾರವಾರ.	22.	3ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ರಾಯಚೂರು.
23.	1ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಚಾಮರಾಜನಗರ.	24.	5ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ, ಬೆಂಗಳೂರು.
25.	1ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಕೊಳ್ಳೇಗಾಲ.	26.	5ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಮೈಸೂರು.
27.	4ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಕೋಲಾರ.	28.	3ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಮಂಡ್ಯ.
29.	4ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಮಂಡ್ಯ.	30.	1ನೇ ಶೀಘ್ರ ವಿಲೇವಾರಿ ನ್ಯಾಯಾಲಯ, ಚಿಕ್ಕಬಳ್ಳಾಪುರ.

ಈ ಬಗ್ಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ ``2014- Administration of Justice-105-Civil and Sessions Court-02-Establishment of New and Additional Courts" ಕ್ಕೆ ವೆಚ್ಚ ಹಾಕತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ: ಆಇ 1988 ವೆಚ್ಚ 6:2004 ದಿನಾಂಕ: 07.01.2005ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಕೆ. ಗುಂಡೂರಾವ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ, (ಕಾನೂನು ಮತ್ತು ಸುವ್ಯವಸ್ಥೆ ಮತ್ತು ಅಭಿಯೋಗಗಳು).

ಪಿ.ಆರ್.200

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನೀರಿನ ದರವನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಯುಡಿ 60 ಎಂಎನ್‌ಐ 2001, ದಿನಾಂಕ: 20.12.2001.
2. ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಯುಡಿ 139 ಎಂಎನ್‌ಐ 91, ದಿನಾಂಕ: 17.07.1991.
3. ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು, ಇವರ ಪತ್ರ ಸಂಖ್ಯೆ: ಬಿಡಬ್ಲ್ಯೂಎಸ್‌ಎಸ್‌ಬಿ/ ಸಿಹೆಚ್‌ಓ/169/ 2004, ದಿನಾಂಕ: 01.09.2004.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ: 20.12.2001ರ ಸರ್ಕಾರಿ ಆದೇಶದಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಹೆಚ್ಚಿನ ನಿರ್ವಹಣಾ ವೆಚ್ಚ ಭರಿಸಲು ನೀರಿನ ದರವನ್ನು ಹೆಚ್ಚಿಸಲು ಸರ್ಕಾರ ಮಂಜೂರಾತಿ ನೀಡಿತ್ತು.

ಮೇಲೆ (2)ರಲ್ಲಿ ಓದಲಾದ ದಿನಾಂಕ: 17.07.1991ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ಕಂಪನಿ ಲಿಮಿಟೆಡ್, ವಿದ್ಯುಚ್ಛಕ್ತಿ ದರವನ್ನು ಯಾವಾಗ ಪರಿಷ್ಕರಿಸುತ್ತದೆಯೋ ಆಗ ಅದೇ ಅನುಪಾತದಲ್ಲಿ ನೀರಿನ ದರವನ್ನು ಪರಿಷ್ಕರಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಅಧಿಕಾರ ನೀಡಿದೆ. ಇದರಂತೆಯೇ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ದಿನಾಂಕ: 01.08.2002 ರಿಂದ ಜಾರಿಗೆ ಬರುವಂತೆ ನೀರಿನ ದರವನ್ನು ಪರಿಷ್ಕರಿಸಿದೆ.

ಮೇಲೆ (3)ರಲ್ಲಿ ಓದಲಾದ ದಿನಾಂಕ: 01.09.2004ರ ಪತ್ರದಲ್ಲಿ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಇವರು ದಿನಾಂಕ: 01.04.2003ರಿಂದ ಜಾರಿಗೆ ಬರುವಂತೆ ಕರ್ನಾಟಕ ವಿದ್ಯುತ್ ಸರಬರಾಜು ಕಂಪನಿಯು ವಿದ್ಯುಚ್ಛಕ್ತಿ ದರವನ್ನು ಹೆಚ್ಚಿಸಿದ್ದು, ಇದರಿಂದ ಮಂಡಳಿಗೆ ಪ್ರತಿ ತಿಂಗಳು ರೂ.43 ಲಕ್ಷದಂತೆ ವರ್ಷಕ್ಕೆ 5.16 ಕೋಟಿ ಅಧಿಕ ವೆಚ್ಚ ತಗಲುತ್ತದೆ. ಇದರ ಜೊತೆಗೆ ಮಂಡಳಿಗೆ ಹೆಚ್ಚುವರಿ ಆರ್ಥಿಕ ಇತರೆ ವೆಚ್ಚಗಳಾದ ಓ ಅಂಡ್ ಎಂ ವೆಚ್ಚ, ಕೊಳವೆ ಬಾವಿಗಳ ನಿರ್ವಹಣೆ, ಒಳಚರಂಡಿಗಳ ನಿರ್ವಹಣೆ, ಮಂಡಳಿಯ ಸಿಬ್ಬಂದಿಯ ವೇತನದ ಪರಿಷ್ಕರಣೆ ಇತ್ಯಾದಿ ಇವುಗಳನ್ನು ಪರಿಗಣನೆಗೆ ತೆಗೆದುಕೊಂಡು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನೀರಿನ ದರ ಮತ್ತು ಒಳಚರಂಡಿ ದರ (ನೀರಿನ ದರಯೇತರ)ಗಳನ್ನು ಪರಿಷ್ಕರಣೆ ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿ ಆದೇಶವನ್ನು ಹೊರಡಿಸಲು ಕೋರಿರುತ್ತಾರೆ. ಈ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ನಅಇ 161 ಎಂಎನ್‌ಐ 2004, ಬೆಂಗಳೂರು, ದಿನಾಂಕ: 27ನೇ ಜನವರಿ, 2005

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ನೀರಿನ ದರ ಮತ್ತು ಒಳಚರಂಡಿ ದರ (ನೀರಿನ ದರಯೇತರ)ಗಳನ್ನು ಭವಿಷ್ಯವರ್ತಿಯಾಗಿ ಅನ್ವಯಿಸಿ ಈ ಕೆಳಕಂಡಂತೆ ಹೆಚ್ಚಿಸಲು ಸರ್ಕಾರವು ಮಂಜೂರಾತಿ ನೀಡಿದೆ.

WATER TARIFF

1. To reduce the first slab of domestic consumption from 0 to 15,000 to 0 to 8,000 with a view to give a positive relief in the water rates to the poorer sections from the current level of minimum charges of Rs. 115/- to Rs.73/-
2. To increase the II and III slabs, water tariff from Rs.8/- to Rs.9/- and Rs.12/- to Rs.15/- and to retain the other slab rates at the present tariff level for both Domestic, Non-domestic and other types of consumers.

3. The revision now proposed will also be applicable to Kanakapura town which is supplied water at the earlier rate.

SANITARY CHARGES

(a)	Domestic Connection	Rs. 15/- at flat rate for consumption of 0 to 8000 ltrs and 8001 to 25000, 15% of water supply charges per month as against 10% for consumption of above 25,000 ltrs upto 50,000 ltrs. 20% of water charges per month as against 10% for consumption of above 50,000 ltrs.
(b)	All Non-Domestic connections	From 10% to 20% of water charges per month.
2.	For premises having water supply & UGD connection but supplementing water supply by Tankers/ borewells. (a) Domestic & Apartment (b) Non-domestic	 Rs. 50/- per month per individual house per flat Revised from Rs.200 to 300 per month per HP of borewell.
3.	Premises not having water supply connection from BWSSB but having only UGD connection.	Rs. 300/- per month.
	IN ADDITION TO SANITARY CHARGES:	
1.	Hotels having boarding & lodging supplementing water supply by Tankers in addition to borewells (i) Non Star Hotels (ii) 3 Star Hotels & above (iii) 5 Star Hotels & above	 Rs. 1,000/- per month Rs. 3,000/- per month Rs. 10,000/- per month
2.	For Hospitals/ Nursing Homes Supplementing water supply by Tankers in addition to borewell. (i) Nursing Home & Hospitals having 100 beds. (ii) Hospital/ Nursing Homes having more than 100 beds.	 Rs.2,500/- per month Rs. 5,000/- per month

ಈ ಆದೇಶವನ್ನು ಟಿಪ್ಪಣಿ ಸಂಖ್ಯೆ: ಆಇ 990 ವೆಚ್ಚ-3/2003, ದಿನಾಂಕ: 24.05.2003ರ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ವ್ಹಿ.ಆರ್. ಇಲಕಲ್
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪಿ.ಆರ್.201

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವಾಲಯ

ವಿಷಯ: ಶ್ರೀ ಎ. ವಿಜಯಕುಮಾರ್ ಹಾಗೂ ಶ್ರೀ ಜಿ. ಕೃಷ್ಣಮೂರ್ತಿ ಅಂದಿನ ಪ್ರ.ದ.ಸ. ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ವಿರುದ್ಧ ಇಲಾಖಾ ವಿಚಾರಣೆ - ಅಂತಿಮ ಆದೇಶ - ಬಗ್ಗೆ.

ಓದಲಾಗಿದೆ:
1. ಮುಕಾನಿ, ಜಿಪಂ, ಪತ್ರ ಸಂ. ಜಿಪಂಬ:ಸಿ-3:ದಿನಗೂಲಿ:ಅಪೀಲು:29:01-02, ದಿ. 3-8-02
2. ಶ್ರೀ ಎ. ವಿಜಯಕುಮಾರ್ ಹಾಗೂ ಶ್ರೀ ಜಿ. ಕೃಷ್ಣಮೂರ್ತಿ ಅಂದಿನ ಪ್ರ.ದ.ಸ. ಇವರಿಗೆ ದೋಷಾರೋಪಣಾ ಪಟ್ಟಿಯೊಂದಿಗೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಿದ ದಿ. 18-10-03.
3. ಶ್ರೀ ಎ. ವಿಜಯಕುಮಾರ್ ಹಾಗೂ ಶ್ರೀ ಜಿ. ಕೃಷ್ಣಮೂರ್ತಿ ಅಂದಿನ ಪ್ರ.ದ.ಸ. ಇವರು ದಿ. 22-11-03 ಮತ್ತು 19-11-03 ರಂದು ನೀಡಿದ ಲಿಖಿತ ಹೇಳಿಕೆ.
4. ಆದೇಶ ಸಂ. ಗ್ರಾಅಪ 23 ಇಎಸ್‌ಕ್ಯೂ 03, ದಿ. 22-1-04.
5. ವಿಚಾರಣಾಧಿಕಾರಿಗಳ ದಿ. 30-8-04 ರ ವಿಚಾರಣಾ ವರದಿ.
6. 2ನೇ ಕಾರಣ ಕೇಳುವ ನೋಟೀಸ್ ಸಂ.ಗ್ರಾಅಪ 23 ಇಎಸ್‌ಕ್ಯೂ 03, ದಿ.22-1-04
7. 2ನೇ ಕಾರಣ ಕೇಳುವ ನೋಟೀಸಿಗೆ ಸದರಿ ನೌಕರರು ನೀಡಿದ ಲಿಖಿತ ಉತ್ತರದ ದಿ. 20-11-04 ಮತ್ತು 24-11-04.

ಪ್ರಸ್ತಾವನೆ:

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,. ಜಿಲ್ಲಾ ಪಂಚಾಯತ್, ಬಳ್ಳಾರಿ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ. (1)ರ ದಿ. 3-8-02 ರ ಪತ್ರದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ. 26932-26941/99 ರಲ್ಲಿ ದಿ. 12-10-99 ರಂದು ನೀಡಿದ್ದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವಂತೆ ಸರ್ಕಾರವು ದಿ. 4-11-2000, 10-1-2001 ಮತ್ತು 12-6-2001 ರಂದು ಬಳ್ಳಾರಿ ಜಿಲ್ಲಾ ಪಂಚಾಯತ್ ಕಛೇರಿಗೆ ಪತ್ರ ಬರೆದು ಆ ಬಗ್ಗೆ ನೆನಪೋಲೆಗಳನ್ನು ಹೊರಡಿಸಿದ್ದರೂ ಸಹ ಅಂದು ಸದರಿ ಜಿಲ್ಲಾ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಎ. ವಿಜಯಕುಮಾರ್ ಹಾಗೂ ಶ್ರೀ ಜಿ. ಕೃಷ್ಣಮೂರ್ತಿ ಅಂದಿನ ಪ್ರ.ದ.ಸ. ಜಿಲ್ಲಾ ಪಂಚಾಯತ್, ಬಳ್ಳಾರಿ, ಇವರು ಸರ್ಕಾರದ ನಿರ್ದೇಶನದಂತೆ ಸಂಬಂಧಿಸಿದ ಪತ್ರಗಳ ಬಗ್ಗೆ ಮೇಲಾಧಿಕಾರಿಗಳಿಗೆ ಮಂಡಿಸದೆ ಮತ್ತು ಏನೂ ಕ್ರಮ ಕೈಗೊಳ್ಳದೇ ಇದ್ದುದರಿಂದ ಸದರಿ ತೀರ್ಪನ್ನು ಅನುಷ್ಠಾನಗೊಳಿಸಿಲ್ಲವೆಂದು ಅರ್ಜಿದಾರರಲ್ಲಿ ಕೆಲವರು ಶ್ರೀ ಜಾನ್ ವಿಲಿಯಂ ಮತ್ತು ಶ್ರೀ ಜೆ. ಯರ್‍ರಿಸ್ವಾಮಿ ಮತ್ತಿತರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಲಯ ನಿಂದನಾ ಅರ್ಜಿ ಸಂಖ್ಯೆ. 2611/01 ಮತ್ತು 356-363/02 ನ್ನು ದಾಖಲಿಸಿದ್ದರು. ಆದರೆ, ಅರ್ಜಿದಾರರೆಲ್ಲರೂ ದಿ. 1-7-84 ರ ನಂತರ ದಿನಗೂಲಿ ಸೇವೆಗೆ ಸೇರಿದವರಾಗಿದ್ದರೂ ಸಹ ಸದರಿ ನಿಂದನಾ ಅರ್ಜಿಯನ್ನು ವಜಾಗೊಳಿಸಲು ಬೇರೆ ದಾರಿ ಇಲ್ಲದೆ ಸರ್ಕಾರ ಅವರ ಸೇವೆಯನ್ನು ಸಕ್ರಮಗೊಳಿಸಲಾಯಿತು. ಆದ್ದರಿಂದ, ಮೇಲಿನ ಅರ್ಜಿದಾರರ ಸೇವೆಯನ್ನು ಸಕ್ರಮಗೊಳಿಸಲು ಕಾರಣರಾಗಿ, ಕರ್ತವ್ಯಲೋಪವೆಸಗಿರುವುದರಿಂದ ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನೀ.ನೇ) ನಿಯಮಾವಳಿ 1957 ರನ್ವಯ ಶಿಸ್ತು ಕ್ರಮ ಜರುಗಿಸಲು ಮೇಲೆ ಓದಲಾದ ಕ್ರಮ ಸಂಖ್ಯೆ. (1) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರು ಪ್ರಸ್ತಾವನೆ ಸಲ್ಲಿಸಿದ್ದರು.

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಶ್ರೀ ಎ. ವಿಜಯಕುಮಾರ್ ಹಾಗೂ ಶ್ರೀ ಜಿ. ಕೃಷ್ಣಮೂರ್ತಿ ಅಂದಿನ ಪ್ರ.ದ.ಸ. ಇವರುಗಳಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ. (2) ರಲ್ಲಿ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು. ತಮ್ಮ ಮೇಲಿನ ಆಪಾದನೆಗಳಿಗೆ ಸಂಬಂಧಿಸಿದಂತೆ ಆಪಾದಿತ ನೌಕರರು ಸದರಿ ನೊಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ. (3) ರಲ್ಲಿ ಲಿಖಿತ ಹೇಳಿಕೆಗಳನ್ನು ಸಲ್ಲಿಸಿದ್ದು , ತಮ್ಮ ಮೇಲಿನ ಎಲ್ಲಾ ಆರೋಪಗಳನ್ನು ನಿರಾಕರಿಸಿರುತ್ತಾರೆ.

ಸದರಿಯವರ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಗಿ ಅವು ಸಮರ್ಪಕವಾಗಿಲ್ಲವೆಂದು ಕಂಡು ಬಂದಿರುವುದರಿಂದ ಮತ್ತು ಇವರುಗಳು ಕರ್ತವ್ಯ ಲೋಪ ಮಾಡಿ ದುರ್ನಡತೆ ಎಸಗಿದ್ದಾರೆಂದು ದಾಖಲೆಗಳಿಂದ ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಆಪಾದಿತರ ಮೇಲಿನ ಆರೋಪಗಳ ಬಗ್ಗೆ ಸತ್ಯಾಸತ್ಯತೆಯನ್ನು ತಿಳಿಯಲು ಪ್ರಕರಣದಲ್ಲಿ ವಿವರವಾದ ಜಂಟಿ ಇಲಾಖಾ ವಿಚಾರಣೆ ನಡೆಸಲು ಮೇಲೆ ಓದಲಾದ ಕ್ರಮ ಸಂಖ್ಯೆ. (4) ರ ಆದೇಶ ಸಂಖ್ಯೆ. ಗ್ರಾಅಪ 23 ಇಎಸ್‌ಕ್ಯೂ 03 , ದಿ. 22-1-04 ರಲ್ಲಿ ಬಳ್ಳಾರಿ ಜಿಲ್ಲಾ ಪಂಚಾಯತ್‌ನ ಉಪ ಕಾರ್ಯದರ್ಶಿ (ಆಡಳಿತ) ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಸದರಿ ಜಿಲ್ಲಾ ಪಂಚಾಯತ್‌ನ ಸಹಾಯಕ ಕಾರ್ಯದರ್ಶಿ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಪ್ರಕರಣದಲ್ಲಿ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಆದೇಶಿಸಲಾಗಿತ್ತು.

ವಿಚಾರಣಾಧಿಕಾರಿಗಳು ಪ್ರಕರಣದಲ್ಲಿ ವಿವರವಾದ ವಿಚಾರಣೆ ನಡೆಸಿ ಮೇಲೆ ಓದಲಾದ ಕ್ರಮ ಸಂಖ್ಯೆ. (5) ರ ದಿ. 30-8-04 ರಲ್ಲಿ ವಿಚಾರಣಾ ವರದಿಯನ್ನು ಸಲ್ಲಿಸಿ ಆಪಾದಿತರ ಮೇಲಿನ ಆರೋಪಗಳು ಸಾಬೀತಾಗಿರುತ್ತವೆಯೆಂದು ಅಭಿಪ್ರಾಯಪಟ್ಟಿದ್ದರಿಂದ , ಸದರಿ ವಿಚಾರಣಾ ವರದಿಯ ಪ್ರತಿಯೊಂದಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ. (6) ರ ದಿ. 22-1-04 ರಲ್ಲಿ 2ನೇ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು. ಇವರುಗಳು 2ನೇ ಕಾರಣ ಕೇಳುವ ನೋಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ. (7) ರ ದಿನಾಂಕ: 20-11-04 ಮತ್ತು 24-11-04 ರಲ್ಲಿ ಲಿಖಿತ ಉತ್ತರ ಸಲ್ಲಿಸಿ, ತಮ್ಮ ಮೇಲಿನ ಎಲ್ಲಾ ಆರೋಪಗಳನ್ನು ನಿರಾಕರಿಸಿರುತ್ತಾರೆ. ವಿವರಗಳು ಕೆಳಕಂಡಂತಿವೆ.

ಶ್ರೀ ಜಿ. ಕೃಷ್ಣಮೂರ್ತಿ, ಪ್ರ.ದ.ಸ. ಇವರ ಲಿಖಿತ ಉತ್ತರ:

ಇವರು ಬಳ್ಳಾರಿ ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ರಿಟ್ ಅರ್ಜಿಸಂ. 26932-26941/99ರ ಬಗ್ಗೆ ಸರ್ಕಾರಿ ವಕೀಲರಿಂದ ದಿ. 29-9-99 ರ ಪತ್ರ ಹಾಗೂ ಲಗತ್ತುಗಳನ್ನು ದಿ. 30-9-99 ರಂದು ಪಡೆದು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಡತ ಸಂ. 19:99-00 ನ್ನು ದಿ. 4-10-99 ರಂದು ಹಿರಿಯ ಅಧಿಕಾರಿಗಳಿಗೆ ಮಂಡಿಸಿರುವುದು ಮತ್ತು ದಿ. 21-10-99 ರ ಪತ್ರವನ್ನು, ದಿ.26-10-99 ರಂದು ಪಡೆದು ಸೂಕ್ತ ಕ್ರಮಕ್ಕಾಗಿ ಹಿರಿಯ ಅಧಿಕಾರಿಗಳಿಗೆ ಮಂಡಿಸಿದ್ದಾರೆಂದು ನಂತರ ಹಿರಿಯ ಅಧಿಕಾರಿಗಳ ಆದೇಶದ ಮೇರೆಗೆ ಕೋರ್ಟು ಪ್ರಕರಣಗಳಿಗೆ ಸಂಬಂಧಿಸಿದ ಅಪೀಲು ಸಂಕಲನವನ್ನು ಮತ್ತು ಸದರಿ ಸಂಕಲನಕ್ಕೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ದಿ.29-9-00 ರಂದು ಶ್ರೀ.ಎ.ವಿಜಯಕುಮಾರ್,ಪ್ರ.ದ.ಸ.ಇವರಿಗೆ ಚಾರ್ಜ್ ಲಿಸ್ಟ್‌ನ್ನು ವಹಿಸಿಕೊಟ್ಟಿರುವುದಾಗಿ, ಈ ಚಾರ್ಜ್ ಲಿಸ್ಟ್‌ನಲ್ಲಿ ಕಡತ ಸಂ. 19:99-00 ಸಹ ಸೇರಿರುತ್ತದೆ.ಅಂದು ಸದರಿ ಕಡತ ಚಾರ್ಜ್ ಲಿಸ್ಟ್‌ನಲ್ಲಿ ಇಲ್ಲವೆಂದು Xಗುರುತು ಮಾಡಿರುವುದಿಲ್ಲ. ನಂತರ ತನ್ನ ಬಳಿ ಇರುವ ಚಾರ್ಜ್ ಲಿಸ್ಟ್‌ನಲ್ಲಿ ತಾನೇ X ಗುರುತು ಮಾಡಿ ಸದರಿ ಕಡತ ಸ್ವೀಕರಿಸಿಲ್ಲವೆಂದು ವಿಚಾರಣಾ ಸಮಯದಲ್ಲಿ ತನ್ನ ವಿರುದ್ಧ ಆಪಾದಿಸಿರುವುದಾಗಿ ತಿಳಿಸಿರುತ್ತಾರೆ.

ಶ್ರೀ ಎ. ವಿಜಯಕುಮಾರ್, ಪ್ರ.ದ.ಸ. ಇವರ ಲಿಖಿತ ಉತ್ತರ:

ಇಲ್ಲಿಯೂ ಸಹ ಕಡತ ಸಂ. 19:99-00 ನ್ನು ಶ್ರೀ ಜಿ. ಕೃಷ್ಣಮೂರ್ತಿ, ಪ್ರ.ದ.ಸ. ಶ್ರೀ ಎ. ವಿಜಯಕುಮಾರ್, ಪ್ರ.ದ.ಸ. ರಿಗೆ ವಹಿಸಿ ಕೊಟ್ಟಿದ್ದಾರೆ ಎಂದು ಸಾಬೀತುಪಡಿಸದೆ ಶ್ರೀ.ಎ.ವಿಜಯಕುಮಾರ್, ಪ್ರ.ದ.ಸ.ರು ಶ್ರೀಎಂ.ಈಶ್ವರಪ್ಪ, ಪ್ರ.ದ.ಸ.ಗೆ ವಹಿಸಿ ಕೊಟ್ಟಿಲ್ಲ ಎಂದಿಷ್ಟೆ ಹೇಳಲಾಗಿದೆ.

ಕಡತಸಂ.19:99-00ನ್ನು ಶ್ರೀ ಜಿ.ಕೃಷ್ಣಮೂರ್ತಿ, ಪ್ರ.ದ.ಸ. ಮಂಡಿಸಿರುತ್ತಾರೆ ಎಂದು ಎರಡನೇ ಸಾಕ್ಷಿಯವರು ಹೇಳಿದಾಗ, ಈ ಕಡತವನ್ನು ಪ್ರಾರಂಭಿಸಲು ಪ್ರಮುಖ ದಾಖಲಾತಿಗಳಾದ ಸರ್ಕಾರದ ಪತ್ರ ರಿಟ್ ಅರ್ಜಿ ಸಂ26932-41:99 ಮತ್ತು ವಕೀಲರ ಪತ್ರ

ಇತ್ಯಾದಿಗಳು ದಿ. 5-12-2001 ರವರೆಗೆ ಸದರಿ ಪ್ರ.ದ.ಸ. ರ ಬಳಿ ಹೇಗೆ ಇರಲು ಸಾಧ್ಯ? ಮತ್ತು ನನಗೆ ಚಾರ್ಜ್ ಕೊಡುವಾಗಾಗಲೀ, ಸರ್ಕಾರದ ನೆನಪು ಪತ್ರಗಳು ಬಂದು ನಾನು ಜ್ಞಾಪಿಸಿದಾಗಾಗಲೀ ಅವುಗಳನ್ನು ನನಗೇಕೆ ಹಸ್ತಾಂತರಿಸಿಲ್ಲವೆಂದು ಯಾರೂ ಕೇಳಿಲ್ಲ.

ಮೂರನೆಯ ಸಾಕ್ಷಿಯವರು ತಮ್ಮ ಲಿಖಿತ ಹೇಳಿಕೆಯಲ್ಲಿ ಶ್ರೀ ಜಿ.ಕೃಷ್ಣಮೂರ್ತಿ, ಪ್ರ.ದ.ಸ.ರು ಸಲ್ಲಿಸಿರುವ ಚಾರ್ಜ್ ಲಿಸ್ಟ್‌ನ ಕ್ರಮ ಸಂಖ್ಯೆ. 66 ರೌಂಡ್ ಮಾಡಲಾಗಿದೆ ಎಂದು ಹೇಳಿರುತ್ತಾರೆ. ಈ ಹೇಳಿಕೆಯನ್ನು ವರದಿಯಲ್ಲಿ ಕಾಣಿಸಿಲ್ಲ. ಮಂಡನಾಧಿಕಾರಿಗಳು ವಿಚಾರಣಾ ಸಮಯದಲ್ಲಿ ನೆನಪೋಲೆ ಪತ್ರಗಳನ್ನು ಇವರು ಮೌಖಿಕವಾಗಿ ಅಧಿಕಾರಿಗಳಿಗೆ ತಿಳಿಸುವ ಬದಲು ಲಿಖಿತ ರೂಪದಲ್ಲಿ ನೀಡಿಲ್ಲವೆಂದು ಆಪಾದಿಸಿರುತ್ತಾರೆ.ಆದರೆ ನೆನಪೋಲೆ ಪತ್ರಗಳ ಮೇಲೆ ಅಧಿಕಾರಿಗಳು ಮಾಡಿರುವ ಸಹಿ ಮತ್ತು ಸಂಕಲನದ ಸಂಖ್ಯೆ ನಮೂದಿಸಿದೆ.

ವಿಚಾರಣಾಧಿಕಾರಿಗಳ ವರದಿಯು ಸಂಪೂರ್ಣವಾಗಿ ಬೇರೆಯವರ ತಪ್ಪು ಮಾರ್ಗದರ್ಶನದಿಂದಾಗಿ ಬರೆಯಲ್ಪಟ್ಟಿದೆ . ಆದ್ದರಿಂದ ಈ ಬಗ್ಗೆ ತಾವು ನ್ಯಾಯಯುತವಾದ ತೀರ್ಪನ್ನು ನೀಡಬೇಕೆಂದು ಕೋರಿರುತ್ತಾರೆ.

ಶ್ರೀ ಜಿ. ಕೃಷ್ಣಮೂರ್ತಿ, ಪ್ರ.ದ.ಸ. ಇವರು ಮೇಲಿನ ಪ್ಯಾರಾದಲ್ಲಿ ತಿಳಿಸಿರುವಂತೆ ಸದರಿ ಕಡತವನ್ನು ಶ್ರೀ ವಿಜಯಕುಮಾರ್, ಅಂದಿನ ಪ್ರ.ದ.ಸ. ಇವರಿಗೆ ವಹಿಸಿಕೊಟ್ಟಿರುವುದು ವಿಚಾರಣಾಧಿಕಾರಿಗಳು ವಿಚಾರಣಾ ವರದಿಯೊಂದಿಗೆ ಸಲ್ಲಿಸಿರುವ ದಾಖಲೆಗಳಿಂದ ತಿಳಿದು ಬರುತ್ತದೆ. ಆದರೂ ಸಹ ಸರ್ಕಾರದಿಂದ ನೆನಪೋಲೆಗಳು ಹೊರಡಿಸಿದ ನಂತರವೂ ಸದರಿ ಕಡತ ಹಾಗೂ ಅದಕ್ಕೆ ಸಂಬಂಧಪಟ್ಟ ಪತ್ರಗಳನ್ನು ಸಾಕಷ್ಟು ವಿಳಂಬಿಸಿ ಶ್ರೀ ವಿಜಯಕುಮಾರ್ ಇವರಿಗೆ ವಹಿಸಿಕೊಟ್ಟಿರುವುದು ದಾಖಲೆಗಳಿಂದ ತಿಳಿದು ಬರುತ್ತದೆ.

ಶ್ರೀ ಎ.ವಿಜಯಕುಮಾರ್ ಅಂದಿನ ಪ್ರ.ದ.ಸ. ಇವರು ಎರಡನೇ ಕಾರಣ ಕೇಳುವ ನೋಟೀಸಿಗೆ ನೀಡಿದ ಲಿಖಿತ ಉತ್ತರವನ್ನು ಪರಿಶೀಲಿಸಲಾಗಿ, ಸದರಿ ಕಡತವನ್ನು ಶ್ರೀ ಜಿ.ಕೃಷ್ಣಮೂರ್ತಿ ಇವರಿಂದ ವಹಿಸಿಕೊಂಡನಂತರ ಸಹ ಸಕಾಲದಲ್ಲಿ ಮಂಡಿಸದೇ ಇರುವುದು. ಮತ್ತು ಇದಕ್ಕೆ ಸಂಬಂಧಪಟ್ಟ ನೆನಪೋಲೆ ಸ್ವೀಕೃತಿ ಪತ್ರಗಳು ಬಂದನಂತರ ಸಹ ಕಡತದಲ್ಲಿ ಮಂಡಿಸದೇ ಇರುವುದು ಕಂಡು ಬರುತ್ತದೆ. ಇವರು ಮಾಡಿರುವ ಈ ಕರ್ತವ್ಯ ಲೋಪದಿಂದಾಗಿ, ಸದರಿ ಜಿಲ್ಲಾ ಪಂಚಾಯತ್‌ನ ಕೆಲವು ದಿನಗೂಲಿ ನೌಕರರು ದಿ.1-7-84ರ ನಂತರ ನೇಮಕಗೊಂಡಿದ್ದರೂ ಸಹ, ನಿಯಮಗಳಲ್ಲಿ ಅವಕಾಶವಿಲ್ಲದಿದ್ದರೂ ಸಹ ಒಟ್ಟು 9 ಜನ ದಿನಗೂಲಿ ನೌಕರರ ಸೇವೆಯನ್ನು ವಿಧಿಯಿಲ್ಲದೆ ಅನಿವಾರ್ಯವಾಗಿ ಉಚ್ಚ ನ್ಯಾಯಾಲಯದ ಆದೇಶದಂತೆ ಸೇವೆ ಸಕ್ರಮಗೊಳಿಸಬೇಕಾಯಿತು.

ಇವರು ಮಾಡಿರುವ ಕರ್ತವ್ಯ ಲೋಪ, ಇತ್ಯಾದಿಗಳಿಂದಾಗಿ ಸರ್ಕಾರಕ್ಕೆ ಪ್ರತಿ ವರ್ಷ ಲಕ್ಷಾಂತರ ರೂಪಾಯಿ ಆರ್ಥಿಕ ಹೊರೆಯಾಗಿದೆ. ಆದ್ದರಿಂದ ಅವರು ನೀಡಿರುವ ಲಿಖಿತ ಉತ್ತರಗಳು ಸಮರ್ಪಕವಾಗಿಲ್ಲವೆಂದು ಕಂಡು ಬಂದಿರುವುದರಿಂದ ಅವರು ನೀಡಿರುವ ವಿವರಣೆಯನ್ನು ಒಪ್ಪಲು ಯಾವುದೇ ಸಕಾರಣಗಳು ಇಲ್ಲದ ಕಾರಣ ವಿಚಾರಣಾ ವರದಿಯಲ್ಲಿ ಇವರುಗಳ ಮೇಲೆ ಮಾಡಿರುವ ಆರೋಪಗಳು ಸಾಬೀತಾಗಿದೆ ಎಂದು ತಿಳಿಸಿರುವುದರಿಂದ, ಆಪಾದಿತರ ಮೇಲಿನ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ಆಪಾದಿತರಿಗೆ ಸೂಕ್ತ ದಂಡನೆ ವಿಧಿಸಲು ಸರ್ಕಾರ ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ. (ಶ್ರೀ ಜಿ. ಕೃಷ್ಣಮೂರ್ತಿ , ಅಂದಿನ ಪ್ರದಸ ಇವರು ಈಗಾಗಲೇ ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಅವರಿಗೆ ದಂಡನೆ ವಿಧಿಸುವ ಬಗ್ಗೆ ಲೋಕಸೇವಾ ಆಯೋಗದ ಸಹಮತಿ ಪಡೆದು ನಂತರ ದಂಡನೆ ಆದೇಶ ಹೊರಡಿಸಲಾಗುವುದು.)

ಆದೇಶ ಸಂಖ್ಯೆ: ಗ್ರಾಅಪ 23 ಇಎನ್‌ಕ್ಯೂ 03, ಬೆಂಗಳೂರು, ದಿನಾಂಕ: 22ನೇ ಜನವರಿ, 2005

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಎ. ವಿಜಯಕುಮಾರ್,ಅಂದಿನ ಪ್ರ.ದ.ಸ.,ಜಿಲ್ಲಾ ಪಂಚಾಯತ್, ಬಳ್ಳಾರಿ,ಇವರು ಮಾಡಿರುವ ಕರ್ತವ್ಯ ಲೋಪ, ಇತ್ಯಾದಿಗಳಿಂದಾಗಿ ಸರ್ಕಾರಕ್ಕೆ ಪ್ರತಿ ವರ್ಷ ಲಕ್ಷಾಂತರ ರೂಪಾಯಿ ಆರ್ಥಿಕ ಹೊರೆಯಾಗಿದ್ದರಿಂದ ಇವರಿಗೆ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ) 1957 ರ ನಿಯಮ 8(V) ರಂತೆ ಇವರನ್ನು ಪ್ರ.ದ.ಸ. ಹುದ್ದೆಯಿಂದ ದ್ವಿ.ದ.ಸ. ಹುದ್ದೆಗೆ ಹಿಂಬಡ್ತಿಗೊಳಿಸುವುದರೊಂದಿಗೆ ಇವರ ವೇತನದಲ್ಲಿ ಪ್ರತಿ ತಿಂಗಳು ರೂ. 3,000-00 ಗಳನ್ನು ಇವರು ನಿವೃತ್ತಿಗೊಳ್ಳುವವರೆಗೆ ಕಟಾಯಿಸಲು ಹಾಗೂ ಮುಂದಿನ ಅವಧಿಯಲ್ಲಿ ಅವರಿಗೆ ಯಾವುದೇ ವಾರ್ಷಿಕ ವೇತನ ಬಡ್ತಿಗೆ ಅರ್ಹರಲ್ಲವೆಂದು ದಂಡನೆ ವಿಧಿಸಲು ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ. ಹೊನ್ನಪ್ಪ ನಾಯಕ್

ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ),

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.

ಪಿ.ಆರ್. 202

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಕಾಲೇಜುಗಳ ಅಭಿವೃದ್ದಿಗೆ ಭಾರತ ಸರ್ಕಾರವು ಮಂಜೂರು ಮಾಡಿರುವ ಹಣವನ್ನು ಸಂಬಂಧಿಸಿದ ಸಂಸ್ಥೆಗಳಿಗೆ ಪಾವತಿಸಲು ಆಯವ್ಯಯ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ, ಇವರ ಪತ್ರ ಸಂಖ್ಯೆ: ಭಾವೈಪ: 96: ಬಿಯುಡಿ (1) :2004-2005 ದಿನಾಂಕ: 24.11.2004.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ ಬೆಂಗಳೂರು ಇವರು ಭಾರತ ಸರ್ಕಾರವು ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಅಭಿವೃದ್ದಿಗೆ ಉತ್ತೇಜನ ನೀಡಲು ಭಾರತೀಯ ವೈದ್ಯ ಪದ್ಧತಿ ಕಾಲೇಜುಗಳ ಅಭಿವೃದ್ದಿಗಾಗಿ ಸಹಾಯಾನುಧನವನ್ನು ವಿವಿಧ ಸ್ಕೀಂಗಳಡಿ ಮಂಜೂರು ಮಾಡುತ್ತದೆ. ಪ್ರಸ್ತುತ ಭಾರತ ಸರ್ಕಾರವು ಬಿಡುಗಡೆ ಮಾಡಿದ ಅನುದಾನಗಳ ಹಣವು ರಾಜ್ಯ ಸರ್ಕಾರಕ್ಕೆ ಹೊಂದಾಣಿಕೆಯಾಗಿದ್ದು, ಈ ಬಗ್ಗೆ ಆರ್ಥಿಕ ಇಲಾಖೆಯು 'ಕ್ರೆಡಿಟ್ ಕನ್‌ಫರ್‌ಮೇಷನ್ ಸ್ಲಿಪ್' ನೀಡಿದೆ. ಸದರಿ ಹಣವನ್ನು

ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆಯು ಸಂಬಂಧಪಟ್ಟ ಸಂಸ್ಥೆಗಳಿಗೆ ಬಿಡುಗಡೆ ಮಾಡಬೇಕಾಗಿರುವುದಾಗಿ ನಿರ್ದೇಶಕರು ತಿಳಿಸಿ, ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಹೊಂದಾಣಿಕೆಯಾಗಿರುವ ಹಣದ ವಿವರ ಕೆಳಗಿನಂತೆ ದಾಖಲಿಸಲಾಗಿದೆ.

ಕ್ರಮ ಸಂಖ್ಯೆ	ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆ ಪತ್ರದ ವಿವರ	ಅನುದಾನ ಪಡೆದ ಸಂಸ್ಥೆ	ಅನುದಾನದ ಮೊತ್ತ ರೂ. ಲಕ್ಷಗಳಲ್ಲಿ	ಆರ್ಥಿಕ ಇಲಾಖೆಯು ಸಿ.ಸಿ. ಸ್ಲಿಪ್ ನೀಡಿದ ದಿನಾಂಕ
1.	ಜಡ್ 14013/16/2004 ಇ ಅಂಡ್ ಸಿ, ಭಾರತ ಸರ್ಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಆಯುಷ್ ಇಲಾಖೆ, ದಿನಾಂಕ: 29.06.2004.	1. ಡಾ. ಬಿ.ಡಿ. ಜತ್ತಿ ಹೋಮಿಯೋಪತಿ ವೈದ್ಯಕೀಯ ಕಾಲೇಜು ಧಾರವಾಡ.	ರೂ.4.355 ಲಕ್ಷ	02.08.2004
2.	ಜಡ್. 15011/35/2004, ಇ ಅಂಡ್ ಸಿ, ಭಾರತ ಸರ್ಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಆಯುಷ್ ಇಲಾಖೆ, ದಿನಾಂಕ: 12.08.2004.	2. ಭರತೇಶ್ ಹೋಮಿಯೋಪತಿಕ್ ಮೆಡಿಕಲ್ ಕಾಲೇಜು, ಬೆಳಗಾಂ.	ರೂ.5.00 ಲಕ್ಷ	02.09.2004
		ಒಟ್ಟು	**ರೂ. 9.355 ಲಕ್ಷಗಳು**	

ಪ್ರಸಕ್ತ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2210-05-200-0-05 ಯೋಜನೆಯಡಿ (ಶೇಕಡಾ 100 ಕೇಂದ್ರ ಪುರಸ್ಕೃತ) ಭಾರತ ಸರ್ಕಾರ ನೀಡುವ ಅನುದಾನದ ಹಣವನ್ನು ಸಂಬಂಧಿಸಿದ ಸಂಸ್ಥೆಗಳಿಗೆ ಅನುವಾಗಲು ರೂ. 300.00 ಲಕ್ಷ ಅನುದಾನ ಒದಗಿಸಿಕೊಳ್ಳಲಾಗಿದೆ. ಅಲ್ಲದೆ ಇದು ಶೇ. 100 ರ ಕೇಂದ್ರ ಪುರಸ್ಕೃತ ಯೋಜನೆ ಆಗಿರುವುದರಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಇದು ಹೊರೆಯಾಗುವುದಿಲ್ಲ. ಆದ್ದರಿಂದ ಸರ್ಕಾರವು ಪ್ರಸ್ತಾವನೆಯನ್ನು ಪರಿಗಣಿಸಿ ಭಾರತ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನವನ್ನು (1) ಡಾ. ಬಿ.ಡಿ. ಜತ್ತಿ ಹೋಮಿಯೋಪತಿ ವೈದ್ಯಕೀಯ ಕಾಲೇಜು ಧಾರವಾಡ ಇವರಿಗೆ ರೂ.4.355 ಲಕ್ಷಗಳನ್ನು ಹಾಗೂ (2) ಭರತೇಶ್ ಹೋಮಿಯೋಪತಿಕ್ ಮೆಡಿಕಲ್ ಕಾಲೇಜು, ಬೆಳಗಾಂ ಇವರಿಗೆ ರೂ.5.00 ಲಕ್ಷಗಳನ್ನು ಖಜಾನೆಯಿಂದ ಡ್ರಾ ಮಾಡಿ ಪಾವತಿಸಲು ಅನುವಾಗಲು ರೂ.9.355 ಲಕ್ಷಗಳನ್ನು ಪಾವತಿಸಲು ಲೆಕ್ಕಶೀರ್ಷಿಕೆ 2210-05-200-0-05 ಯೋಜನೆ 101 ಸಹಾಯಾನುಧನದಲ್ಲಿ ಸಂಬಂಧಿಸಿದ ಸಂಸ್ಥೆಗಳಿಗೆ ಆಯವ್ಯಯ ಬಿಡುಗಡೆ ಮಾಡಲು ನಿರ್ದೇಶಕರು ಕೋರಿರುತ್ತಾರೆ.

ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 331 ಪಿಟಿಡಿ 2004, ಬೆಂಗಳೂರು, ದಿನಾಂಕ: 5ನೇ ಫೆಬ್ರವರಿ, 2005

ಪ್ರಸ್ತಾವನೆಯಲ್ಲಿ ಹೇಳಲಾದ ಅಂಶಗಳನ್ನು ಪರಿಗಣಿಸಿ, ಪ್ರಸ್ತುತ 2004-2005ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2210-05-200-0-05 ಯೋಜನೆ ಉಪಲೆಕ್ಕಶೀರ್ಷಿಕೆ 101ರ ಸಹಾಯಾನುಧನದಲ್ಲಿ ರೂ.300.00 ಲಕ್ಷಗಳ ಅನುದಾನ ಒದಗಿಸಿದ್ದು, ಈ ಅನುದಾನದ ಪೈಕಿ ಒಟ್ಟು ರೂ. 9.355 ಲಕ್ಷಗಳನ್ನು ಈ ಕೆಳಗಿನಂತೆ ಸಂಬಂಧಿಸಿದ ಸಂಸ್ಥೆಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

1. ಡಾ. ಬಿ.ಡಿ. ಜತ್ತಿ ಹೋಮಿಯೋಪತಿ ವೈದ್ಯಕೀಯ ಕಾಲೇಜು, ಧಾರವಾಡ ಇವರಿಗೆ ಸ್ನಾತಕೋತ್ತರ ವ್ಯಾಸಂಗದ ವಿದ್ಯಾರ್ಥಿಗಳ ಸ್ಟೈಫಂಡ್ ಪಾವತಿಗಾಗಿ ರೂ. 435500.00 ಗಳನ್ನು (ನಾಲ್ಕು ಲಕ್ಷದ ಮೂವತ್ತೈದು ಸಾವಿರದ ಐನೂರು ರೂಪಾಯಿಗಳು ಮಾತ್ರ) ಹಾಗೂ
2. ಭರತೇಶ್ ಹೋಮಿಯೋಪತಿಕ್ ಮೆಡಿಕಲ್ ಕಾಲೇಜು ಬೆಳಗಾಂ ಇವರಿಗೆ ಪ್ರಕರಣಕ್ಕೆ ರೂ.3.00 ಲಕ್ಷಗಳನ್ನು ಮತ್ತು ಗ್ರಂಥಾಲಯಗಳ ಪುಸ್ತಕಗಳ ಖರೀದಿಗೆ 2.00 ಲಕ್ಷ (ಒಟ್ಟು 5.00 ಲಕ್ಷ ರೂಪಾಯಿಗಳು ಮಾತ್ರ).

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಆಕುಕ 1776 ಅಂಆಸ 2005, ದಿನಾಂಕ: 05.01.2005ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಚೋಮಾನಾಯಕ್ ಜಿ.
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪಿ.ಆರ್.204

ವಿಷಯ : ಸರ್ಕಾರಿ ತಾರಾನಾಥ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ ಇಲ್ಲಿಗೆ ಇಂಟರ್‌ನೆಟ್ ಸೌಲಭ್ಯಕ್ಕಾಗಿ ಭಾರತ ಸರ್ಕಾರವು ನೀಡಿರುವ ಸಹಾಯಾನುಧನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ, ಇವರ ಪತ್ರ ಸಂಖ್ಯೆ: ಭಾವೈಪ: 6: ಬಿಯುಡಿ (1) :2004-2005 ದಿನಾಂಕ: 13.12.2004.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ, ಬೆಂಗಳೂರು ಇವರಿಂದ ಬಂದಿರುವ ಪ್ರಸ್ತಾವನೆಯಲ್ಲಿ ಭಾರತ ಸರ್ಕಾರವು ತಮ್ಮ ಪತ್ರ ದಿನಾಂಕ: 30.09.2004ರಲ್ಲಿ ಸರ್ಕಾರಿ ತಾರಾನಾಥ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ ಇಲ್ಲಿಗೆ ಕೇಂದ್ರೀಯ ಪುರಸ್ಕೃತ ಯೋಜನೆಯಡಿ ಇಂಟರ್‌ನೆಟ್ ಸೌಲಭ್ಯಕ್ಕಾಗಿ ಭಾರತ ಸರ್ಕಾರವು ರೂ.10.00 ಲಕ್ಷಗಳನ್ನು ಮಂಜೂರಾತಿ ನೀಡಿದೆ. ಈ ಹಣವು ರಾಜ್ಯ ಸರ್ಕಾರಕ್ಕೆ ಹೊಂದಾಣಿಕೆಯಾಗಿದ್ದು, ಈ ಬಗ್ಗೆ ಆರ್ಥಿಕ ಇಲಾಖೆಯು ಕ್ರೆಡಿಟ್ ಕನಫರ್‌ಮೇಷನ್ ಸ್ಲಿಪ್ ನೀಡಿದೆ. ಸದರಿ ಹಣವನ್ನು ಸಂಬಂಧಪಟ್ಟ ಸಂಸ್ಥೆಗೆ ಬಿಡುಗಡೆ ಮಾಡಬೇಕಾಗಿರುವುದಾಗಿ ನಿರ್ದೇಶಕರು ತಿಳಿಸಿ, ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಹೊಂದಾಣಿಕೆಯಾಗಿರುವ ಬಗ್ಗೆ ವಿವರ ಈ ಕೆಳಗಿನಂತೆ ದಾಖಲಿಸಿದೆ.

ಕ್ರಮ ಸಂಖ್ಯೆ	ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆ ಪತ್ರದ ವಿವರ	ಅನುದಾನ ಪಡೆದ ಸಂಸ್ಥೆ	ಅನುದಾನದ ಮೊತ್ತ ರೂ. ಲಕ್ಷಗಳಲ್ಲಿ	ಆರ್ಥಿಕ ಇಲಾಖೆಯು ಸಿ.ಸಿ. ಸ್ಲಿಪ್ ನೀಡಿದ ದಿನಾಂಕ
1.	ಎನ್. 14011:2: 2004, ಪಿ ಅಂಡ್ ಸಿ, ದಿನಾಂಕ: 30.09.2004	ಸರ್ಕಾರಿ ತಾರಾನಾಥ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ, ಪಿ.ಸಿ. ಲ್ಯಾನ್, ಇಂಟರ್‌ನೆಟ್ ಸೌಲಭ್ಯಕ್ಕಾಗಿ.	ರೂ. 10.00 ಲಕ್ಷಗಳು.	28.10.2004

ಪ್ರಸಕ್ತ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2210-05-200-0-05 ಯೋಜನೆ ಅಡಿಯಲ್ಲಿ ರೂ.300.00 ಲಕ್ಷ ಅನುದಾನ ಒದಗಿಸಿಕೊಳ್ಳಲಾಗಿದೆ. ಇದರಲ್ಲಿ ಉಳಿದಿರುವ ಹಣದಲ್ಲಿ ಸರ್ಕಾರಿ ತಾರಾನಾಥ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ ಇವರಿಗೆ ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಬಹುದಾಗಿ ನಿರ್ದೇಶಕರು ವರದಿ ನೀಡುತ್ತಾ, ಆದುದರಿಂದ ಪ್ರಸ್ತಾವನೆಯನ್ನು ಪರಿಗಣಿಸಿ ಸರ್ಕಾರಿ ತಾರಾನಾಥ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ ಇಲ್ಲಿಗೆ ಭಾರತ ಸರ್ಕಾರವು ಮಂಜೂರು ಮಾಡಿರುವ ರೂ.10.00 ಲಕ್ಷಗಳ ಸಹಾಯಾನುಧನವನ್ನು ನಿರ್ದೇಶನಾಲಯವು ಬಿಡುಗಡೆ ಮಾಡಲು ಅನುವಾಗಲು ಮೇಲಿನ ಲೆಕ್ಕಶೀರ್ಷಿಕೆಯಲ್ಲಿ ಹಣ ಬಿಡುಗಡೆ ಮಾಡಲು ನಿರ್ದೇಶಕರು ಕೋರಿರುತ್ತಾರೆ.

ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 325 ಪಿಟಿಡಿ 2004, ಬೆಂಗಳೂರು, ದಿನಾಂಕ: 7ನೇ ಫೆಬ್ರವರಿ, 2005

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳನ್ನು ಪರಿಗಣಿಸಿ, ಪ್ರಸ್ತುತ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2210-05-200-0-05 ಉಪಲೆಕ್ಕಶೀರ್ಷಿಕೆ 101 ಯೋಜನೆಯಡಿ ಸಹಾಯಾನುಧನ ರೂ.300.00 ಲಕ್ಷಗಳನ್ನು ಅಳವಡಿಸಿದ್ದು, ಅದರಲ್ಲಿ ರೂ.10.00 (ಹತ್ತು) ಲಕ್ಷಗಳನ್ನು ಪ್ರಾಂಶುಪಾಲರು, ಸರ್ಕಾರಿ ತಾರಾನಾಥ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ ಇವರಿಗೆ ಕೇಂದ್ರ ಸರ್ಕಾರದ ಆದೇಶದನ್ವಯ ಇಂಟರ್‌ನೆಟ್ ಸೌಲಭ್ಯಕ್ಕಾಗಿ (ಕ್ರೆಡಿಟ್ ಕನಫರ್ಮೇಷನ್ ಸ್ಲಿಪ್ ಬಂದಿರುವುದರಿಂದ) ಲೆಕ್ಕಶೀರ್ಷಿಕೆ 2210-05-200-0-05 ಉಪಲೆಕ್ಕಶೀರ್ಷಿಕೆ 101 ಯೋಜನೆಯಡಿ ರೂ.10.00 ಲಕ್ಷಗಳನ್ನು ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ, ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಆಕುಕ 38 ಅಂಆಸ 2005, ದಿನಾಂಕ: 15.01.2005ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಚೋಮಾನಾಯಕ್ ಜಿ.
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪಿ.ಆರ್.205

ವಿಷಯ : ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜ್, ಲಕ್ಷ್ಮೀನಾರಾಯಣ ನಗರ, ಕುತ್ಪಾಡಿ, ಉಡುಪಿ ಜಿಲ್ಲೆ, ಇಲ್ಲಿಗೆ ಭಾರತ ಸರ್ಕಾರ ಮಂಜೂರು ಮಾಡಿರುವ ಸಹಾಯಧನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ, ಇವರ ಪತ್ರ ಸಂಖ್ಯೆ: ಭಾವೈಪ: 02: ಸಿ.ಎಸ್.ಎಸ್.:2004-2005 ದಿನಾಂಕ: 20.12.2004.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆ ಬೆಂಗಳೂರು ಇವರಿಂದ ಬಂದಿರುವ ಪ್ರಸ್ತಾವನೆಯಲ್ಲಿ ಭಾರತ ಸರ್ಕಾರವು ತಮ್ಮ ಪತ್ರ ದಿನಾಂಕ: 04.12.2003ರಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಭಾರತೀಯ ವೈದ್ಯ ಪದ್ಧತಿಯ ಕಾಲೇಜುಗಳ ಅಭಿವೃದ್ದಿಗೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜ್, ಲಕ್ಷ್ಮೀನಾರಾಯಣನಗರ, ಕುತ್ಪಾಡಿ, ಉಡುಪಿ ಜಿಲ್ಲೆ ಇವರಿಗೆ ಹಣ ಬಿಡುಗಡೆ ಮಾಡಿರುವ ಬಗ್ಗೆ ಆರ್ಥಿಕ ಇಲಾಖೆಯು ಕ್ರೆಡಿಟ್ ಕನ್‌ಫರ್ಮೇಷನ್ ಸ್ಲಿಪ್ ನೀಡಿದೆ. ಈ ಹಣವು ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಹೊಂದಾಣಿಕೆ ಆಗಿರುವ ಬಗ್ಗೆ ವಿವರ ಕೆಳಗಿನಂತಿರುತ್ತದೆ.

ಕ್ರಮ ಸಂಖ್ಯೆ	ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆ ಪತ್ರದ ವಿವರ	ಅನುದಾನ ಪಡೆದ ಸಂಸ್ಥೆ	ಅನುದಾನದ ಮೊತ್ತ ರೂ. ಲಕ್ಷಗಳಲ್ಲಿ	ಆರ್ಥಿಕ ಇಲಾಖೆಯು ಸಿ.ಸಿ. ಸ್ಲಿಪ್ ನೀಡಿದ ದಿನಾಂಕ
1.	ಜಡ್ 15011/39/2003 ಇ ಅಂಡ್ ಸಿ, ದಿನಾಂಕ: 04.12.2003.	ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜ್, ಲಕ್ಷ್ಮೀನಾರಾಯಣ ನಗರ, ಕುತ್ಪಾಡಿ, ಉಡುಪಿ ಜಿಲ್ಲೆ, (Construction of boys hostel)	7.50 ಲಕ್ಷ	07.01.2004 12.01.2004

ಪ್ರಸಕ್ತ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2210-05-200-0-05 ಯೋಜನೆಯಡಿ (ಶೇಕಡಾ 100 ಕೇಂದ್ರ ಪುರಸ್ಕೃತ) ಅಡಿಯಲ್ಲಿ ಭಾರತ ಸರ್ಕಾರ ನೀಡುವ ಅನುದಾನದ ಹಣವನ್ನು ಸಂಬಂಧಿಸಿದ ಸಂಸ್ಥೆಗಳಿಗೆ ಅನುವಾಗಲು ರೂ. 300.00 ಲಕ್ಷ ಅನುದಾನ ಒದಗಿಸಿಕೊಳ್ಳಲಾಗಿದೆ. ಇದರಲ್ಲಿ ಉಳಿತಾಯವಾಗುವ ರೂ.8.635 ಲಕ್ಷಗಳಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜ್, ಲಕ್ಷ್ಮೀನಾರಾಯಣನಗರ, ಕುತ್ಪಾಡಿ,

ಉಡುಪಿ ಜಿಲ್ಲೆ, ಇವರಿಗೆ ಸದರಿ ಲೆಕ್ಕಶೀರ್ಷಿಕೆಯಲ್ಲಿ ರೂ. 7.50 ಲಕ್ಷ ಹಣವನ್ನು ಬಿಡುಗಡೆ ಮಾಡಲು ಹಾಗೂ ಈ ಹಣವನ್ನು ನಿರ್ದೇಶನಾಲಯದ ಅನುದಾನದ ಬಿಲ್ಲಿನಲ್ಲಿ ಡ್ರಾ ಮಾಡಿ ಪಾವತಿಸಲು ಸರ್ಕಾರದ ಅನುಮತಿ ಹಾಗೂ ಮಂಜುರಾತಿ ನೀಡಲು ನಿರ್ದೇಶಕರು ಕೋರಿರುತ್ತಾರೆ.

ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 170 ಪಿಟಿಡಿ 2004, ಬೆಂಗಳೂರು, ದಿನಾಂಕ: 5ನೇ ಫೆಬ್ರವರಿ, 2005

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳನ್ನು ಪರಿಗಣಿಸಿ, ಭಾರತ ಸರ್ಕಾರದ ಪತ್ರ ಸಂಖ್ಯೆ: ಜಡ್ 15011/39/2003 ಇ ಅಂಡ್ ಸಿ, ದಿನಾಂಕ: 04.12.2003ರಲ್ಲಿ ರೂ.19.50 ಲಕ್ಷಗಳ ಸಹಾಯಾನುಧನವನ್ನು ಬಿಡುಗಡೆ ಮಾಡಿದ್ದು, ಆರ್ಥಿಕ ಇಲಾಖೆಯು ಕ್ರೆಡಿಟ್ ಕನ್‌ಫರ್‌ಮೇಷನ್ ಸ್ಲಿಪ್ ನೀಡಿದೆ. ಈ ಪೈಕಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜ್, ಲಕ್ಷ್ಮೀನಾರಾಯಣ ನಗರ, ಕುತ್ಪಾಡಿ, ಉಡುಪಿ ಜಿಲ್ಲೆ ಇಲ್ಲಿನ ಬಾಲಕರ ವಿದ್ಯಾರ್ಥಿನಿಲಯವನ್ನು ಕಟ್ಟಿಸಲು ರೂ.7.50 ಲಕ್ಷಗಳನ್ನು ಪ್ರಸ್ತುತ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2210-05-200-0-05 ಯೋಜನೆಯಡಿ ರೂ.300.00 ಲಕ್ಷಗಳ ಅನುದಾನದಲ್ಲಿ ರೂ.7.50 ಲಕ್ಷಗಳನ್ನು ಮಾತ್ರ (ರೂ. ಏಳು ಲಕ್ಷದ ಐವತ್ತು ಸಾವಿರಗಳು ಮಾತ್ರ) ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ ಇಲಾಖೆ ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಆಕುಕ 40 ಅಆಸ 2005, ದಿನಾಂಕ: 15.01.2005ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಚೋಮಾನಾಯಕ್ ಜಿ.
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪಿ.ಆರ್.206

ವಿಷಯ : ಶ್ರೀಮತಿ ಮಲ್ಲವ್ವ ಈರಪ್ಪ ಬಂಡಿ ವಡ್ಡರ್, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಚಿಗಟೇರಿ, ದಾವಣಗೆರೆ ಜಿಲ್ಲೆ ಇವರ ಅನಧಿಕೃತ ಗೈರುಹಾಜರಿ ಬಗ್ಗೆ ಇಲಾಖಾ ವಿಚಾರಣೆ-ಅಂತಿಮ ಆದೇಶ.

ಓದಲಾಗಿದೆ :
1. ನಿರ್ದೇಶನಾಲಯದ ದೋಷಾರೋಪಣೆ ಹಾಗೂ ತಿಳುವಳಿಕೆಯ ಪತ್ರ ಸಂಖ್ಯೆ: ಡಿಪಿಎನ್ (13) ಸಿಆರ್ 66/03-04 ದಿನಾಂಕ: 22.10.2003.
2. ನೌಕರರ ಲಿಖಿತ ಅಹವಾಲು ಪತ್ರ ದಿನಾಂಕ: 07.04.2003.
3. ವಿಚಾರಣಾಧಿಕಾರಿಗಳ ನೇಮಕಾತಿ ಆದೇಶ ಸಂಖ್ಯೆ: ಡಿಪಿಎನ್ (13) ಸಿಆರ್ 66/03-04 ದಿನಾಂಕ: 06.03.2004.
4. ವಿಚಾರಣಾ ವರದಿಯ ಸಂಖ್ಯೆ: ವಿಆ: ವಿಚಾರಣೆ:ಎನ್‌ಜಿ: 70/ 03-04, ದಿನಾಂಕ: 28.07.2004.
5. ವಿಚಾರಣಾ ವರದಿ ನೌಕರರಿಗೆ ಜಾರಿ ಮಾಡಿದ ಸೂಚನಾ ಪತ್ರದ ಸಂಖ್ಯೆ ಡಿಪಿಎನ್ (13) ಸಿಆರ್ 66/ 03-04 ದಿನಾಂಕ: 21.08.2004.
6. ನೌಕರರ ಲಿಖಿತ ಅಹವಾಲು ಪತ್ರ ದಿನಾಂಕ: 09.09.2004.

ಪ್ರಸ್ತಾವನೆ:

ಶ್ರೀಮತಿ ಮಲ್ಲವ್ವ ಈರಪ್ಪ ಬಂಡಿ ವಡ್ಡರ್, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ, ಇವರು ಹಿಂದೆ ಪ್ರಾಥಮಿಕ ಆರೋಗ್ಯ ಕೇಂದ್ರ, ಚಿಕ್ಕಬಾಸೂರು, ಬ್ಯಾಡಗಿ ತಾಲ್ಲೂಕು ಬಳ್ಳಾರಿ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ: 01.11.1995 ರಿಂದ 18.01.2004ರವರೆಗೆ ಅನಧಿಕೃತ ಗೈರುಹಾಜರಿ ಬಗ್ಗೆ ಮೇಲೆ ಓದಲಾದ (1)ರಲ್ಲಿನ ಪತ್ರದಲ್ಲಿ ತಿಳುವಳಿಕೆ ಹಾಗೂ ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸಿದ್ದು, ಇದಕ್ಕೆ ಅನುಗುಣವಾಗಿ ನೌಕರರು ಮೇಲೆ ಓದಲಾದ (2)ರಲ್ಲಿನ ಪತ್ರದಲ್ಲಿ ಸಲ್ಲಿಸಿದ ಲಿಖಿತ ಅಹವಾಲನ್ನು ಪರಿಶೀಲಿಸಿ, ಅದು ಸಮರ್ಪಕವಾಗಿರದ ಕಾರಣ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವುದು ಸೂಕ್ತವೆಂದು ನಿರ್ಣಯಿಸಿ ಮೇಲೆ ಓದಲಾದ (3)ರಲ್ಲಿನ ಆದೇಶದಲ್ಲಿ ಮುಖ್ಯ ಜಾಗೃತ ಅಧಿಕಾರಿಗಳು (ಜಾಗೃತ ಕೋಶ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದ್ದು, ಮೇಲೆ ಓದಲಾದ (4)ರಂತೆ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸಿರುತ್ತಾರೆ. ಮೇಲೆ ಓದಲಾದ (5)ರಲ್ಲಿನ ಸೂಚನಾಪತ್ರದಲ್ಲಿ ವಿಚಾರಣೆ ವರದಿಯ ಪ್ರತಿಯನ್ನು ನೌಕರರಿಗೆ ಜಾರಿಗೊಳಿಸಿದ್ದಕ್ಕನುಗುಣವಾಗಿ ಮೇಲೆ ಓದಲಾದ (6)ರಲ್ಲಿ ನೌಕರರು ತನ್ನ ಲಿಖಿತ ಅಹವಾಲನ್ನು ಸಲ್ಲಿಸಿರುತ್ತಾರೆ.

ನೌಕರರು ಸಲ್ಲಿಸಿರುವ ಲಿಖಿತ ಅಹವಾಲು ಹಾಗೂ ವಿಚಾರಣಾಧಿಕಾರಿಗಳು ನೀಡಿರುವ ವಿಚಾರಣಾ ವರದಿಯನ್ನು ಪರಿಶೀಲಿಸಿದ ತರುವಾಯ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ ಸಂಖ್ಯೆ: ಡಿಪಿಎನ್ (13) ಸಿಆರ್: 66/ 03-04, ಬೆಂಗಳೂರು, ದಿನಾಂಕ: 27ನೇ ಜನವರಿ 2005

1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮೊಹಮ್ಮದ್ ಸನಾವುಲ್ಲ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರು ಆದ ನಾನು ಶ್ರೀಮತಿ ಮಲ್ಲವ್ವ ಈರಪ್ಪ ಬಂಡಿ ವಡ್ಡರ್, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಚಿಗಟೇರಿ, ದಾವಣಗೆರೆ ಜಿಲ್ಲೆ ಇವರು ದಿನಾಂಕ: 01.11.1995 ರಿಂದ 18.01.2004 ರವರೆಗೆ ಕರ್ತವ್ಯಕ್ಕೆ ಗೈರುಹಾಜರಾಗಿರುವುದರಿಂದ ದಂಡನೆಯಾಗಿ ಸದರಿ ನಿಯಮ 8(vii)ರ ಅನ್ವಯ ಕೂಡಲೇ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಿದ್ದೇನೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಮೊಹಮ್ಮದ್ ಸನಾವುಲ್ಲ
ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.

ಪಿ.ಆರ್.207

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಶ್ರೀ ಕೆ.ಎಸ್. ರಾಯ್ಕರ್, ಕೆಎಎಸ್ (ಹಿ.ಶ್ರೇ.) ಅಧಿಕಾರಿ ಹಾಲಿ ಪೌರಾಡಳಿತ ಮತ್ತು KUIDFC ಸಚಿವರ ಆಪ್ತಕಾರ್ಯದರ್ಶಿ ಇವರು ಸಚಿವರೊಡನೆ ಅಹಮದಾಬಾದ್ ಪಟ್ಟಣಕ್ಕೆ ವಿಮಾನದಲ್ಲಿ ಪ್ರಯಾಣಿಸಿರುವುದಕ್ಕೆ ಘಟನೋತ್ತರ ಮಂಜೂರಾತಿ-ಆದೇಶ.

ಓದಲಾಗಿದೆ : 1. ಪೌರಾಡಳಿತ ಮತ್ತು KUIDFC ಸಚಿವರ ಪತ್ರ ಸಂಖ್ಯೆ: MMA & KUIDFC /m/511/2004, ದಿನಾಂಕ:21.12.2004.

2. ಮುಖ್ಯ ಮಂತ್ರಿಯವರ ಉಪಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ: CM/MIN/52/2005, ದಿನಾಂಕ: 05.01.2005.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 21.12.2004ರ ಪತ್ರದಲ್ಲಿ ಪೌರಾಡಳಿತ ಮತ್ತು KUIDFC ಸಚಿವರು 2004ರ ನವೆಂಬರ್ ತಿಂಗಳಲ್ಲಿ ಗುಜರಾತ್ ರಾಜ್ಯದ ಅಹಮದಾಬಾದ್ ನಗರದ ಮಹಾನಗರದ ಪಾಲಿಕೆಯಲ್ಲಿ ಆಸ್ತಿ ತೆರಿಗೆಯ ಸುಧಾರಣೆ ಕುರಿತಂತೆ ಅಧ್ಯಯನ ಮಾಡುವ ಸಲುವಾಗಿ ದಿನಾಂಕ: 03.11.2004ರಿಂದ 05.11.2004ರವರೆಗೆ ಅಹಮದಾಬಾದ್ ನಗರಕ್ಕೆ ಪ್ರವಾಸವನ್ನು ಕೈಗೊಂಡಿದ್ದು ತಮ್ಮೊಂದಿಗೆ ಆಪ್ತಕಾರ್ಯದರ್ಶಿಯಾದ ಶ್ರೀ ಕೆ.ಎಸ್. ರಾಯ್ಕರ್‌ರವರು ವಿಮಾನದಲ್ಲಿ ಪ್ರಯಾಣಿಸಿ ಹಿಂದಿರುಗಿರುವುದಕ್ಕೆ ಘಟನೋತ್ತರ ಮಂಜೂರಾತಿ ನೀಡಲು ಕೋರಿಕೆ ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 28 ಆಸೇಇ 2005, ಬೆಂಗಳೂರು, ದಿನಾಂಕ: 2ನೇ ಫೆಬ್ರವರಿ, 2005

ಶ್ರೀ ಕೆ.ಎಸ್. ರಾಯ್ಕರ್, ಕೆ.ಎ.ಎಸ್ (ಹಿ.ಶ್ರೇ.) ಅಧಿಕಾರಿ ಹಾಲಿ ಪೌರಾಡಳಿತ ಮತ್ತು KUIDFC ಸಚಿವರ ಆಪ್ತಕಾರ್ಯದರ್ಶಿ ಇವರು ದಿನಾಂಕ: 03.11.2004 ರಿಂದ 05.11.2004ರವರೆಗೆ ಸಚಿವರೊಂದಿಗೆ ಅಹಮದಾಬಾದ್ ನಗರಕ್ಕೆ ವಿಮಾನದಲ್ಲಿ ಪ್ರವಾಸಮಾಡಿ ಹಿಂದಿರುಗಿರುವುದಕ್ಕೆ ಘಟನೋತ್ತರ ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಯು.ಪಿ. ಪ್ರಭು
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2).

ಪಿ.ಆರ್.208

ENERGY SECRETARIAT

Sub: Transfer of 1.25 M.W. Wind Power Capacity in favour of M/s Aradhya Steel Wires Private Limited-orders relating to.

Read: 1. Government Order No. DE 280 NCE 2004, Dated: 25.10.2004.

2. Letter No. KRED/08/ASWPL/2005/ 101(c), Dated: 17.01.2005, received from the Managing Director, Karnataka Renewable Energy Development Limited, Bangalore.

Preamble:

In the Government Order Dated: 25.10.2004 read at (1) above, sanction was accorded for implementation of 15 M.W. capacity Wind Power Project at Chitradurga District, to M/s Kurumaradikere Energy Limited.

(2) Now, the Managing Director, Karnataka Renewable Energy Development Limited, Bangalore, in his letter Dated: 17.01.2005 read at (2) above, has recommended to Government for transfer of 1.25 M.W. Wind Power capacity in favour of M/s Aradhya Steel Wires Private Limited, at Survey No. 62 & 63 of Ingaldala village of Chitradurga District, from out of the sanctioned 15 M.W. capactiy of M/s Kurumaradikere Energy Limited.

(3) The proposal has been examined and pass the following order:

Government Order No. EN 18 NCE 2005, Bangalore, Dated; 3rd February, 2005

(4) Government are pleased to accord sanction for transfer of 1.25 M.W. Wind Power capacity in favour of M/s Aradhya Steel Wires Private Limited, from out of 15 M.W. capacity of M/s Kurumaradikere Energy Limited allotted in the Government order Dated: 25.10.2004 at Ingaldala village of Chitradurga District.

(5) The terms and conditions of the original allotment made in the Government order read at (1) above are IPSOFACTO applicable.

By Order and in the Name of the Governor of Karnataka,
SURESH B. KRISHNAPPANAVAR
Under Secretary to Government, Energy Department.

PR-209

Sub: Transfer of 1.25 M.W. Wind Power Capacity in favour of M/s Sanjana Power-orders relating to.

Read: 1. Government Order No. DE 325 NCE 2002, Dated: 21.12.2002.

2. Letter No. KRED/08/SP/ 2005/ 131, Dated 20.01.2005, received from the Managing Director, Karnataka Renewable Energy Development Limited, Bangalore.

Preamble:

In the Government Order Dated: 21.12.2002 read at (1) above, sanction was accorded for implementation of 20 M.W. capacity Wind Power Project at Chitradurga District, to M/s Suzlon Energy Limited.

(2) Now, the Managing Director, Karnataka Renewable Energy Development Limited, Bangalore, in his letter Dated: 20.01.2005 read at (2) above, has recommended to Government for transfer of 1.25 M.W. Wind Power capacity in favour of M/s Sanjana Power, at Survey No. 33/P of Chitradurga village of Chitradurga District, from out of the sanctioned 20 M.W. capactiy of M/s Suzlon Energy Limited.

(3) The proposal has been examined and pass the following order:

Government Order No. EN 16 NCE 2005, Bangalore, Dated; 3rd February, 2005

(4) Government are pleased to accord sanction for transfer of 1.25 M.W. Wind Power capacity in favour of M/s Sanjana Power from out of 20 M.W. capacity of M/s Suzlon Energy Limited allotted in the Government order Dated: 21.12.2002 at Chitradurga village of Chitradurga District.

(5) The terms and conditions of the original allotment made in the Government order read at (1) above are IPSOFACTO applicable.

By Order and in the Name of the Governor of Karnataka,
SURESH B. KRISHNAPPANAVAR
Under Secretary to Government,
Energy Department.

PR-210

Sub: Issue of two separate Government Orders of 2.5 M.W. Wind Farm Projects (1.25 M.W. each) in favour of M/s Abhishek Exports-orders relating to.

Read:
1. Government Order No. DE 325 NCE 2002, Dated: 21.12.2002.
2. Government Order No. DE 313 NCE 2004, Dated: 09.09.2004.
3. Letter No. KRED/ 08/ AE/ 2004/ 130, Dated: 20.01.2005 received from the Managing Director, Karnataka Renewable Energy Development Limited, Bangalore.

Preamble:

In the Government Order Dated: 21.12.2002 read at (1) above, sanction has been accorded for implementation of 20 M.W. capacities Wind Power Project at Chitradurga District, to M/s Suzlon Energy Limited.

(2) In the Government Order Dated: 09.09.2004 read at (2) above, sanction has been accorded for implementation of 2.5 M.W. capacity Wind Power Project at Chitradurga District to M/s Abhishek Export Limited.

(3) Now, the Managing Director, Karnataka Renewable Energy Development Limited, Bangalore, in his letter Dated: 20.01.2005 read at (3) above, has recommended to the Government issues of two separate Government Orders of 2.50 M.W. (1.25 M.W. each, Wind Turbine Generator of two numbers identified as K-30, K39) Wind Farm Projects in favour of M/s Abhishek exports at survey No.:33 of Chitradurga Village of Chitradurga district.

(4) The proposal has been examined and pass the following order:

Government Order No. DE 19 NCE 2005(2), Bangalore, Dated; 3rd February, 2005

(5) Government are pleased to accord sanction for transfer of 1.25 M.W. Wind Power capacity (pertains to K39) in favour of M/s Abhishek Exports, from out of 20 M.W. capacity of M/s Suzlon Energy Limited allotted in the Government order Dated: 21.12.2002.

(6) The terms and conditions of the original allotment made in the Government order read at (1) above are IPSOFACTO applicable.

By Order and in the Name of the Governor of Karnataka,
SURESH B. KRISHNAPPANAVAR
Under Secretary to Government, Energy Department.

PR-211

Sub: Issue of two separate Government Orders of 2.5 M.W. Wind Farm Projects (1.25 M.W. each) in favour of M/s Abhishek Exports-orders relating to.

Read:
1. Government Order No. DE 325 NCE 2002, Dated: 21.12.2002.
2. Government Order No. DE 313 NCE 2004, Dated: 09.09.2004.
3. Letter No. KRED/ 08/ AE/ 2004/ 130, Dated: 20.01.2005 received from the Managing Director, Karnataka Renewable Energy Development Limited, Bangalore.

Preamble:

In the Government Order Dated: 21.12.2002 read at (1) above, sanction has been accorded for implementation of 20 M.W. capacity Wind Power Project at Chitradurga District, to M/s Suzlon Energy Limited.

(2) In the Government Order Dated: 09.09.2004 read at (2) above, sanction has been accorded for implementation of 2.5 M.W. capacity Wind Power Project at Chitradurga District to M/s Abhishek Export Limited.

(3) Now, the Managing Director, Karnataka Renewable Energy Development Limited, Bangalore, in his letter Dated: 20.01.2005 read at (3) above, has recommended to the Government issues of two separate Government Orders of 2.50 M.W. (1.25 M.W. each, Wind Turbine Generator of two numbers identified as K-30, K39) Wind Farm Projects in favour of M/s Abhishek exports at survey No.33 of Chitradurga Village of Chitradurga district.

(4) The proposal has been examined and pass the following order:

Government Order No. DE 19 NCE 2005(1), Bangalore, Dated; 3rd February, 2005

(5) Government are pleased to accord sanction for transfer of 1.25 M.W. Wind Power capacity (pertains to K-30) in favour of M/s Abhishek Exports, from out of 20 M.W. capacity of M/s Suzlon Energy Limited allotted in the Government order Dated: 21.12.2002.

(6) The terms and conditions of the original allotment made in the Government order read at (1) above are IPSOFACTO applicable.

By Order and in the Name of the Governor of Karnataka,
SURESH B. KRISHNAPPANAVAR
Under Secretary to Government, Energy Department.

PR-212

FOREST, ECOLOGY AND ENVIRONMENT SECRETARIAT

Sub: Diversion of 38.27 ha. (4.66 ha. in Davanagere, 14 ha. in Gujanur Block of Bellary and 19.61 ha. in Sogi Block of Bellary District) of forest land for establishing 28 MW (3 MW + 3.75 MW and 21.25 MW) Wind Power Projects in favour of M/s Suzlon Energy Ltd., Bangalore.

Read:
1. Letter No. A5(5)GFL. W.POWER .CR.10/03-04, Dated: 23.10.03 of Principal Chief Conservator of Forests, Bangalore.
2. State Government letter No.FEE 286 FGL 2002, dated: 20.12.2003.
3. Letter No. F No.8-15/2004-FC, dated: 26/28.04.2004 of Government of India, Ministry of Environment and Forests, New Delhi.
4. State Government letter No. FEE 286 FGL 2002, dated: 25.10.2004.
5. Letter No.F No. 8-15/2004-FC, dated: 10.11.2004 of Government of India, Ministry of Environment and Forests, New Delhi.

PREAMBLE:

The Principal Chief Conservator of Forests, Bangalore vide his letter dated 23.10.2003 read at (1) above has submitted the proposal to obtain the approval of Government of India under Section 2 of Forest (Conservation) Act, 1980 for diversion of 99.46 ha. for the purpose of establishing Wind Power Project in favour of M/s Suzlon Energy Ltd., Bangalore subject to certain conditions. The details of land is as follows:

			Hectares
1)	Adjoining to Guzunur Forest.		
	Huligudda Reserve Forest of Bellary District.		
	Sy.No. 1 of Nagatibassapur Village		4.50
	Sy.No. 180 of Devagondanahalli Village		9.10
	Sy.No. 233 of Shivalinganahalli Village		0.40
		Total:	**14.00**
2)	Sogi Reserve Forest of Bellary District.		
	Sy.No. 528/1 of Sogi Village		43.00
	Sy.No. 527 of Sogi Village		7.05
	Sy.No. 174 of Adavimallankeri Village		15.50
	Sy.No 311 of Hugalur Village		2.20
	Sy.No 37 of Varakanahalli Village		6.25
	Sy.No 38 of Varakanahalli Village		6.80
		Total:	**80.80**
3)	Sogi Reserve Forest of Davangere District.		
	Sy. No.195 of Kanivihalli Village		4.66
		Total:	**4.66**

Accordingly the proposal was recommended to Government of India vide State Government letter dated 20.12.2003 read at(2) above.

The Government of India, Ministry of Environment and Forests, New Delhi vide their letter dated 26/28.04.2004 read at (3) above has given its approval in Principle (Stage-I) subject to fulfillment of certain conditions and the same was communicated to the Principal Chief Conservator of Forests, Bangalore for compliance.

The Principal Chief Conservator of Forests, Bangalore vide his letter dated 15.10.2004 furnished the compliance report and the same has been sent to Government of India vide State Government letter dated: 25.10.2004 read at (4) above.

Finally, Government of India Ministry of Environment and Forests, New Delhi vide their letter dated 10.11.2004 read at (5) above has conveyed its approval (Stage-II) under Section 2 of Forest (Conservation) Act, 1980 for diversion of 38.27 ha. (4.66 ha. in Davanagere, 14 ha. in Gujanur Block of Bellary and 19.61 ha. in Sogi Block of Bellary District) of forest land for establishing 28 MW (3 MW + 3.75 MW and 21.25 MW) Wind Power Projects in favour of M/s Suzlon Energy Ltd., Bangalore subject to certain conditions.

The proposal has been examined in detail and hence the order.

GOVERNMENT ORDER NO. FEE 286 FGL 2002, BANGALORE, DATED: 7th February, 2005.

In the Circumstances explained in the preamble above, Government are pleased to accord sanction under Section 2 of Forest (Conservation) Act,1980 for diversion of 38.27 ha. (4.66 ha. in Davanagere, 14 ha. in Gujanur Block of Bellary and 19.61 ha. in Sogi Block of Bellary District) of forest land for establishing 28 MW (3 MW + 3.75 MW and 21.25 MW) Wind Power Projects in favour of M/s Suzlon Energy Ltd., Bangalore subject to the following conditions.

1. The legal Status of the forest land shall remain unchanged.
2. The Compensatory Afforestation shall be raised and maintained by the State Forest Department over 38.27 ha. (4.66 ha. in Davanagere, 33.61 ha. in Bellary) of non-forest land at the project cost.
3. The non-forest land for compensatory afforestation shall be notified by the State Government as R.F. under Section-4 or PF under Section-29 of the Indian Forest Act, 1927 or the State Forest Act within a period of 6 months and Nodal Officer(Forest Conservation) shall report the compliance.
4. Demarcation of the area will be done on ground at project cost using 4 feet high RCC Pillars. The pillars shall indicate serial numbers, forward and back bearings and distance between adjacent pillars.
5. The State Government shall implement the plan prepared for additional afforestation and maintenance (in addition to compensatory afforestation) over 61.19 ha. of forest land and for biodiversity conservation over the same area at the project cost in a time bound manner.
6. Trees shall be felled only when it becomes necessary and under strict supervision of State Forest Department.
7. The user agency shall ensure that there shall be no damage to the available wildlife.
8. The lease period shall be for 30 years. The forest land will first be leased in favour of the developers and within a period of 4 years of Stage-II approval, the lease shall be transferred in the name of investors power producers. In case the developers fail to develop wind farms the land shall be reverted back to State Forest Department without any compensation.
9. The vane tips of the wind turbine shall be painted with orrange colour to avoid bird hits.
10. Within the perimeter of wind farm, smaller turbines may be allowed for optimization of wind energy.
11. A lease rent of Rs. 30,000.00 per MW for annum for the period of lease shall be charged from the user agency in addition. This amount shall be utilized in providing gas connection to the local villagers under the Joint Forest Management Programme and for other conservation measures. This amount shall be deposited with CAMPA by the State Government as soon as CAMPA intimates head of account.
12. About 65 –70% of leased out area in the wind farm shall be utilized for developing medicinal plant gardens, if possible, by the State Forest Department at the project cost. The State Government may take help National Medicinal Plant Board in creating corridors of medicinal plant gardens may be taken. The intervening areas between two wind mills` footprints should also be planted up by dwarf species of trees at the project cost.

13. The Wind turbine/wind mills to be used on forest lands and the applicability of such technology in the country, should have general recognition of the Ministry of Non-Conventional Energy Sources, Government of India.
14. The forest land shall not be used for any purpose other than that specified in the proposal.
15. It should be ensured that the project area does not form part of any National Park/Sanctuary.
16. The lessee shall pay the lease rent as fixed by the Government from time to time.
17. The leased out area should be used for the purpose for which it is granted. In case the land is not used for the stipulated purpose with in one year or when it no longer needed for the stipulated purpose the area should automatically revert back to the Forest Department. The Deputy Conservator of Forests, Bellary and Davnagere Division will take necessary action in this regard.
18. Compensatory afforestation shall be raised at the cost of user agency over equivalent non-forest land at the rate of prevailing at the time of approval. (at present it is Rs. 54,200/- per ha.).
19. The Karnataka Forest Act 1963 and Rules 1969 will be applicable for any violation.
20. The user agency should properly maintain the roads. All measures should be taken to avoid soil erosion.
21. The user agency should not sub lease the area.
22. The user agency has to pay the net present value of the forest land at the rate of Rs. 5.80 lakhs per hectare to Rs. 9.20 lakhs per ha. of forest land depending upon the quantity and density of the land in question as per the directions issued by the Government of India vide letter F.No. 5-1/98 FC(part-II) dated: 11.8.2003 and as per Government Notification No.FEE 247 FGL 2002, dated: 17.1.2004.
23. The user agency shall abide by all the conditions imposed upon by Government of India, Government of Karnataka and principal Chief Conservator of Forests.
24. Any other condition to be stipulated by /Government of India/State Government /Principal Chief Conservator of Forests, Karnataka in the interest of conservation of forests.

By order and in the name of the Governor of Karnataka,

S.R.VATSALA

Under Secretary to Government,

Forest, Ecology and Environment Department.

PR-213

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಸಣ್ಣ, ಅತಿಸಣ್ಣ ಹಾಗೂ ಆನ್ಸಿಲರಿ ಘಟಕಗಳಿಗೆ ವಾರ್ಷಿಕವಾಗಿ ಪ್ರಶಸ್ತಿ ನೀಡಲು ಮಾರ್ಗಸೂಚಿ.

ಪ್ರಸ್ತಾವನೆ:

ರಾಜ್ಯದಲ್ಲಿ ಸಣ್ಣ ಹಾಗೂ ಅತಿ ಸಣ್ಣ ಕೈಗಾರಿಕೆಗಳು ಮತ್ತು ಅನ್ಸಿಲರಿ ಘಟಕಗಳಿಗೆ ನೀಡುತ್ತಿದ್ದ ವಾರ್ಷಿಕ ಪ್ರಶಸ್ತಿ ಯೋಜನೆಯನ್ನು 1994-95 ರಿಂದ ನಿಲ್ಲಿಸಿದ್ದು, ಸದರಿ ಯೋಜನೆಯನ್ನು ಪುನರಾರಂಭಿಸಲು ರಾಜ್ಯ ಸರ್ಕಾರವು ತೀರ್ಮಾನಿಸಿದೆ. ಈ ರೀತಿ ಪ್ರಶಸ್ತಿ ನೀಡುವುದರಿಂದ ರಾಜ್ಯದ ಸಣ್ಣ ಕೈಗಾರಿಕಾ ಘಟಕಗಳಿಗೆ ಉತ್ತಮ ಕಾರ್ಯನಿರ್ವಹಿಸಲು ಪ್ರೋತ್ಸಾಹ ನೀಡಿದಂತಾಗುತ್ತದೆ. ಆದುದರಿಂದ, ವಾರ್ಷಿಕ ಪ್ರಶಸ್ತಿ ನೀಡುವ ಸಲುವಾಗಿ ಒಂದು ಸಮಿತಿ ರಚಿಸಲು ಹಾಗೂ ಅತಿ ಸಣ್ಣ, ಸಣ್ಣ ಹಾಗೂ ಆನ್ಸಿಲರಿ ಘಟಕಗಳಿಗೆ 2004-05ನೇ ಸಾಲಿನಿಂದ ಅನ್ವಯಿಸುವಂತೆ ವಾರ್ಷಿಕ ರಾಜ್ಯ ಪ್ರಶಸ್ತಿ ನೀಡಲು ಮಾರ್ಗಸೂಚಿ ಹೊರಡಿಸಲು ತೀರ್ಮಾನಿಸಲಾಗಿದೆ. ಆದುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 288 ಸಿಎಸ್‌ಸಿ 2004, ಬೆಂಗಳೂರು, ದಿನಾಂಕ: 4ನೇ ಫೆಬ್ರವರಿ, 2005

ರಾಜ್ಯದ ಅತಿಸಣ್ಣ ಕೈಗಾರಿಕಾ ಹಾಗೂ ಆನ್ಸಿಲರಿ ಘಟಕಗಳ ಉದ್ದಿಮೆದಾರರಿಗೆ 2004-05ನೇ ಸಾಲಿನಿಂದ ಅನ್ವಯವಾಗುವಂತೆ ವಾರ್ಷಿಕ ರಾಜ್ಯ ಪ್ರಶಸ್ತಿ ನೀಡಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿ ರಚಿಸಲಾಗಿದೆ.

ಆಯ್ಕೆ ಸಮಿತಿ:

1.	ಕೈಗಾರಿಕಾಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ	ಅಧ್ಯಕ್ಷರು
2.	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ನಿಗಮ	ಸದಸ್ಯರು
3.	ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಸ್.ಐ.ಡಿ.ಸಿ.	ಸದಸ್ಯರು
4.	ನಿರ್ದೇಶಕರು, ಸಣ್ಣ ಕೈಗಾರಿಕೆಗಳ ಸೇವಾ ಸಂಸ್ಥೆ	ಸದಸ್ಯರು
5.	ರೀಜನಲ್ ಮ್ಯಾನೇಜರ್, ಎಸ್.ಐ.ಡಿ.ಬಿ.ಐ.	ಸದಸ್ಯರು
6.	ರೀಜನಲ್ ಮ್ಯಾನೇಜರ್, ಎನ್.ಎಸ್.ಐ.ಸಿ.	ಸದಸ್ಯರು
7.	ಅಧ್ಯಕ್ಷರು, ಕಾಸಿಯಾ	ಸದಸ್ಯರು
8.	ಅಧ್ಯಕ್ಷರು, ಅವೇಕ್	ಸದಸ್ಯರು
9.	ವ್ಯವಸ್ಥಾಪಕ ನಿರ್ದೇಶಕರು, ಕೆ.ಸಿ.ಟಿ.ಯು.	ಸದಸ್ಯ ಕಾರ್ಯದರ್ಶಿ

ಪ್ರಶಸ್ತಿಯ ಮಾದರಿ:

ಸಣ್ಣ ಕೈಗಾರಿಕಾ ಉದ್ಯಮಿಗಳ ಪ್ರಶಸ್ತಿ

ಸಂಶೋಧನೆ ಮತ್ತು ಅಭಿವೃದ್ಧಿ ಪ್ರಶಸ್ತಿ ಮತ್ತು

ಜಿಲ್ಲೆಗೆ ಒಂದರಂತೆ ಉತ್ತಮ ಸಣ್ಣ ಕೈಗಾರಿಕೆ ಉದ್ದಿಮೆದಾರರಿಗೆ ಪ್ರಾದೇಶಿಕ ಪ್ರಶಸ್ತಿ.

ನೋಡಲ್ ಏಜೆನ್ಸಿ:

ಅತ್ಯುತ್ತಮ ಸಣ್ಣ ಕೈಗಾರಿಕೋದ್ಯಮಿಗಳಿಗೆ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಶಸ್ತಿ ಮತ್ತು ಪ್ರಾದೇಶಿಕ ಪ್ರಶಸ್ತಿಗಳಿಗೆ ಕರ್ನಾಟಕ ಸರ್ಕಾರದ ಪರವಾಗಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮ ನೋಡಲ್ ಏಜೆಂಟ್ ಆಗಿರುತ್ತದೆ.

ಪ್ರಶಸ್ತಿಗಳ ಸಂಖ್ಯೆ:

ಒಂದೊಂದು ವರ್ಗದಲ್ಲಿ 3 ರಾಜ್ಯ ಮಟ್ಟದ ಪ್ರಶಸ್ತಿ/ ಪರಿಶಿಷ್ಟ ಜಾತಿ; ಪ್ರವರ್ಗ ಉದ್ಯಮಿಗಳಿಗೆ ಒಂದು ವಿಶೇಷ ಪ್ರಶಸ್ತಿ/ ಮಹಿಳಾ ಉದ್ಯಮಿಗಳಿಗೆ ಒಂದು ವಿಶೇಷ ಪ್ರಶಸ್ತಿ ಹಾಗೂ 27 ಜಿಲ್ಲಾಮಟ್ಟದ ಉತ್ತಮ ಸಣ್ಣ ಕೈಗಾರಿಕಾ ಉದ್ಯಮಿ ಪ್ರಶಸ್ತಿ:

ಪ್ರಶಸ್ತಿಯ ವಿವರ: ರಾಜ್ಯ ಮಟ್ಟದ ಪ್ರಶಸ್ತಿ

ಮೊದಲ ಪ್ರಶಸ್ತಿ: ರೂ 50,000 ಮತ್ತು ಟ್ರೋಫಿ ಹಾಗೂ ಸೈಟೇಷನ್ ಸರ್ಟಿಫಿಕೇಟ್

ಎರಡನೇ ಪ್ರಶಸ್ತಿ: ರೂ 40,000 ಮತ್ತು ಟ್ರೋಫಿ ಹಾಗೂ ಸೈಟೇಷನ್ ಸರ್ಟಿಫಿಕೇಟ್

ಮೂರನೇ ಪ್ರಶಸ್ತಿ: ರೂ 30,000 ಮತ್ತು ಟ್ರೋಫಿ ಹಾಗೂ ಸೈಟೇಷನ್ ಸರ್ಟಿಫಿಕೇಟ್

ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗ ಮತ್ತು ಮಹಿಳಾ ಉದ್ಯಮಿಗಳಿಗೆ ನೀಡುವ ವಿಶೇಷ ಪ್ರಶಸ್ತಿಗೆ ಪ್ರತಿಯೊಂದು ರೂ.25,000ಗಳ ನಗದು ಮತ್ತು ಟ್ರೋಫಿ ಹಾಗೂ ಸೈಟೇಷನ್ ಸರ್ಟಿಫಿಕೇಟ್.

ಪ್ರಮುಖ (Thrust) ವಲಯ:

ಈ ಪ್ರಶಸ್ತಿಯ ಪ್ರಮುಖ ವಲಯಗಳಾದ ಕೃಷಿ ಮತ್ತು ಆಹಾರ ಸಂಸ್ಕರಣ ಉತ್ಪಾದನೆ, ಸಿದ್ದ ಉಡುಪುಗಳು, ಎಲೆಕ್ಟ್ರಾನಿಕ್ಸ್, ಐಟಿ ಮತ್ತು ಬಿಟಿ, ಇಂಜಿನಿಯರಿಂಗ್ ಉತ್ಪನ್ನ, ಕರಕುಶಲ, ಚರ್ಮ ಕೈಗಾರಿಕೆ, ಜೆಮ್ ಮತ್ತು ಜ್ಯೂಯಲರಿ, ರೇಷ್ಮೆ, ಮಿನರಲ್ ಆಧಾರಿತ, ಆಟೋ ಮೊಬೈಲ್, ಪ್ಲಾಸ್ಟಿಕ್, ಹರ್ಬಲ್ ಉತ್ಪನ್ನ, ಫಾರ್ಮಸಿಟಿಕಲ್ಸ್, ಎಲೆಕ್ಟ್ರಿಕಲ್ ಇಕ್ವಿಪ್‌ಮೆಂಟ್ಸ್, ನಾನ್‌ಕನ್‌ವೆನ್‌ಷನಲ್ ಎನರ್ಜಿ ಇಕ್ವಿಪ್‌ಮೆಂಟ್ಸ್‌ಗಳು ಇತ್ಯಾದಿ ವಲಯಗಳು ಕೇಂದ್ರೀಕರಿಸಿಕೊಂಡಿರುತ್ತದೆ.

ಆಯ್ಕೆಗೆ ಕೆಲವು ಮಾನದಂಡಗಳು ಕೆಳಕಂಡಂತೆ ಇರುತ್ತದೆ.

- ಘಟಕದ ಹಿಂದಿನ ನಾಲ್ಕು ವರ್ಷಗಳ ಬಂಡವಾಳ, ಉದ್ಯೋಗ ಉತ್ಪಾದನೆ ವಿವರ.
- ವಾರ್ಷಿಕ ಉತ್ಪಾದನೆಯ ಮೌಲ್ಯ/ Job work
- ಹಿಂದಿನ ನಾಲ್ಕು ವರ್ಷಗಳ ನಿವ್ವಳ ಲಾಭ.
- ಸಂಶೋಧನೆ ಮತ್ತು ಅಭಿವೃದ್ಧಿ ವೆಚ್ಚ.
- ಘಟಕದ ಸ್ಥಳ- ಹಿಂದುಳಿದ/ ಮುಂದುವರಿದ.
- ಸಂಶೋಧನೆ ಮತ್ತು ಅಭಿವೃದ್ಧಿ/ ಸಂಶೋಧನೆ ಮತ್ತು ಅಭಿವೃದ್ಧಿ ವಹಿವಾಟಿನ ಸಾಧನೆಯ ವಿವರ.
- ಪೇಟೆಂಟ್ ಮತ್ತು ವಿನ್ಯಾಸದ ಹಕ್ಕು ಪಡೆದಿರುವ ವಿವರ.
- ಘಟಕಗಳು ಅಳವಡಿಸಿರುವ ಇಂಧನ ಸಂರಕ್ಷಣೆಯ ವಿವರ.
- ಸಿಬ್ಬಂದಿಯ ಸುಧಾರಣೆಗಾಗಿ ಕೈಗೊಂಡಿರುವ ಹಿತರಕ್ಷಣೆ/ ತರಬೇತಿ ವಿವರ.
- ಪ್ರಮಾಣೀಕರಣ/ ಗುಣ ನಿಯಂತ್ರಣಕ್ಕಾಗಿ ಅಳವಡಿಸಿರುವ ವಿವರ.
- ತಾಂತ್ರಿಕತೆ ಅಳವಡಿಕೆ.

ಆಯ್ಕೆ ಸಮಿತಿಯು ಆಯ್ಕೆ ಮಾಡಲು ಮಾನದಂಡಗಳನ್ನು ಅನುಸರಿಸಿ ಅರ್ಜಿ ನಮೂನೆಗಳನ್ನು ರಚಿಸಿ ಮತ್ತು ಸಣ್ಣ ಕೈಗಾರಿಕೋದ್ಯಮಿಗಳಿಂದ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ಘಟಕಗಳನ್ನು ಆಯ್ಕೆ ಮಾಡಿ ಪಟ್ಟಿಯನ್ನು ಸರ್ಕಾರಕ್ಕೆ ಶಿಫಾರಸು ಮಾಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ.ಎಸ್. ಪಾರ್ವತಿ

ಪಿ.ಆರ್.214

ಸರ್ಕಾರದ ಅಧೀನ ಕಾರ್ಯದರ್ಶಿ (ಸಪ್ರಕೈ),

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 12 ಸಸಿವಿ 2002, ದಿನಾಂಕ: 11.03.2002.
2. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 56 ಸಸಿವಿ 2003 ದಿನಾಂಕ: 21.06.2003.
3. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 23 ಸಸಿವಿ 2004, ದಿನಾಂಕ: 04.05.2004.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ ಇವರ ಟಿಪ್ಪಣಿ ಸಂಖ್ಯೆ: ವಇ 4308 ಪ್ರಕಾ 2004, ದಿನಾಂಕ: 21.12.2004.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ: 11.03.2002ರ ಸರ್ಕಾರದ ಆದೇಶದಲ್ಲಿ ವಸತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಹುದ್ದೆಯನ್ನು ದಿನಾಂಕ: 10.01.2002 ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹುದ್ದೆ ಎಂದು

ಉನ್ನತೀಕರಿಸಲಾಗಿರುತ್ತದೆ. ನಂತರ ಕ್ರಮ ಸಂಖ್ಯೆ (2) ಮತ್ತು (3)ರಲ್ಲಿ ಓದಲಾದ ಸರ್ಕಾರಿ ಆದೇಶಗಳಲ್ಲಿ ಈ ಹುದ್ದೆಯನ್ನು ದಿನಾಂಕ: 31.03.2005ರವರೆಗೆ ತಾತ್ಕಾಲಿಕವಾಗಿ ಮುಂದುವರೆಸಲಾಗಿರುತ್ತದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ ಇವರು ಮೇಲೆ ಕ್ರಮ ಸಂಖ್ಯೆ: (4)ರಲ್ಲಿ ಓದಲಾದ ದಿನಾಂಕ: 21.12.2004ರ ಟಿಪ್ಪಣಿಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ ಹುದ್ದೆಯನ್ನು ಪೂರಕ ಸಿಬ್ಬಂದಿ ಹುದ್ದೆಗಳೊಂದಿಗೆ ದಿನಾಂಕ: 01.04.2005ರಿಂದ ಮುಂದುವರೆಸುವ ಬಗ್ಗೆ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದ್ದು, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 3 ಸಸಿವಿ 2005, ಬೆಂಗಳೂರು, ದಿನಾಂಕ: 12ನೇ ಜನವರಿ, 2005

ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿನ ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ದಿನಾಂಕ: 01.04.2005ರಿಂದ ಒಂದು ವರ್ಷದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ತಾತ್ಕಾಲಿಕವಾಗಿ ಮುಂದುವರೆಸಲು ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ: 10.07.1996 ರನ್ವಯ ಆರ್ಥಿಕ ಇಲಾಖೆಯ ಸಹಮತಿಯನ್ನು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಯು.ಪಿ. ಪ್ರಭು
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2).

ಪಿ.ಆರ್.215

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಅಶ್ವಥನಾರಾಯಣ, ಮಾಜಿ ಹೆಚ್.ಸಿ. ಒಳಾಡಳಿತ ಇಲಾಖೆ ಇವರ ಪರಿಷ್ಕರಣಾ ಅರ್ಜಿ ಬಗ್ಗೆ.

ಓದಲಾಗಿದೆ :
1. ಡಿ.ಸಿ.ಪಿ. ದಕ್ಷಿಣ ವಿಭಾಗ ಬೆಂಗಳೂರು ಇವರ ಆದೇಶ ಸಂಖ್ಯೆ: ಡಿಇ:ಆರ್-6: 13:ಡಿಸಿಪಿ (ದ) 2000 ದಿನಾಂಕ: 22.01.2002.
2. ಮೇಲ್ಮನವಿ ಅಧಿಕಾರಿ ಹಾಗೂ ಅಡಿಷನಲ್ ಪೊ.ಕ. (ಆಡಳಿತ ಮತ್ತು ಸಿಎಆರ್) ಬೆಂಗಳೂರು ಇವರ ಆದೇಶ ಸಂಖ್ಯೆ: 10: ಅಪೀಲು 2002-03 ದಿನಾಂಕ: 29.07.2002: ಒಬಿ ಸಂಖ್ಯೆ: 1183:02.
3. ಅರ್ಜಿದಾರರ ಪರಿಷ್ಕರಣೆ ಮೇಲ್ಮನವಿ ದಿನಾಂಕ: 04.10.2002.
4. ಡಿಜಿ ಮತ್ತು ಐಜಿಪಿ ಬೆಂಗಳೂರು ಇವರ ಪತ್ರ ಸಂಖ್ಯೆ ಅಪೀಲು:2:71: 2002-03 ದಿನಾಂಕ: 22.06.2004.
5. ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ: 106: ಸಿಎನ್‌ಎಸ್: 04 ದಿನಾಂಕ: 04.01.2005.

ಪ್ರಸ್ತಾವನೆ:

ಶ್ರೀ ಅಶ್ವತ್ಥನಾರಾಯಣ, ಮಾಜಿ ಹೆಚ್.ಸಿ. 408, ತಿಲಕ್‌ನಗರ ಪೊಲೀಸ್ ಠಾಣೆ ಬೆಂಗಳೂರು ಜಿಲ್ಲೆ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರ ವಿರುದ್ಧ ಈ ಕೆಳಕಂಡ ದೋಷಾರೋಪಕ್ಕಾಗಿ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಾಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆ ನಡೆಸಲಾಗಿದೆ.

ದೋಷಾರೋಪ:

"ಶ್ರೀ ಅಶ್ವತ್ಥ ನಾರಾಯಣ, ಹೆಚ್.ಸಿ. 408 ತಿಲಕ್‌ನಗರ ಪೊಲೀಸ್ ಠಾಣೆ ಆದ ನೀವು ದಿನಾಂಕ: 06.08.2000 ರಿಂದ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿದ್ದು, ಕರ್ತವ್ಯಕ್ಕೆ ಹಾಜರಾಗಲು ಠಾಣಾಧಿಕಾರಿಯವರು ನೀಡಿದ ಜ್ಞಾಪನವನ್ನು ದಿನಾಂಕ: 13.08.2000ರಂದು ಸ್ವೀಕರಿಸಿದ್ದರೂ ಕರ್ತವ್ಯಕ್ಕೆ ಹಾಜರಾಗದೇ ದಿನಾಂಕ: 16.09.2000 ರಂದು ಡೆಸರ್ಟರ್ ನೋಟಿಸನ್ನು ದಿನಾಂಕ: 05.10.2000ರಂದು ಸ್ವೀಕರಿಸಿದ್ದರೂ ದಿನಾಂಕ: 20.10.2000ರವರೆಗೆ ಕರ್ತವ್ಯಕ್ಕೆ ಹಾಜರಾಗದೇ ಪದೇ ಪದೇ ಕರ್ತವ್ಯಕ್ಕೆ ಗೈರುಹಾಜರಾಗುವ ಪ್ರವೃತ್ತಿಯುಳ್ಳವರಾಗಿರುವುದು ನಿಮ್ಮ ಕರ್ತವ್ಯದಲ್ಲಿನ ದುರ್ನಡತೆ ಬೇಜವಾಬ್ದಾರಿತನ, ಕರ್ತವ್ಯ ನಿರ್ಲಕ್ಷ್ಯತೆಯನ್ನು ಎತ್ತಿ ತೋರಿಸುತ್ತೆ".

ಮೇಲ್ಕಂಡ ಆರೋಪವು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿದ್ದು, ಅವರ ಸಮಜಾಯಿಷಿಯನ್ನು ಒಪ್ಪದ ಶಿಸ್ತು ಪ್ರಾಧಿಕಾರಿ ಮೇಲೆ (1) ರಲ್ಲಿ ಓದಲಾದ ದಿನಾಂಕ: 22.01.2002ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾ ಮಾಡಲಾಗಿದ್ದು, ಗೈರುಹಾಜರಿ ಅವಧಿಯನ್ನು ಸಂಬಳರಹಿತ ರಜೆ ಎಂದು ಪರಿಗಣಿಸಿರುತ್ತಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯಲ್ಲಿ ಪರಿಗಣಿಸಬಹುದಾದ ಅಂಶಗಳಿಲ್ಲವೆಂದು ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಡಿಷನಲ್ ಪೊಲೀಸ್ ಕಮೀಷನರ್ ಬೆಂಗಳೂರು ಇವರು ಮೇಲೆ (2)ರಲ್ಲಿ ಓದಲಾದ ದಿನಾಂಕ: 29.07.2002ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡು ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣಾ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿದ್ದು, ಅದರ ಮುಖ್ಯ ವಾದಾಂಶಗಳು ಈ ಕೆಳಕಂಡಂತಿವೆ.

1) ತಮ್ಮ ವಿರುದ್ಧ ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾಗಿಲ್ಲವೆಂದು ಇಲಾಖಾ ವಿಚಾರಣೆ ಅಧಿಕಾರಿ ವರದಿ ನೀಡಿದ್ದರೂ ಸಹ ಶಿಸ್ತು ಪ್ರಾಧಿಕಾರಿ ಅದನ್ನು ಒಪ್ಪದೇ ತನ್ನ ಸಮಜಾಯಿಷಿಯನ್ನೂ ಸಹ ಪರಿಗಣಿಸದೇ ಸೇವೆಯಿಂದ ತೆಗೆದುಹಾಕುವ ಘೋರ ಶಿಕ್ಷೆ ವಿಧಿಸಿರುವುದು ನ್ಯಾಯ ಬಾಹಿರವಾಗಿರುತ್ತದೆ.
2) ಗೈರುಹಾಜರಿ ಅವಧಿ 4 ತಿಂಗಳ ಒಳಗೆ ಇದ್ದರೆ ವಾರ್ಷಿಕ ವೇತನ ಮುಂಬಡ್ತಿ ಮುಂದೂಡಿಕೆಯಂತಹ ಶಿಕ್ಷೆ ವಿಧಿಸಬೇಕೆಂದು ಸರ್ಕಾರದ ಆದೇಶ ಇರುತ್ತದೆ.
3) ತಾನು ಮೆಡಿಕಲ್ ಸರ್ಟಿಫಿಕೇಟ್ ನೀಡಿದ್ದರೂ ಅದನ್ನು ಶಿಸ್ತು ಪ್ರಾಧಿಕಾರಿ ಪರಿಗಣಿಸಿರುವುದಿಲ್ಲ.
4) ತನ್ನ ಸುದೀರ್ಘ ಸೇವಾವಧಿಯನ್ನು ಸಹ ಪರಿಗಣಿಸದೇ ತನ್ನನ್ನು ಸೇವೆಯಿಂದ ವಜಾ ಮಾಡಿರುವುದು ನಾನು ಬೀದಿಗೆ ಬಂದಂತಾಗಿದೆ.

5) ತಾನು ತಮ್ಮ ಪತ್ನಿಯ ಮೂಲಕ ಎಂ.ಹೆಚ್.ಎಸ್. ಪಡೆಯಲು ಪಿಎಸ್‌ಐ ರವರನ್ನು ಸಂಪರ್ಕಿಸಿದ್ದು ಅವರು ಯಾವುದೇ ಎಂ.ಹೆಚ್.ಎಸ್. ಪುಸ್ತಕವನ್ನು ನೀಡದೇ ಅಸಹಕಾರ ತೋರಿ ತಮ್ಮ ವಿರುದ್ಧ ಇಲಾಖಾ ವಿಚಾರಣೆಗೆ ಕಾರಣರಾಗಿರುತ್ತಾರೆ. ನಂತರ ತಾನು ಪಿಎಸ್‌ಐ ರವರನ್ನು ದೂರವಾಣಿ ಮೂಲಕ ಸಂಪರ್ಕಿಸಿದ್ದು ರಜೆ ಬೇಕೆಂದು ಮನವಿ ಮಾಡಿ ರಜಾ ವರದಿ ಕಳುಹಿಸಿಕೊಟ್ಟರೂ ಅದನ್ನು ಸ್ವೀಕರಿಸಿದ ಬಗ್ಗೆ ಪೂರ್ವಾಗ್ರಹ ಪೀಡಿತರಾಗಿ ದೃಢೀಕರಿಸಿರುವುದಿಲ್ಲ. ತನಗೆ ಹೆಚ್ಚಿನ ಖಾಯಿಲೆಯಿಂದಾಗಿ ತಾನು ಕರ್ತವ್ಯಕ್ಕೆ ಗೈರು ಹಾಜರಾಗಿದ್ದು ತನ್ನದು ಅನಧಿಕೃತ ಗೈರುಹಾಜರಿ ಅಲ್ಲ ಅಭಿಯೋಗ ಸಾಕ್ಷಿ-1 ತನಗೆ ಮೈಯಲ್ಲಿ ಹುಷಾರಿಲ್ಲದೇ ಮಲಗಿದ್ದೆನೆಂದು ಇಲಾಖಾ ವಿಚಾರಣೆಯಲ್ಲಿ ಹೇಳಿಕೆ ನೀಡಿರುವುದು ತನ್ನ ಖಾಯಿಲೆಯ ಬಗ್ಗೆ ಖಚಿತಪಡಿಸುತ್ತದೆ.

6) ವಿಚಾರಣಾಧಿಕಾರಿಯವರು ಅಭಿಪ್ರಾಯವನ್ನು ಒಪ್ಪದೇ ತನಗೆ ಅತೀ ಹೆಚ್ಚಿನ ಶಿಕ್ಷೆ ವಿಧಿಸಿರುತ್ತಾರೆ.

ಮೇಲ್ಕಂಡ ವಾದಾಂಶಗಳನ್ನು, ಇಲಾಖಾ ವಿಚಾರಣಾ ದಾಖಲೆಗಳನ್ನು ಅರ್ಜಿದಾರರ ಸೇವಾ ಪುಸ್ತಕವನ್ನು ಪರಿಶೀಲಿಸಿದ ನಂತರ, ಅರ್ಜಿದಾರರು ಸುದೀರ್ಘ ಸೇವೆಯನ್ನು ಸಲ್ಲಿಸಿದ್ದರೂ ಸಹ, ಅವರ ಸೇವಾವಧಿಯಲ್ಲಿ ಅನೇಕ ಬಾರಿ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿ ಶಿಕ್ಷೆ ಪಡೆದಿರುವುದು ಕಂಡು ಬರುತ್ತದೆ. ಅನೇಕ ಬಾರಿ ಸಂಬಳರಹಿತ ರಜೆ (ಎಲ್‌ಡಬ್ಲ್ಯೂಎ) ವಾರ್ಷಿಕ ವೇತನ ಮುಂಬಡ್ತಿ ಮುಂದೂಡಿಕೆ, ಒಮ್ಮೆ ಸೇವೆಯಿಂದ ತೆಗೆದು ಹಾಕಿರುವುದು ಕಂಡು ಬರುತ್ತದೆ. ಆದರೆ, ಮೇಲ್ಮನವಿ ಪ್ರಾಧಿಕಾರಿ ಅವರನ್ನು ಸೇವೆಯಲ್ಲಿ ಪುನರ್ ಸ್ಥಾಪಿಸಿದ್ದು, ಇದರಿಂದಲಾದರೂ ಅರ್ಜಿದಾರರು ತಮ್ಮ ಗೈರುಹಾಜರಿ ಪ್ರವೃತ್ತಿಯನ್ನು ಬಿಟ್ಟಿರುವುದಿಲ್ಲ. ಏನಾದರೂ ಕಾಯಿಲೆಯ ನೆಪವೊಡ್ಡಿ ಕರ್ತವ್ಯಕ್ಕೆ ಗೈರುಹಾಜರಾಗಿರುವುದು ಕಂಡು ಬರುತ್ತದೆ.

ಅರ್ಜಿದಾರರು ಎಸಗಿರುವ ತಪ್ಪಿಗೆ ವಿಧಿಸಿರುವ ಶಿಕ್ಷೆ ಸೂಕ್ತವಾಗಿದ್ದರೂ ಅವರು ಸಲ್ಲಿಸಿರುವ ಸುದೀರ್ಘ ಸೇವೆಯನ್ನು ಗಮನಿಸಿ, ಮಾನವೀಯತೆಯ ದೃಷ್ಟಿಯಿಂದ ಅವರನ್ನು ಸೇವೆಯಿಂದ ವಜಾ ಮಾಡಿರುವ ಶಿಸ್ತು ಪ್ರಾಧಿಕಾರಿಯ ಆದೇಶವನ್ನು ಮಾರ್ಪಡಿಸಿ, ಕಡ್ಡಾಯ ನಿವೃತ್ತಿ ಶಿಕ್ಷೆಯನ್ನು ವಿಧಿಸಲು ನಿರ್ಧರಿಸಿ, ಕರ್ನಾಟಕ ಲೋಕ ಸೇವಾ ಆಯೋಗದ ಸಹಮತಿಯೊಂದಿಗೆ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 257 ಪೊಸಿಅ 2002, ಬೆಂಗಳೂರು, ದಿನಾಂಕ: 1ನೇ ಫೆಬ್ರವರಿ, 2005

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಾವಳಿ 1965 ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶಿಸ್ತು ಪ್ರಾಧಿಕಾರದ ಆದೇಶ ಸಂಖ್ಯೆ: ಡಿಇ:ಆರ್-6:13: ವಿಸಿಪಿ (ದ) 2000 ದಿನಾಂಕ: 22.01.2002ರ ಆದೇಶವನ್ನು ಮಾರ್ಪಡಿಸಿ ಶ್ರೀ ಅಶ್ವತ್ಥನಾರಾಯಣ ಮಾಜಿ ಹೆಚ್‌ಸಿ 408, ತಿಲಕ್‌ನಗರ ಪೊಲೀಸ್ ಠಾಣೆ, ಬೆಂಗಳೂರು ಇವರನ್ನು ಸೇವೆಯಿಂದ ವಜಾ ಮಾಡಿದ ಶಿಸ್ತು ಪ್ರಾಧಿಕಾರದ ಆದೇಶವನ್ನು ಮಾರ್ಪಡಿಸಿ ಅವರಿಗೆ "ಕಡ್ಡಾಯ ನಿವೃತ್ತಿ" ಶಿಕ್ಷೆಯನ್ನು ಸರ್ಕಾರವು ವಿಧಿಸಿದೆ. ಈ ಆದೇಶ ಶಿಸ್ತು ಪ್ರಾಧಿಕಾರ ಆದೇಶಿಸಿದ ದಿನಾಂಕದಿಂದಲೇ ಜಾರಿಗೆ ಬರುತ್ತದೆ.

ಈ ಆದೇಶವನ್ನು ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ: 106: ಸಿಎನ್‌ಎಸ್: 04 ದಿನಾಂಕ: 04.01.2005ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್. ರಂಗಮಣಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ಪಿ.ಆರ್.216

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ ಇಲಾಖೆಯಲ್ಲಿನ ಔಷಧಿ ಪರೀಕ್ಷಕರು (ಹೋಮಿಯೋಪತಿ) ಹುದ್ದೆಯ ನೇಮಕಾತಿ ವಿಧಾನಕ್ಕೆ ಸಂಬಂಧಿಸಿದಂತೆ ಕಾರ್ಯಕಾರಿ ಆದೇಶ ಹೊರಡಿಸುವ ಕುರಿತು.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 7 ಆರ್‌ಸಿಐ 81, ದಿನಾಂಕ: 20.12.1985.
2. ಸರ್ಕಾರದ ಆದೇಶ ಸಂಖ್ಯೆ: ಆಕುಕ 240 ಪಿಐಎಂ 98, ದಿನಾಂಕ: 02.12.1998.
3. ಸರ್ಕಾರದ ಅ. ಜ್ಞಾ. ಸಂಖ್ಯೆ: ಸಿಆಸುಇ 38 ಸೇನಿಇ 96, ದಿನಾಂಕ: 01.08.1996.

ಪ್ರಸ್ತಾವನೆ:

ಸರ್ಕಾರವು ಮೇಲೆ (1) ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಇಲಾಖೆಯಲ್ಲಿನ ವೃಂದ ಹುದ್ದೆಗಳಿಗೆ ಸಂಬಂಧಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿ ಆದೇಶ ಹೊರಡಿಸಲಾಗಿದೆ.

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆಯಲ್ಲಿ ಔಷಧ ನಿರೀಕ್ಷಕರು (ಹೋಮಿಯೋಪತಿ) ಒಂದು ಹುದ್ದೆಯನ್ನು ಹೊಸದಾಗಿ ಸೃಜಿಸಿದ್ದು ಸದರಿ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ನೇಮಕಾತಿ ನಿಯಮಗಳನ್ನು ನಿಗದಿಪಡಿಸಿರುವುದಿಲ್ಲ. ಈ ಹುದ್ದೆಯನ್ನು ಜರೂರಾಗಿ ಭರ್ತಿ ಮಾಡುವ ಬಗ್ಗೆ ಸರ್ಕಾರವು ಭರವಸೆ ಸಮಿತಿಗೆ ಈಗಾಗಲೇ ಉತ್ತರ ನೀಡಿದ್ದು ಜರೂರಾಗಿ ಹುದ್ದೆ ಭರ್ತಿ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿದೆ. ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರುವ ಪ್ರಕ್ರಿಯೆಗೆ ಸಾಕಷ್ಟು ಕಾಲಾವಕಾಶ ಬೇಕಾಗಿರುವುದರಿಂದ ಭರವಸೆ ಸಮಿತಿಗೆ ನೀಡಿರುವ ಉತ್ತರವನ್ನು ಅನುಷ್ಠಾನಗೊಳಿಸುವ ದೃಷ್ಟಿಯಿಂದ ಸರ್ಕಾರದ ಅಧಿಕೃತ ಜ್ಞಾಪನ ದಿನಾಂಕ: 01.08.1996ರಲ್ಲಿ ಕಲ್ಪಿಸಿರುವ ಅವಕಾಶದಂತೆ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆಯಲ್ಲಿ ಔಷದ ನಿರೀಕ್ಷಕರು (ಹೋಮಿಯೋಪತಿ) ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಕಾರ್ಯಕಾರಿ ಆದೇಶವನ್ನು ಹೊರಡಿಸಲು ತೀರ್ಮಾನಿಸಲಾಗಿದೆ.

Category of Post	Method of Recruitment
Drug Inspector Rs.6000-11200	By posting of an officer from the cadre of Physician Grade-II (Homeopathy) if no suitable person is available then by Deputation of a suitable officer from the cadre of Drugs Inspector in the Drugs Control Department.

ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 400 ಪಿಐಎಂ 2004, ಬೆಂಗಳೂರು, ದಿನಾಂಕ: 22ನೇ ಜನವರಿ, 2005

ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆಯಲ್ಲಿ ವೇತನ ಶ್ರೇಣಿ ರೂ.6000-11200ರ ಔಷಧಿ ನಿರೀಕ್ಷಕರು (ಹೋಮಿಯೋಪತಿ) ಹುದ್ದೆಗೆ ಮೇಲೆ (3)ರಲ್ಲಿ ಓದಲಾದ ಅಧಿಕೃತ ಜ್ಞಾಪನಾ ಹಾಗೂ ಅದರಲ್ಲಿನ ಷರತ್ತು ಮತ್ತು ನಿಬಂಧನೆಗೊಳಪಟ್ಟು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವಂತೆ ನೇಮಕಾತಿ ವಿಧಾನವನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಗದಿಪಡಿಸಲಾಗಿದೆ.

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಆಸುಇ 87: ಸೇನಿಡಿ: 2004, ದಿನಾಂಕ: 13.12.2004ರ ಸಹಮತಿಯೊಂದಿಗೆ ಹೊರಡಿಸಲಾಗಿದೆ. ಈ ಆದೇಶವು ಇದನ್ನು ಹೊರಡಿಸಿದ ದಿನಾಂಕದಿಂದ ಆರು ತಿಂಗಳ ಕಾಲ ಮಾತ್ರ ಜಾರಿಯಲ್ಲಿದ್ದು ತದನಂತರ ತಂತಾನೆ ರದ್ದಾಗುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಚೋಮಾನಾಯಕ್ ಜಿ.
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 400 ಪಿಐಎಂ 2004, ದಿನಾಂಕ: 22ನೇ ಜನವರಿ, 2005ಕ್ಕೆ ಅನುಬಂಧ

Category of Post	Method of Recruitment
Drug Inspector Rs.6000-11200	By posting of an officer from the cadre of Physician Grade-II (Homeopathy) if no suitable person is available then by Deputation of a suitable officer from the cadre of Drugs Inspector in the Drugs Control Department.

ಚೋಮಾನಾಯಕ್ ಜಿ.
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪಿ.ಆರ್.217

ಕಂದಾಯ ಸಚಿವಾಲಯ

ವಿಷಯ: ಶ್ರೀಮತಿ ಕಮಲಮ್ಮ ಸಮೂಹ ಎ ಅಧಿಕಾರಿಗಳು ಹಾಗೂ ಅಂದಿನ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ದೊಡ್ಡಬಳ್ಳಾಪುರ ತಾಲ್ಲೂಕು ಇಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಎಸಗಿದ ಆರೋಪಗಳ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳುವ ವಿಚಾರ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂ.ಕಂಇ 240 ಮುಸೇವಿ 2003, ದಿ:22/10/2003
2. ಸರ್ಕಾರಿ ಆದೇಶ ಸಂ.ಕಂಇ 266 ಮುಸೇವಿ 2003 ದಿ:21/01/2004
3. ಧಾರ್ಮಿಕ ದತ್ತಿ ಆಯುಕ್ತರ ಪತ್ರ ಸಂ.ಸಿಬ್ಬಂದಿ/3/ಸಿಆರ್/12/2003–2004, ದಿನಾಂಕ:14/06/2004
4. ತಿಳುವಳಿಕೆ ಪತ್ರ ಸಂ.ಕಂಇ 240 ಮುಸೇವಿ 2003 ದಿ:28/10/2004
5. ಶ್ರೀಮತಿ ಕಮಲಮ್ಮ ಸಮೂಹ ಎ ಅಧಿಕಾರಿ ರವರ ದಿ:24/11/2004ರಂದು ನೀಡಿದ ಲಿಖಿತ ಹೇಳಿಕೆ.

ಪ್ರಸ್ತಾವನೆ:

ಶ್ರೀಮತಿ ಕಮಲಮ್ಮ ಸಮೂಹ ಎ ಅಧಿಕಾರಿಗಳು ರವರು ಘಾಟಿ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ ಇಲ್ಲಿ ದಿ:28/07/2002 ರಿಂದ 19/06/2003ರವರೆಗೆ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಧಾರ್ಮಿಕ ದತ್ತಿ ಆಯುಕ್ತರ ಕೇಂದ್ರ ಕಛೇರಿಯ ಲೆಕ್ಕಾಧೀಕ್ಷಕರು ಹಾಗೂ ಸಿಬ್ಬಂದಿಯವರು ದಿನಾಂಕ:09/04/2003ರಂದು ದೇವಸ್ಥಾನಕ್ಕೆ ಭೇಟಿ ನೀಡಿ ಲೆಕ್ಕ ತಪಾಸಣೆ ನಡೆಸಿ, ನೀಡಿದ ವರದಿಯನ್ವಯ ಸದರಿಯವರ ಮೇಲೆ ಹಣ ದುರುಪಯೋಗ ಹಾಗೂ ಕರ್ತವ್ಯ ಲೋಪದ ಆರೋಪದ ಬಗ್ಗೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಕ್ರಮ ಸಂಖ್ಯೆ:(1)ರ ದಿ:22/10/2003ರ ಆದೇಶದಲ್ಲಿ ಸದರಿಯವರನ್ನು ಅಮಾನತ್ತಿನಲ್ಲಿರಿಸಲಾಗಿತ್ತು. ನಂತರ ಮೇಲೆ ಓದಲಾದ ಕ್ರಮ ಸಂಖ್ಯೆ:(2)ರ ಆದೇಶದಲ್ಲಿ ಅವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ಸದರಿಯವರ ಅಮಾನತ್ತನ್ನು ತೆರವುಗೊಳಿಸಲಾಗಿತ್ತು. ಶ್ರೀಮತಿ ಕಮಲಮ್ಮ ಸಮೂಹ ಎ ಅಧಿಕಾರಿಗಳು ಘಾಟಿ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದಲ್ಲಿ ದಿ:28/07/2002 ರಿಂದ 19/06/2003ರವರಗೆ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಈ ಕೆಳಕಂಡ 2 ಆರೋಪಗಳಿಗೆ ಗುರಿಯಾಗಿದ್ದರು:–

ಆರೋಪ 1: ದೇವಾಲಯದಲ್ಲಿ ಆಯಾ ದಿನಗಳಲ್ಲಿ ಬಂದಿರುವ ಸ್ವೀಕೃತಿ ಹಣವನ್ನು ಬ್ಯಾಂಕ್ ಖಾತೆಗೆ ಆಯಾ ದಿನ ಅಥವಾ ಮುಂದಿನ ಬ್ಯಾಂಕ್ ಕೆಲಸದ ದಿನದಲ್ಲಿ ದೇವಾಲಯದ ಬ್ಯಾಂಕ್ ಖಾತೆಗೆ ಜಮಾ ಮಾಡದೇ ಹೆಚ್ಚಿನ ಮೊತ್ತವನ್ನು ಅಂತಿಮ ಶಿಲ್ಕ್ಆಗಿ ಉಳಿಸಿಕೊಂಡು ಹಂಗಾಮಿಯಾಗಿ ದುರುಪಯೋಗವಾಗಲು ಕಾರಣರಾಗಿರುವುದು.

ಆರೋಪ 2: ದೇವಾಲಯಕ್ಕೆ ಜಮೆ ಆದ ರೂ.32,184–00ನ್ನು ತಾತ್ಕಾಲಿಕವಾಗಿ ದುರುಪಯೋಗವಾಗಲು ಸಿಬ್ಬಂದಿಗೆ ಅವಕಾಶ ಮಾಡಿ ಕೊಟ್ಟು ಕರ್ತವ್ಯ ಲೋಪ ಎಸಗಿರುವುದು.

ಮೇಲೆ ಓದಲಾದ ಕ್ರಮ ಸಂಖ್ಯೆ:(3)ರ ದಿ:14/06/2004ರ ಪತ್ರದಲ್ಲಿ ಸದರಿಯವರ ಮೇಲಿನ ಆರೋಪಗಳ ಬಗ್ಗೆ ಆರೋಪಣಾ ಪಟ್ಟಿಯನ್ನು ಧಾರ್ಮಿಕ ದತ್ತಿ ಆಯುಕ್ತರು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸರ್ಕಾರವು ಮೇಲೆ ಓದಲಾದ ಕ್ರಮ ಸಂಖ್ಯೆ:(4)ರಂತೆ ತಿಳುವಳಿಕೆ ಪತ್ರದಲ್ಲಿ ಆರೋಪಣಾ ಪಟ್ಟಿಯನ್ನು ಶ್ರೀಮತಿ ಕಮಲಮ್ಮ ರವರಿಗೆ ಕಳುಹಿಸಿ, ಅವರ ಸಮಜಾಯಿಷಿ ಹೇಳಿಕೆಯನ್ನು ಸಲ್ಲಿಸಲು ಕೋರಲಾಗಿತ್ತು. ಈ ಆರೋಪಣಾ ಪಟ್ಟಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ:(5)ರಲ್ಲಿ ಶ್ರೀಮತಿ ಕಮಲಮ್ಮ ರವರು ತಮ್ಮ ಸಮಜಾಯಿಷಿ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಘಾಟಿ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಾಲಯಕ್ಕೆ ಪ್ರಸ್ತುತ ಇರುವಂತೆ ವಾಹನ ಸೌಲಭ್ಯ ಆ ಸಮಯದಲ್ಲಿ ಇರಲಿಲ್ಲವೆಂದು ದೇವಸ್ಥಾನವು ದೊಡ್ಡಬಳ್ಳಾಪುರ ಟೌನ್‌ನಿಂದ 17 ಕಿಲೋ ಮೀಟರ್ ದೂರವಿದ್ದು, ಒಂದು ವಾರಕ್ಕೆ ಒಂದು ಸಾರಿ ದೇವಾಲಯದ ಸೇವಾರ್ಥ ಹಣವನ್ನು ಬ್ಯಾಂಕಿಗೆ ಜಮಾ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ದೇವಾಲಯದ ಹಣ ರೂ.32,184–00 ಬ್ಯಾಂಕಿಗೆ ಕಡಿಮೆ ಜಮೆ ಆಗಲು ಸಂಬಂಧಿಸಿದ ಸೇವಾ ಗುಮಾಸ್ತರಾದ ಶ್ರೀ ಎಸ್. ಆರ್. ರಾಘವೇಂದ್ರ ಮತ್ತು ದಿನಸಿ ಗುಮಾಸ್ತರಾದ ಶ್ರೀ ಎಸ್. ನಾಗರಾಜ್ ಎಂಬುವವರು ದೇವಾಲಯದ ದಿನವಹಿ ಪುಸ್ತಕದಲ್ಲಿ ವಸೂಲಾತಿ

ಮೊತ್ತವನ್ನು ಕೂಡುವುದರಲ್ಲಿ ವ್ಯತ್ಯಾಸ ಮಾಡಿದ್ದರಿಂದ ಹಾಗೂ ಭಕ್ತಾದಿಗಳು ಒಬ್ಬರು ನೀಡಿದ್ದ ಚೆಕ್ಕನ್ನು ದಿ:24/01/2003ರಲ್ಲಿ ದೇವಾಲಯದ ಖಾತೆಗೆ ಜಮೆ ಮಾಡಿದ್ದು, ಈ ಚೆಕ್ ದಿ:03/02/2003ರಲ್ಲಿ ಕ್ಲಿಯರೆನ್ಸ್ ಆಗಿರುವುದು ಕಾರಣವಾಗಿರುತ್ತದೆ ಎಂದೂ ಸೇವಾ ಗುಮಾಸ್ತರು ಹಾಗೂ ದಿನಸಿ ಗುಮಾಸ್ತರು ಸೇವಾರ್ಥ ಮತ್ತು ದಿನಸಿ ವಿಭಾಗದಲ್ಲಿ ಆಯಾ ದಿನದಲ್ಲಿ ವಸೂಲಾದ ಹಣವನ್ನು ಬ್ಯಾಂಕಿಗೆ ಜಮಾ ಮಾಡುವಾಗ ಕೂಡುವಿಕೆಯಲ್ಲಿ ವ್ಯತ್ಯಾಸ ಮಾಡಿ ಕಡಿಮೆ ಹಣ ಜಮೆ ಮಾಡಿದ ಹಣವನ್ನು ಸಂಬಂಧಿಸಿದ ಗುಮಾಸ್ತರಿಂದ ವಸೂಲು ಮಾಡಿ ದೇವಾಲಯದ ನಿಧಿಗೆ ಜಮಾ ಮಾಡಿರುವುದಾಗಿ ದೇವಾಲಯಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟುಮಾಡಿಲ್ಲವೆಂದು ಈ ಎಲ್ಲಾ ಕಾರಣಗಳಿಂದಾಗಿ ತಮ್ಮ ಮೇಲಿನ ಆರೋಪಗಳಿಂದ ಮುಕ್ತರನ್ನಾಗಿಸಿ, ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

ಶ್ರೀಮತಿ ಕಮಲಮ್ಮ ರವರು ನೀಡಿರುವ ಲಿಖಿತ ಸಮಜಾಯಿಷಿ ಹೇಳಿಕೆಯನ್ನು ಸರ್ಕಾರವು ಪರಿಶೀಲಿಸಿ, ದೇವಾಲಯದ ಹಣವನ್ನು ವಿಳಂಬ ಮಾಡಿ ಬ್ಯಾಂಕ್‌ಗೆ ಜಮಾ ಮಾಡುವಲ್ಲಿ ಕೆಲವೇ ದಿನಗಳ ವಿಳಂಬವಾಗಿರುವುದು ಹಾಗೂ ದೇವಸ್ಥಾನದ ಗುಮಾಸ್ತರುಗಳು ದಿನಂಪ್ರತಿ ವಸೂಲಾದ ಮೊತ್ತವನ್ನು ಕೂಡುವಾಗ ಕಡಿಮೆ ಮೊತ್ತ ನಮೂದಿಸಿ, ಬ್ಯಾಂಕಿಗೆ ಕಡಿಮೆ ಮೊತ್ತ ಜಮಾ ಮಾಡಿರುವುದನ್ನು, ಆನಂತರ ವಸೂಲು ಮಾಡಿ ದೇವಾಲಯದ ನಿಧಿಗೆ ಜಮೆ ಮಾಡಿರುವುದರಿಂದ ದೇವಾಲಯಕ್ಕೆ ನಷ್ಟ ಉಂಟುಮಾಡಿಲ್ಲದಿರುವುದನ್ನು ಒಪ್ಪಿ, ಸದರಿಯವರ ಮೇಲೆ ಇಲಾಖಾ ವಿಚಾರಣೆ ನಡೆಸುವುದನ್ನು ಕೈಬಿಡಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 240 ಮುಸೇವಿ 2003, ಬೆಂಗಳೂರು, ದಿನಾಂಕ: 3ನೇ ಫೆಬ್ರವರಿ, 2005

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಶ್ರೀಮತಿ ಕಮಲಮ್ಮ ಸಮೂಹ ಎ ಅಧಿಕಾರಿ ಹಾಗೂ ಅಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು ಘಾಟಿ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ದೊಡ್ಡಬಳ್ಳಾಪುರ ರವರ ಮೇಲೆ ತಿಳುವಳಿಕೆ ಪತ್ರ ಸಂ.ಕಂಇ 240 ಮುಸೇವಿ 2003 ದಿ:28/10/2004ರಲ್ಲಿ ಹೊರಿಸಲಾದ ಆರೋಪಗಳಿಂದ ಮುಕ್ತಗೊಳಿಸಿ, ಅವರ ವಿರುದ್ಧ ಪ್ರಾರಂಭಿಸಲು ಉದ್ದೇಶಿಸಿರುವ ಇಲಾಖಾ ವಿಚಾರಣೆಯನ್ನು ಕೈಬಿಟ್ಟು ಆದೇಶಿಸಿದೆ. ಸದರಿಯವರು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಕರ್ನಾಟಕ ಸಿವಿಲ್ ಸೇವಾ ನಿಯಮಗಳು, ನಿಯಮ 100ರ ಪ್ರಕಾರ ಎಲ್ಲಾ ಉದ್ದೇಶಗಳಿಗಾಗಿ ಕರ್ತವ್ಯದ ಅವಧಿಯೆಂದು ಪರಿಗಣಿಸಿ, ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ರಮೇಶ್ ಕೆ. ಜಾಗೀರ್‌ದಾರ್
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಮುಜರಾಯಿ).

ಪಿ.ಆರ್. 218

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವಾಲಯ

ವಿಷಯ: 2004-2005 ನೇ ಸಾಲಿಗೆ ಎಸ್‌ಜಿಎಸ್‌ವೈ ಎರಡನೇ ಕಂತಿನ ರಾಜ್ಯದ ಪಾಲಿನ ಹಣ ಚಾಮರಾಜನಗರ, ದಾವಣಗೆರೆ, ಕೊಪ್ಪಳ ಮತ್ತು ಉಡುಪಿ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡುವ (ಶೇ.25ರಷ್ಟು ಹಂಚಿಕೆ) ಬಗ್ಗೆ.

ಉಲ್ಲೇಖ:
1. ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ 17013: 10: 2004 ಎಸ್‌ಜಿಎಸ್‌ವೈ-I (13) ದಿನಾಂಕ 22-04-2004 ಮತ್ತು (58) ದಿನಾಂಕ 16-11-2004 ಮತ್ತು (80) ದಿನಾಂಕ 16-12-2004.
2. ಸಂಖ್ಯೆ ಆಇ 1091 ವೆಚ್ಚ 6: 2004 ದಿನಾಂಕ 23-08-2004.
3. ಸರ್ಕಾರದ ಆದೇಶದ ಸಮಸಂಖ್ಯೆ ದಿನಾಂಕ 17-09-2004, 29-12-2004 ಮತ್ತು 10-01-2005
4. ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ:17013:10:2004 ಎಸ್.ಜಿ.ಎಸ್.ವೈ I(115) ದಿನಾಂಕ:06-01-2005.

ಪ್ರಸ್ತಾವನೆ:

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಉಲ್ಲೇಖಿತ ಪತ್ರ (1) ಮತ್ತು (3) ರಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್ ಜಿ ಎಸ್ ವೈ) ಒಂದನೇ ಕಂತಿನ ಹಣ ರೂ.20,03,38,000-00 ಮತ್ತು ರೂ. 6,67,79,000 ಗಳನ್ನು ಅನುಕ್ರಮವಾಗಿ ಬಿಡುಗಡೆ ಮಾಡಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಗುಲ್ಬರ್ಗಾ ಜಿಲ್ಲೆಗೆ ಎರಡನೇ ಕಂತಿನ ಕೇಂದ್ರ ಪಾಲಿನ ಹಣ ರೂ.3,45,50,000 ಮತ್ತು 1,15,17,000 ಗಳನ್ನು ಬಿಡುಗಡೆ ಮಾಡಲಾಗಿದೆ. (ಉಲ್ಲೇಖ (1) ಮತ್ತು (3)ರಂತೆ.) ಈಗ ಕೇಂದ್ರ ಸರ್ಕಾರ ಉಲ್ಲೇಖ (4) ರಂತೆ, ಚಾಮರಾಜನಗರ, ದಾವಣಗೆರೆ, ಕೊಪ್ಪಳ ಮತ್ತು ಉಡುಪಿ ಜಿಲ್ಲೆಗಳಿಗೆ ರೂ. 2,78,88,000 ಗಳನ್ನು ಬಿಡುಗಡೆ ಮಾಡಿದೆ. ಇದಕ್ಕನುಗುಣವಾಗಿ ರಾಜ್ಯದ ಪಾಲಿನ ಹಣ ರೂ.92,96,000 ಗಳನ್ನು ಬಿಡುಗಡೆ ಮಾಡಬೇಕಾಗಿದೆ. ಆದ್ದರಿಂದ ಈ ಆದೇಶ :

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 18 ಸ್ವಜಯೋ 2004, ಬೆಂಗಳೂರು, ದಿನಾಂಕ: 27ನೇ ಜನವರಿ, 2005

ರಾಜ್ಯ ಸರ್ಕಾರವು ಕೆಳಕಂಡ ಮೂರು ಜಿಲ್ಲಾ ಪಂಚಾಯತ್‌ಗಳಿಗೆ ಎರಡನೇ ಕಂತಿನ ಹಣ ರೂ.92,96,000-00ಗಳನ್ನು (ರೂ. ತೊಂಬತ್ತೆರಡು ಲಕ್ಷದ ತೊಂಬತ್ತಾರು ಸಾವಿರ ಮಾತ್ರ) ಕೆಳಕಂಡ ಷರತ್ತಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಕ್ರ. ಸಂ.	ಜಿ.ಪಂ.ಹೆಸರು	ಜಿ.ಪಂ.ಕೋಡ್	ಡಿ.ಡಿ.ಒ.ಕೋಡ್	ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ 2ನೇ ಕಂತು	ರಾಜ್ಯಸರ್ಕಾರ ಬಿಡುಗಡೆ ಮಾಡುತ್ತಿರುವ 2ನೇ ಕಂತು
1.	ಚಾಮರಾಜನಗರ	456	1000ZZ0001	98,07,000	32,69,000
2.	ದಾವಣಗೆರೆ	451	1700ZZ0002	46,49,000	15,50,000
3.	ಕೊಪ್ಪಳ	466	1500ZZ0010	99,32,000	33,10,000
4.	ಉಡುಪಿ	457	2000ZZ0001	35,00,000	11,67,000
	ಒಟ್ಟು			**2,78,88,000**	**92,96,000**

1999ನೇ ಮೇ ತಿಂಗಳ ಎಸ್‌ಜಿಎಸ್‌ವೈ ಕೈಪಿಡಿಯ ಮಾರ್ಗಸೂಚಿಯಂತೆ ಹಣವನ್ನು ಉಪಯೋಗಿಸುವುದು. ಅನುಷ್ಠಾನ ಏಜೆನ್ಸಿ ಗಳಿಗೆ ಸರ್ಕಾರಿ ಆದೇಶ ತಲುಪಿದ 15 ದಿವಸದೊಳಗೆ ಬಿಡುಗಡೆ ಮಾಡತಕ್ಕದ್ದು.

ನಿಧಿಯ ಮಾದರಿ ಕೇಂದ್ರ ಮತ್ತು ರಾಜ್ಯಗಳ ನಡುವೆ 75:25ರ ಅನುಪಾತದಲ್ಲಿ ನೀಡಲಾಗುವುದು.

ಯೋಜನೆಯ ವೆಚ್ಚವನ್ನು ಪ್ರಧಾನ ಲೆಕ್ಕ ಶೀರ್ಷಿಕೆ 2501 ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು 01 ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು -196- ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯ-1- ಜಿಲ್ಲಾ ಪಂಚಾಯತ್‌ಗಳು-07- ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ - ಯೋಜನೆ 2004-2005 (2501-01-196-1-07) ರಡಿ ಭರಿಸತಕ್ಕದ್ದು.

ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಾಮರಾಜನಗರ, ದಾವಣಗೆರೆ, ಕೊಪ್ಪಳ ಮತ್ತು ಉಡುಪಿ ಇವರು ಹಣ ತೆಗೆಯಲು ಕಾನೂನು ರೀತ್ಯ ಅಧಿಕಾರ ನೀಡಲಾಗಿದೆ.

2004-2005 ನೇ ಸಾಲಿನ ಅನುಮೋದಿತ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಂಬಂಧಿಸಿದ ಉಪ ಕಾರ್ಯದರ್ಶಿ (ಅಭಿವೃದ್ಧಿ) ಇವರು ಸರ್ಕಾರಕ್ಕೆ ಸಲ್ಲಿಸುವುದು.

ಆರ್ಥಿಕ ಮತ್ತು ಭೌತಿಕ ಸಾಧನೆಯ ಆಯಾ ಮಾಹೆಯ ಪ್ರಗತಿ ವರದಿಯನ್ನು ಮುಂದಿನ ತಿಂಗಳ 10 ನೇ ತಾರೀಖಿನೊಳಗೆ ನಿರ್ದೇಶಕರು (ಸ್ವಉಕಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಾಮರಾಜನಗರ, ದಾವಣಗೆರೆ, ಕೊಪ್ಪಳ ಮತ್ತು ಉಡುಪಿ ಇವರು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಆಡಿಟ್ ಮಾಡಿದ ಲೆಕ್ಕಗಳನ್ನು ನಿರ್ದೇಶಕರು {ಸ್ವಉಕಾ} ಹಾಗೂ ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸಹಮತಿ ಸಂಖ್ಯೆ : ಗ್ರಾಅಪ 19 ಪಿಬಿಎಸ್ 05 ದಿನಾಂಕ 25-01-2005 ಹಾಗೂ ಪತ್ರ ಸ್ವೀಕೃತಿ ಮತ್ತು ರವಾನೆ ಶಾಖೆಯ ಯೂನಿಕ್ ನಂ.10/05 ದಿನಾಂಕ 27-01-2005 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ಎಮ್. ಶಿವಪ್ರಕಾಶ್
ನಿರ್ದೇಶಕರು (ಸ್ವಉಕಾ) ಹಾಗೂ
ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.

ಪಿ.ಆರ್.219

ಜಲಸಂಪನ್ಮೂಲ ಸಚಿವಾಲಯ

ವಿಷಯ : ಚಿಂಚೋಳಿ ತಾಲ್ಲೂಕಿನ ಕೋಟಗಾ ಗ್ರಾಮ ಕೆಳದಂಡೆ ಮುಲ್ಲಾಮಾರಿ ಯೋಜನೆಯು ನೀರಿನಲ್ಲಿ ಮುಳುಗಡೆಯಾಗುವುದರಿಂದ ಪುನರ್ವಸತಿ ಕಲ್ಪಿಸುವ ಬಗ್ಗೆ.

ಓದಲಾಗಿದೆ :
1. ಮುಖ್ಯ ಇಂಜಿನಿಯರ್, ನೀರಾವರಿ ಯೋಜನಾ ವಲಯ, ಗುಲ್ಬರ್ಗಾರವರ ಪತ್ರ ಸಂಖ್ಯೆ: ನೀಯೋವ/ ಮುಇಗು/ ಟಿಎ1/ ಸಿಂ/7/ ಮುಕೆಯೋ/97-98/6405, ದಿನಾಂಕ: 07.03.98.
2. ಮುಖ್ಯ ಇಂಜಿನಿಯರ್, ನೀರಾವರಿ ಯೋಜನಾ ವಲಯ, ಗುಲ್ಬರ್ಗಾರವರ ಪತ್ರ ಸಂಖ್ಯೆ: ನೀಯೋವ/ ಮುಇಗು/ ಕೆಮುಯೋ/ ಕೋಟಗಾ/ ಟಿಎ1/ ಎಇ7/ 2002-03/ 3681, ದಿನಾಂಕ: 05.12.2002.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಪತ್ರದಲ್ಲಿ ಮುಖ್ಯ ಇಂಜಿನಿಯರ್ ರವರು ಮುಲ್ಲಾಮಾರಿ ಕೆಳದಂಡೆ ಯೋಜನೆ ಮುಳುಗಡೆಯಲ್ಲಿ ಬರುವ ಕೋಟಗಾ ಗ್ರಾಮದ ಸರ್ವೆ ಮಾಡಿ ಆದರಂತೆ ಸಲ್ಲಿಸಿರುವ ವರದಿಯಂತೆ ವಿವರಗಳು ಈ ಕೆಳಗಿನಂತಿದೆ.

ಗ್ರಾಮದ ಅತೀ ಕೆಳಮಟ್ಟದ ಮನೆಯ ಮಟ್ಟ 493.87ಮೀ ಮತ್ತು ಜಲಾಶಯದ ಎಫ್.ಆರ್.ಎಲ್. ಮಟ್ಟಕ್ಕಿಂತ 491.00ಮೀ ರಿಂದ 2.87ಮೀ ಎತ್ತರದಲ್ಲಿದೆ.

ಎಫ್.ಆರ್.ಎಲ್. 491.00 ಮಟ್ಟ ರೇಖೆಯಿಂದ 12 ಮೀ ದೂರದಲ್ಲಿದೆ.

ಎಫ್.ಆರ್.ಎಲ್. 491.00ಮೀ ದವರೆಗೆ ಗ್ರಾಮದ ಯಾವುದೇ ಮನೆಗಳು ಮುಳುಗಡೆ ಆಗುವುದಿಲ್ಲ.

ಎಫ್.ಆರ್.ಎಲ್. 491.00 ಮೀ ದಿಂದ 100 ಮೀ ದೂರದವರೆಗೆ 162 ಮನೆಗಳು ಬರುತ್ತವೆ.

ಹಿನ್ನೀರಿನ ಮಟ್ಟ 494.85 ಮೀ ಮತ್ತು ಅಲೆಗಳ ಎತ್ತರ (0.75 ಮೀ) ವನ್ನು ಗಣನೆಗೆ ತೆಗೆದುಕೊಂಡಾಗ 64 ಮನೆಗಳು ಮುಳುಗಡೆಯಾಗುತ್ತವೆ.

ಹಿನ್ನೀರಿನ ಮತ್ತು ಅಲೆಗಳ ಪರಿಣಾಮದಿಂದ ಮುಳುಗಡೆಯ ಮಟ್ಟ 495.60 ಮೀ ಇರುವುದರಿಂದ ಮತ್ತು ನೀರು ಗ್ರಾಮದ ಸುತ್ತಲೂ ಸುತ್ತುವರಿಯುವುದರಿಂದ ಗ್ರಾಮದ ಜನರು ತಮಗೆ ಸಾರಿಗೆ ದೃಷ್ಟಿಯಿಂದ ಅನಾನುಕೂಲ ಉಂಟಾಗುವುದಲ್ಲದೆ, ಜಲಚರ ಪ್ರಾಣಿಗಳಿಂದ ತೊಂದರೆ ಆಗುತ್ತದೆ. ಮತ್ತು ಮಲೇರಿಯಾ ಮುಂತಾದ ರೋಗ ರುಜಿನಗಳಿಗೆ ಎಡೆಮಾಡಿ ಕೊಡುವ ಸಂಭವವಿರುವುದರಿಂದ ಸಂಪೂರ್ಣ ಗ್ರಾಮವನ್ನು ಸ್ಥಳಾಂತರಿಸಲು ಒತ್ತಾಯಿಸುತ್ತಿದ್ದಾರೆ.

2. ಮುಂದುವರಿಸುತ್ತ ಮುಖ್ಯ ಅಭಿಯಂತರರು, ಆಲಮಟ್ಟಿ ಅಣೆಕಟ್ಟಿನಿಂದುಂಟಾಗುವ ಹಿನ್ನೀರಿನ ಪರಿಣಾಮವನ್ನು ಗಣನೆಗೆ ತೆಗೆದುಕೊಂಡು ಆ ಯೋಜನೆಯಲ್ಲಿ ಮುಳುಗಡೆಯಾಗುವ ಹಳ್ಳಿಗಳನ್ನು ನಿರ್ಧರಿಸಿದಂತೆ ಕೋಟಗಾ ಗ್ರಾಮದ ಮುಳುಗಡೆಯನ್ನು ನಿರ್ಧರಿಸಲು ಆಲಮಟ್ಟಿ ಅಣೆಕಟ್ಟೆಯಿಂದುಂಟಾಗುವ, ಹಿನ್ನೀರಿನ ಮಟ್ಟವನ್ನು ಕಂಡು ಹಿಡಿಯಲು ಅನುಸರಿಸಿದ ವಿಧಾನದಂತೆ ಹಿನ್ನೀರಿನ ಮಟ್ಟವನ್ನು ಕಂಡು ಹಿಡಿದಾಗ ಈ ಮಟ್ಟವು 496.325 ಮೀ ಇರುತ್ತದೆ. ಈ ಹಿನ್ನೀರಿನ ಮಟ್ಟದಲ್ಲಿ 79 ಮನೆಗಳು ಮುಳುಗಡೆಯಾಗುತ್ತದೆಂದು ವರದಿ ಮಾಡಿರುತ್ತಾರೆ.

3. ಚಿಂಚೋಳಿ ತಾಲ್ಲೂಕಿನ ಕೋಟಗಾ ಗ್ರಾಮದ ಪುನರ್ವಸತಿ ಬಗ್ಗೆ ದಿನಾಂಕ: 27.10.98ರಂದು ನಡೆದ ಪುನರ್ವಸತಿ ಸಲಹಾ ಸಮಿತಿ ಸಭೆಯಲ್ಲಿ ಕೋಟಗಾ ಗ್ರಾಮವನ್ನು ಸಂಪೂರ್ಣವಾಗಿ ಸ್ಥಳಾಂತರಿಸಿ ಪುನರ್ವಸತಿ ಕೇಂದ್ರವನ್ನು ನಿರ್ಮಿಸಲು ನಿರ್ಧರಿಸಲಾಗಿರುತ್ತದೆಂದು ಮುಖ್ಯ ಇಂಜಿನಿಯರ್ ರವರು ತಮ್ಮ ದಿನಾಂಕ: 16.02.99ರ ಪತ್ರದಲ್ಲಿ ತಿಳಿಸಿರುತ್ತಾರೆ, ಸದರಿ ಗ್ರಾಮವನ್ನು ಸಂಪೂರ್ಣವಾಗಿ ಪುನರ್ವಸತಿಗೊಳಿಸಲು

ರೂ. 375 ಲಕ್ಷಗಳು ಬೇಕಾಗುತ್ತದೆಂದು, ಇದನ್ನು ಕೆಳದಂಡೆ ಮುಲ್ಲಾಮಾರಿ ಯೋಜನೆಗೆ ರೂ.100.00 ಕೋಟಿಗಳಿಗೆ ಸಿದ್ಧ ಪಡಿಸಿರುವ ಪರಿಷ್ಕೃತ ಅಂದಾಜಿನಲ್ಲಿ ಭರಿಸಲಾಗುವುದೆಂದು ತಿಳಿಸಿರುತ್ತಾರೆ.

4. ಆಡಳಿತಾತ್ಮಕ ಅನುಮೋದನೆಯಾಗಿರುವ ಮೂಲ ಯೋಜನೆಯ ಅಂದಾಜು ಪಟ್ಟಿಯಲ್ಲಿ ಸದರಿ ಗ್ರಾಮದ ಸ್ಥಳಾಂತರಣೆಗೆ ಅವಕಾಶ ಈ ಹಿಂದೆ ಮಾಡಿಕೊಂಡಿರುವುದಿಲ್ಲ. 1973-74ರಲ್ಲಿ ತಯಾರಿಸಲಾದ ಮೂಲ ಅಂದಾಜು ಪಟ್ಟಿಯಲ್ಲಿ ಅವಕಾಶ ಮಾಡದೇ ಇರಲು ಅಂದಿನ ಮಾರ್ಗಸೂಚಿಯನುಸಾರ ಅವಕಾಶವಿರಲಿಲ್ಲವೆಂದು ಕೋಟಗಾ ಗ್ರಾಮದ ಈ ಅತೀ ಕೆಳಮಟ್ಟದ ಮನೆಯು ಎಫ್.ಆರ್.ಎಲ್. 491.00ಮೀ ನಿಂದ 2.87ಮೀ ಎತ್ತರದಲ್ಲಿ ಇರುತ್ತದೆಂದು, ಸ್ಥಳಾಂತರಣೆಗೆ ಪರಿಗಣಿಸಿಲ್ಲವೆಂದು ಮುಖ್ಯ ಇಂಜಿನಿಯರ್ ತಿಳಿಸಿರುತ್ತಾರೆ. ಅನಂತರ ಸರ್ಕಾರದ ದಿನಾಂಕ: 27.07.1997ರಂದು ಹೊರಡಿಸಿರುವ ಸುತ್ತೋಲೆಯ ಪ್ರಕಾರ ಗ್ರಾಮವು ಸ್ಥಳಾಂತರಿಸಲು ಹಿನ್ನೀರಿನ ಮಟ್ಟ ಮತ್ತು ಅಲೆಗಳ ಎತ್ತರವನ್ನು ಗಣನೆಗೆ ತೆಗೆದುಕೊಳ್ಳಲು ನೀಡಿರುವ ಸೂಚನೆಯನುಸಾರ ಹಾಗೂ ಆಲಮಟ್ಟಿ ಅಣೆಕಟ್ಟಿನಲ್ಲಿ ಗ್ರಾಮ ಮುಳುಗಡೆಯನ್ನು ಅನುಸರಿಸಲಾದ ವಿಧಾನದ ಪ್ರಕಾರ ಸದರಿ ಗ್ರಾಮದ ಸ್ಥಳಾಂತರಣೆಯನ್ನು ಯೋಜಿಸಲಾಗಿರುತ್ತದೆಂದು ಮುಖ್ಯ ಇಂಜಿನಿಯರ್ ರವರು ವರದಿ ಮಾಡಿರುತ್ತಾರೆ.

5. ಮೇಲೆ ಓದಲಾದ (2)ರಲ್ಲಿ ಮುಖ್ಯ ಇಂಜಿನಿಯರ್, ಕೆಳದಂಡೆ ಮುಲ್ಲಾಮಾರಿ ಯೋಜನೆಯಲ್ಲಿ ಬರುವ ಕೋಟಗಾ ಗ್ರಾಮದ ಪುನರ್ವಸತಿಯ ಎಂ.ಡಬ್ಲ್ಯೂಎಲ್ ಮತ್ತು ಎಫ್.ಆರ್.ಎಲ್ ಮಟ್ಟ ಒಂದೇ (ಅಂದರೆ 491.00ಮೀ) ಆಗಿದೆ. ಜಲಾಶಯದ ಎಫ್.ಆರ್.ಎಲ್. (ಎಂ.ಡಬ್ಲ್ಯೂಎಲ್) ರಿಂದ 100 ಮೀ ದೂರದವರೆಗೆ ಕೋಟಗಾ ಗ್ರಾಮದಲ್ಲಿ 162 ಮನೆಗಳು ಇರುತ್ತದೆ. ಆದರೆ ಎಫ್.ಆರ್.ಎಲ್. ಮತ್ತು ಹಿನ್ನೀರಿನ ಮಟ್ಟ 494.85 ಮೀ ಮತ್ತು ಅಲೆಗಳ ಎತ್ತರ (0.75)ನ್ನು ಗಣನೆಗೆ ತೆಗೆದುಕೊಂಡರೆ 64 ಮನೆಗಳು ಮುಳುಗಡೆಯಾಗುತ್ತದೆ. ಕೇಂದ್ರ ಸರ್ಕಾರ ನೀರಾವರಿ ಮತ್ತು ಇಂಧನ ಮಂತ್ರಾಲಯದ ಪತ್ರ ಸಂಖ್ಯೆ: 29.10.72 ಪಾಲಿಸಿ ದಿನಾಂಕ: 10.06.77ರಲ್ಲಿ ತಿಳಿಸಿರುವಂತೆ ಎಂ.ಡಬ್ಲ್ಯೂಎಲ್+ ವೇವ್ ಎತ್ತರ+ ಅಡಿ (ಎತ್ತರ) ಅಥವಾ 300 ಅಡಿ "ಹಾರಿಜಂಟಲ್" ಇವೆರಡರಲ್ಲಿ ಯಾವುದು ಕಡಿಮೆಯೋ ಆ ಮಟ್ಟದವರೆಗಿನ ಕಟ್ಟಡಗಳನ್ನು ಮತ್ತು ಭೂಪ್ರದೇಶವನ್ನು ಸ್ವಾಧೀನ ಪಡಿಸಿಕೊಳ್ಳಬೇಕಾಗಿರುತ್ತದೆ. ಆದರೆ, ನೀರಾವರಿ ಇಲಾಖೆಯ ಎಲ್ಲಾ ಜಲಾಶಯಗಳ ಭೂಸ್ವಾಧೀನ ಪ್ರಕರಣಗಳಲ್ಲಿ ಎಫ್.ಆರ್.ಎಲ್. ಮಟ್ಟದವರೆಗೆ ಭೂಮಿ ಮತ್ತು ಕಟ್ಟಡಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಕಾರ್ಯವಿಧಾನ ಇರುತ್ತದೆ. ಕಾರಣ ಎಫ್.ಆರ್.ಎಲ್. ಮಟ್ಟಕ್ಕಿಂತ ಮೇಲೆ ಹಾಗೂ ಮೇಲ್ಕಾಣಿಸಿದ ಕೇಂದ್ರ ಜಲ ಮತ್ತು ಇಂಧನ ಆಯೋಗದ ಶಿಫಾರಸ್ಸುಗಳಿಗೆ ಅನುಗುಣವಾಗಿ ಕಟ್ಟಡಗಳಿಗೆ ಪರಿಹಾರಧನ ನೀಡುವ ಅವಶ್ಯಕತೆ ಪ್ರಮುಖವಾಗಿ ಜನಾರೋಗ್ಯ ದೃಷ್ಟಿಯಿಂದ ಉಚಿತವೆನಿಸುತ್ತದೆಂದು ತಿಳಿಸಿರುತ್ತಾರೆ.

6. ಈ ಗ್ರಾಮಕ್ಕೆ ಸಂಬಂಧಪಟ್ಟ ಚಂದನಕೇರಾ ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾಧಿಕಾರಿಗಳೂ ಸಹ ಈ ಗ್ರಾಮದ ಸ್ಥಳಾಂತರಿಸುವ ಬಗ್ಗೆ ತಮ್ಮ ಅಭಿಪ್ರಾಯವನ್ನು ಅವರ ಪತ್ರ ಸಂಖ್ಯೆ: 151, ದಿನಾಂಕ: 05.03.2001ರಲ್ಲಿ ವ್ಯಕ್ತಪಡಿಸಿ ಈ ಗ್ರಾಮವು ಭಾಗಶಃ ಮುಳುಗಡೆ ಆದದ್ದೆ ಆದಲ್ಲಿ, ಕಾಲರಾ, ಫೆಲೇರಿಯಾ, ಮಲೇರಿಯಾ ಇನ್ನಿತರ ಸಾಂಕ್ರಾಮಿಕ ರೋಗಗಳ ತಾಣವಾಗಬಹುದು ಎಂದು ಆರೋಗ್ಯ ದೃಷ್ಟಿಯಿಂದ, ಈ ಪ್ರದೇಶ ಯೋಗ್ಯವಿರುವುದಿಲ್ಲ ಎಂದು ವಿಶ್ಲೇಷಿಸಿರುತ್ತಾರೆ.

7. ಕಂದಾಯ ಇಲಾಖೆಯು ಈ ಕೆಳಕಂಡಂತೆ ಅಭಿಪ್ರಾಯ ನೀಡಿದೆ:

"ಎಲ್ಲಾ ನೀರಾವರಿ ಯೋಜನೆಗಳಲ್ಲಿ ಭಾಗಶಃ ಅಥವಾ ಸಂಪೂರ್ಣವಾಗಿ ಮುಳುಗಡೆ ಪ್ರದೇಶವೆಂದು ಪರಿಗಣಿಸಿ ಸ್ಥಳಾಂತರಗೊಳಿಸಿ ಪುನರ್ವಸತಿ ಕಾಮಗಾರಿಗಳಿಗೆ ಮಂಜೂರಾತಿ ನೀಡುವಲ್ಲಿ ಒಂದೇ ಸೂತ್ರವನ್ನು ಅಳವಡಿಸುವುದು ಸೂಕ್ತ. ಅದರಂತೆ ನೀರಾವರಿ ಜಲಾಶಯಗಳ ಪೂರ್ಣ ಪ್ರಮಾಣದ ನೀರಿನ ಗರಿಷ್ಠ ಮಟ್ಟಕ್ಕನುಗುಣವಾಗಿ ಕಟ್ಟಡಗಳ ಸ್ವಾಧೀನಪಡಿಸಿಕೊಳ್ಳಬಹುದಾಗಿದೆ. [In all rehabilitation projects, the standing pattern in Karnataka, is acquisition of all lands upto Full Reservoir Level (FRL) and also acquisition of structures upto Maximum Water Level (MWL)]".

8. ನಂತರ, ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕೋಟಗಾ ಗ್ರಾಮವು ಕೆಳದಂಡೆ ಮುಲ್ಲಾಮಾರಿ ಯೋಜನೆಯಡಿ ಭಾಗಶಃ ಅಥವಾ ಪೂರ್ಣ ಪ್ರಮಾಣದ ಮುಳುಗಡೆ ವ್ಯಾಪ್ತಿಗೆ ಬರುವುದನ್ನು ನೀರು ಶೇಖರಣೆಯನ್ನು ಆಧರಿಸಿ ಎಫ್.ಆರ್.ಎಲ್. ಮಟ್ಟದ ಅಳತೆಯ ಗೋಲನ್ನು ಅನುಸರಿಸಿ ಪುನರ್ವಸತಿ ಕಲ್ಪಿಸಲು ಪೂರ್ಣ ವೆಚ್ಚವನ್ನು ಜಲಸಂಪನ್ಮೂಲ ಇಲಾಖೆಯೇ ಭರಿಸಿಕೊಳ್ಳುವ ಷರತ್ತಿನೊಂದಿಗೆ ಸಹಮತಿ ನೀಡಿದೆ.

ಸರ್ಕಾರದ ಆದೇಶ ಸಂಖ್ಯೆ: ಜಸಂಇ 67 ಎಂಟಿಜೆಡ್ 2000, ಬೆಂಗಳೂರು, ದಿನಾಂಕ: 8ನೇ ಫೆಬ್ರವರಿ, 2005

ಮುಖ್ಯ ಇಂಜಿನಿಯರ್, ನೀರಾವರಿ ಯೋಜನಾ ವಲಯ, ಗುಲ್ಬರ್ಗಾ ಇವರು ಕೋರಿರುವ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿ, ಕೋಟಗಾ ಗ್ರಾಮವು ಕೆಳದಂಡೆ ಮುಲ್ಲಾಮಾರಿ ಯೋಜನೆಯಡಿ ಭಾಗಶಃ ಅಥವಾ ಪೂರ್ಣ ಪ್ರಮಾಣದ ಮುಳುಗಡೆ ವ್ಯಾಪ್ತಿಗೆ ಬರುವುದನ್ನು ನೀರು ಶೇಖರಣೆಯನ್ನು ಆಧರಿಸಿ, ಎಫ್.ಆರ್.ಎಲ್. ಮಟ್ಟದ ಅಳತೆಯ ಗೋಲನ್ನು ಅನುಸರಿಸಿ, ಪುನರ್ವಸತಿಯನ್ನು ಕಲ್ಪಿಸಲು ಈಗಾಗಲೇ ತಯಾರಿಸಲಾಗಿರುವ ಅಂದಾಜಿನಂತೆ ಆಗುವ ರೂ.375.00 ಲಕ್ಷಗಳು ಅಗತ್ಯವಿರುವ ವೆಚ್ಚವನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತ ವತಿಯಿಂದ ಭರಿಸಲು ಅನುಮತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ದಿನಾಂಕ: 24.12.2004ರ ಟಿಪ್ಪಣಿ ಸಂಖ್ಯೆ: ಲೋಇ/1152/ಆಕೋ-1/2004ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಐ.ಡಿ. ಧಮನ್
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ),
ಜಲ ಸಂಪನ್ಮೂಲ ಇಲಾಖೆ (ಕೃಭಾಜನಿನಿ ವಿ. ಕೋಶ).

ಪಿ.ಆರ್.220

FINANCE SECRETARIAT

Subject: Procurement Reforms - Measurement of Works and Supplies – Use of Measurement Books

Preamble:

1. Paragraphs 208 & 209 of the Karnataka Public Works (KPW) Accounts Code Volume I, Paragraphs 300 & 301 of the Karnataka Public Works Departmental (KPWD) Code Volume I and Appendix VII of the KPWD Code Volume II detail the instructions regarding issue of measurement books, recording of measurements, and storage of measurement books. The salient instructions are:

(i) Payments for all work done otherwise than by daily labour and for all supplies, are made on the basis of measurements recorded in measurement books, Form PWG-27 in accordance with the rules in paragraph 209;

(ii) The measurement should be considered as a very important initial account record since it is the basis of all accounts of quantities of work done, whether by daily labour or by piece work or by contract and of materials received which have to be counted or measured;

(iii) All measurements should be neatly taken down in the measurement book issued for the purpose and nowhere else;

(iv) The entries should be recorded in the measurement book at the work spot indelibly in ink so as to render it difficult to tamper with or to make unauthorized additions or alterations in entries once made;

(v) As all payments for works or supplies are based on the quantities recorded in the measurement book, it is incumbent upon the person taking the measurement to record the measurements clearly and accurately. He will also work out and enter in the measurement book the figures for the contents or area column;

(vi) Measurements for all works and repairs should in the first instance be taken by subordinates in charge and checked by Sub-Divisional Officers and Divisional Officers [Assistant Executive Engineer (AEE) is to check 75% in case of works costing Rs.5000 or more and 50% in case of other works and repairs. At least 50% of the works are to be checked. Executive Engineer (EE) is to check 25% of items];

(vii) All final measurements irrespective of value to be recorded by Assistant Engineer (AE) and AEE should check-measure 100% for all works estimated to cost Rs.5000 and more if it is a departmental work and Rs.25,000 and more if it is a contract work. EE should check 25% of the total value of work done if the works cost more than Rs.25, 000;

(viii) No erasures of any kind should be permitted; mistakes should be corrected by drawing the pen through the incorrect entry, and inserting the correct figures or words between the lines. A reliable record is the object to be aimed at, as the measurement book may have to be produced as evidence in a court of law;

(ix) Apart from measurements, the description of the item as per tender has to be written in the hand of the AE.

2. Paragraph 5 of Appendix IV-A of the KPWD Code Volume II – Rules for Registration of Contractors in PWD lay down that Class I and II Contractors should engage at least one Engineering Graduate for every work costing Rs.15 lakhs and above and Class III Contractor should engage one Engineering Graduate for every work costing Rs.10 to 15 lakhs and at least one Diploma Holder on every work or group of works together costing more than Rs.2 lakhs but less than Rs.10 lakhs.

3. Clauses 7(a) and 7(b) of PWG-65 Form, the approved tender document for works, state:

(i) A bill shall be submitted by the Contractor on or before the 15th of each month for all items of work executed in the previous month;

(ii) The details furnished by the Contractor in the bill should be measured by the subordinate in the presence of the Contractor or his duly authorized agent. The countersignature of the Contractor or the said agent in the measurement book shall be sufficient proof to the correctness of the measurements, which shall be binding on the Contractor in all respects;

(iii) If the Contractor does not submit the bills within the prescribed time, the EE may depute within seven days of the prescribed date, a sub-ordinate to measure up the said work. The countersignature of the Contractor shall be obtained in the measurement book concerned with reference to which, the Department may prepare the bill.

4. It is observed that the measurement books are not being used in most of the Government Departments, Public Sector Undertakings, Boards, Societies, and Local bodies for recording the receipt of goods and equipment and payment of invoices are being made on the basis of verification of receipt of materials. However most of the Government Departments, Public Sector Undertakings, Boards, Societies and Local bodies are using the measurement books for recording the measurements as per provisions of KPWD Code. However the compliance to the provisions of the Manual is resulting in lot of clerical work by the technical officers, whose primary duty is supervision of work in the field. Also there are no consistent practices followed by various procurement entities of the State.

5. The Sub-Committee constituted under the Chairmanship of Secretary, Public Works Department by Government in GO No PWD 122 SO/FC 2003 dated 8.5.2003 to look into certain technical issues like measurement books, from the Procurement Reforms Action Plan on the recommendations of the Country Procurement Assessment Report (CPAR) and make recommendations to the Standing Committee, has examined the issue, felt that the present provisions in the Codes and manuals regarding measurement of works and supplies are archaic, time and effort consuming, do not use the currently available Information Technology and has made recommendations for improvement of the system. The Working Group constituted in GO No. PWD 1359 SO/FC 2001 dated 14.8.2002 for implementation of the said Action Plan reviewed and endorsed the recommendations of Sub-Committee. The Standing Committee constituted in GO No. PWD 1359 SO/FC 2001 dated 5.8.2002 for implementation of the said Action Plan on the recommendations of CPAR, examined the recommendations of the Sub Committee in detail.

Government Order No. FD 56 Pro.Cell 2004, Bangalore, 18th January, 2005.

1. Based on the recommendations of the Standing Committee this order is issued for recording of measurement of Works and Supplies. This order shall supersede the current instructions contained in the Codes and Manuals.

(a) A uniform procedure for recording of measurements for works and supplies should be enforced in all the Organizations coming under the purview of the Karnataka Transparency in Public Procurements Act 1999;

(b) The current provisions of the KPW Accounts and Departmental Codes shall continue to be applicable for all Works Contracts of value Rs.25 lakhs and less;

(c) In respect of Works Contracts of value more than Rs.25 lakhs, the Contractors shall be made responsible for submitting bills duly supported by hard copy of detailed measurements of work using electronic spreadsheets and making computations thereof. The Contractor shall submit diskette / CD ROM in addition to the hard copy;

(d) The Assistant Engineer in direct charge of the work shall take independent measurements of the work and enter the same in the electronic spreadsheets and make computations thereof. The Assistant Engineer can make use of the detailed measurements as given by the Contractor in the diskette / CD ROM. In any case the responsibility for the correctness of the measurements shall be entirely of the Assistant Engineer, as prescribed in the Codes and Manuals;

(e) The measurements would be checked by the officers from the hard copy of the spreadsheet as per present stipulations, and computations would be made accordingly;

(f) The countersignature of the Contractor or his authorized Agent shall be obtained on each page in the hard copy of the detailed measurement spreadsheets prepared by the Assistant Engineer, which shall be binding on the Contractor in all respects;

(g) The hard copies of the detailed measurement spreadsheets shall be bound, numbered and stored, which shall be considered as the measurement books, as referred to in the Manuals and Codes. An index shall be prepared for each Contract/Work, which shall show the details of the bills, reference to measurement books and vouchers. Similarly the diskettes / CD ROMs shall be indexed and stored.

(h) In respect of supplies – goods and equipment, the invoices detailing the items supplied with specifications, quantity, rate and amount would be sufficient. This shall be checked and inspected by the receiving authority and accounted as per normal accounting procedure prescribed by Government/Corporation/ Board/ Society/ Local body from time to time. Entry in measurement books need not be insisted upon.

2. This order will apply prospectively and shall not be applicable for contracts concluded in the past.

3. This order shall apply to all Procurement Entities as defined in Section 2 (d) Chapter 1 of the Karnataka Transparency in Public Procurements Act, 1999.

4. This order shall be appropriately incorporated in the Conditions of Contract of Tender documents.

5. The contents of this order shall be appropriately incorporated in the Karnataka Public Works Accounts and Departmental Codes and other Manuals.

By order and in the name of the Governor of Karnataka

Sudhakar Rao

Principal Secretary to Government,

Finance Department.

PR-222

ನಗರಾಭಿವೃದ್ಧಿ ಸಚಿವಾಲಯ

ವಿಷಯ : ನಿವೇಶನ ಸಂಖ್ಯೆ: 1352:ಎಂ ಮತ್ತು 1352:1ಎಂ2, ಖಾನ ಬಹದ್ದೂರ್ ಗಲ್ಲಿ, ಕಬೀರ್ ರಸ್ತೆ, 1ನೇ ಅಡ್ಡರಸ್ತೆ, ಮಂಡಿ ಮೊಹಲ್ಲಾ ರಲ್ಲಿನ 50x60 (3000 ಚ.ಅ.) ನಿವೇಶನದ ಭೂ ಉಪಯೋಗವನ್ನು ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಬದಲಾವಣೆ ಮಾಡುವ ಬಗ್ಗೆ.

ಓದಲಾಗಿದೆ :
1. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರ ಪತ್ರ ಸಂಖ್ಯೆ: ಮೈನಪ್ರಾ:ನಯೋ:ಸಭೆ:29:04-05, ದಿನಾಂಕ: 29.09.04.
2. ದಿನಾಂಕ: 23.11.2004 ರಂದು ಕಡತ ಸಂಖ್ಯೆ: ನಅಇ 400 ಮೈ ಅಪ್ರಾ 2004ರಲ್ಲಿ ನೀಡಿರುವ ನಗರ ಯೋಜನಾ ನಿರ್ದೇಶಕರ ಅಭಿಪ್ರಾಯ.

ಪ್ರಸ್ತಾವನೆ:

ಮೇಲೆ ಕ್ರ.ಸಂ. 1ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರು ನಿವೇಶನ ಸಂಖ್ಯೆ: 1352:ಎಂ ಮತ್ತು 1352:1ಎಂ2, ಖಾನ ಬಹದ್ದೂರ್ ಗಲ್ಲಿ, ಕಬೀರ್ ರಸ್ತೆ, 1ನೇ ಅಡ್ಡರಸ್ತೆ, ಮಂಡಿ ಮೊಹಲ್ಲಾ ರಲ್ಲಿನ 50x60 (3000 ಚ.ಅ.) ನಿವೇಶನವನ್ನು ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ಪ್ರಕಾರ ದಿನಪತ್ರಿಕೆಯಲ್ಲಿ ಪ್ರಕಟಿಸಿ, ಈ ಪ್ರಕಟಣೆಗೆ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲವೆಂದು ತಿಳಿಸುತ್ತಾ, ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ: 2ರಲ್ಲಿ ಓದಲಾದ ಕಡತದಲ್ಲಿ ನಗರ ಯೋಜನಾ ನಿರ್ದೇಶಕರು ಭೂ ಬದಲಾವಣೆ ಮಾಡಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 400 ಮೈಅಪ್ರಾ 2004, ಬೆಂಗಳೂರು, ದಿನಾಂಕ: 7ನೇ ಫೆಬ್ರವರಿ, 2005

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) (1) (ಎ) ಪ್ರಕಾರ ಪ್ರಸ್ತಾವನೆಯನ್ನು ಪರಿಶೀಲಿಸಿ ನಿವೇಶನ ಸಂಖ್ಯೆ: 1352:ಎಂ ಮತ್ತು 1352:1ಎ2, ಖಾನ ಬಹದ್ದೂರ್ ಗಲ್ಲಿ, ಕಬೀರ್ ರಸ್ತೆ, 1ನೇ ಅಡ್ಡರಸ್ತೆ, ಮಂಡಿ ಮೊಹಲ್ಲಾ ರಲ್ಲಿನ 50x60 (3000 ಚ.ಅ.) ನಿವೇಶನವನ್ನು ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಲಾಗಿದೆ.

1) ಪ್ರಸ್ತಾಪಿತ ಜಮೀನಿನ ಭೂ ಉಪಯೋಗ ಬದಲಾವಣೆಗೆ ಶುಲ್ಕವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಪ್ರಕರಣ 18ರನ್ವಯ ಶುಲ್ಕವನ್ನು ಪ್ರಾಧಿಕಾರಕ್ಕೆ ಅರ್ಜಿದಾರರು ಪಾವತಿಸತಕ್ಕದ್ದು.
2) ಈ ಭೂ ಉಪಯೋಗ ಬದಲಾವಣೆಯನ್ನು ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ಪ್ರಾಧಿಕಾರವು ಅಳವಡಿಸಿಕೊಳ್ಳತಕ್ಕದ್ದು.
3) ಅರ್ಜಿದಾರರು ಪ್ರಸ್ತಾಪಿತ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ವಲಯ ನಿಯಮಾವಳಿಗಳನ್ವಯ ಸ್ಥಳೀಯ ಸಂಸ್ಥೆಯಿಂದ ಅನುಮೋದನೆ ಪಡೆಯತಕ್ಕದ್ದು.
4) ಪ್ರಾಧಿಕಾರದ ನಿರ್ಣಯದನ್ವಯ ವಸತಿ ಹಾಗೂ ವಾಣಿಜ್ಯ ಕಟ್ಟಡಗಳ ಪೈಕಿ ಹೆಚ್ಚು ನಡು ಜಾಗ ಮತ್ತು ಕಡಿಮೆ ಅನುಪಾತವನ್ನು ಅಗತ್ಯ ವಾಹನ ನಿಲುಗಡೆಯೊಂದಿಗೆ ಅವಕಾಶ ಕಲ್ಪಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ವಿ. ಶ್ರೀಧರಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.

ಪಿ.ಆರ್.223

ಶಿಕ್ಷಣ ಸಚಿವಾಲಯ

ವಿಷಯ: ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಅನ್ವಯಿಸುವ ಪುಸ್ತಕ ಆಯ್ಕೆ ಮತ್ತು ಖರೀದಿಗೆ ಸಂಬಂಧಿಸಿದ ಪರಿಷ್ಕರಿಸಿದ ಮಾರ್ಗಸೂಚಿಗಳು.

ಓದಲಾಗಿದೆ:
1) ದಿನಾಂಕ 26–9–1997ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 3 ಎಲ್‌ಬಿಪಿ 94.
2) ದಿನಾಂಕ 15–10–2000ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 4 ಎಲ್‌ಬಿಪಿ 99.
3) ದಿನಾಂಕ 4–11–2002ರ ಸರ್ಕಾರಿ ಸುತ್ತೋಲೆ ಸಂಖ್ಯೆ: ಇಡಿ 118 ಎಲ್‌ಐಬಿ 2002.
4) ದಿನಾಂಕ 12–2–2004ರ ಸರ್ಕಾರಿ ಸುತ್ತೋಲೆ ಸಂಖ್ಯೆ: ಇಡಿ 12 ಎಲ್‌ಬಿಪಿ 2003.
5) ದಿನಾಂಕ 21–2–2004ರ ಸರ್ಕಾರಿ ಆದೇಶ ಸಂಖ್ಯೆ: ಇಡಿ 1 ಎಲ್‌ಬಿಪಿ 2004.

ಪ್ರಸ್ತಾವನೆ:

ಮೇಲೆ (1)ರಿಂದ (5)ರವರೆಗೆ ಓದಲಾದ ಸರ್ಕಾರಿ ಆದೇಶ ಹಾಗೂ ಸುತ್ತೋಲೆಗಳನ್ವಯ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಅನ್ವಯಿಸುವ ಪುಸ್ತಕ ಆಯ್ಕೆ ಮತ್ತು ಖರೀದಿಯ ಕಾರ್ಯವಿಧಾನವನ್ನು ನಿಗದಿಪಡಿಸಲಾಗಿದೆ.

2) ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳಲ್ಲಿ ಉತ್ತಮ ಮೌಲ್ಯದ ಗ್ರಂಥಗಳನ್ನು ಸಂಗ್ರಹಿಸಿಡುವ ಹಾಗೂ ಸಾರ್ವಜನಿಕ ಓದುಗರ ಅಭಿರುಚಿಗೆ ಅನುಸಾರವಾಗಿ ಗ್ರಂಥಗಳನ್ನು ಒದಗಿಸುವ ದೃಷ್ಟಿಯಿಂದ ಸದರಿ ಪುಸ್ತಕ ಆಯ್ಕೆ ಮತ್ತು ಖರೀದಿ ಕಾರ್ಯ ವಿಧಾನವನ್ನು ಸರ್ಕಾರ ಪುನರ್ ಅವಲೋಕಿಸಿ, ಅದನ್ನು ಪರಿಷ್ಕರಿಸುವುದು ಅಗತ್ಯವೆಂದು ಭಾವಿಸಿದೆ. ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಇಡಿ 1 ಎಲ್‌ಬಿಪಿ 2004, ಬೆಂಗಳೂರು, ದಿನಾಂಕ:07–02–2005

3) ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ, ಮೇಲೆ (1)ರಿಂದ (5)ರಲ್ಲಿ ಓದಲಾದ ಸರ್ಕಾರದ ಆದೇಶ ಮತ್ತು ಸುತ್ತೋಲೆಗಳನ್ನು ರದ್ದುಪಡಿಸುತ್ತಾ, ಈ ಆದೇಶಕ್ಕೆ ಲಗತ್ತಿಸಿದ ಅನುಬಂಧ–1, ಅನುಬಂಧ–2 ಹಾಗೂ ಅನುಬಂಧ–3ರಲ್ಲಿ ಒಳಗೊಂಡಂತೆ ಪರಿಷ್ಕರಿಸಿದ ಪ್ರಸ್ತುತ ಆಯ್ಕೆ ಮತ್ತು ಖರೀದಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ, ಈ ಮೂಲಕ ನಿಗದಿಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎನ್. ಸೋಮಶೇಖರ್
ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ.

ಅನುಬಂಧ–1

(ದಿನಾಂಕ:07–02–2005ರ ಆದೇಶ ಸಂಖ್ಯೆ: ಇಡಿ 1 ಎಲ್‌ಬಿಪಿ 2004)

ಪುಸ್ತಕ ಆಯ್ಕೆಯ ಕಾರ್ಯ ವಿಧಾನ:

1) ಪುಸ್ತಕ ಆಯ್ಕೆಗೆ ಸಂಬಂಧಿಸಿದ ಈ ಕಾರ್ಯವಿಧಾನ ಎಲ್ಲಾ ಭಾಷೆಯ ಪುಸ್ತಕಗಳ ಆಯ್ಕೆಗಾಗಿ ಅನ್ವಯಿಸತಕ್ಕದ್ದು.

2) ಸಾರ್ವಜನಿಕ ಗ್ರಂಥಾಲಯಗಳಿಗಾಗಿ ಪುಸ್ತಕಗಳನ್ನು ಆಯ್ಕೆ ಮಾಡಲು ರಾಜ್ಯ ಮಟ್ಟದಲ್ಲಿ ಪುಸ್ತಕ ಆಯ್ಕೆ ಸಮಿತಿ ಇರತಕ್ಕದ್ದು. ಆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ರಾಜ್ಯ ಸರ್ಕಾರವು ಪ್ರತ್ಯೇಕ ಆದೇಶದ ಮೂಲಕ ನಾಮನಿರ್ದೇಶಿಸತಕ್ಕದ್ದು. ಈ ಸಮಿತಿಗೆ ಸಂಬಂಧಿಸಿದ ವಿವರಗಳನ್ನು, ಅಂದರೆ, ಅದರ ಸ್ವರೂಪ, ಕಾರ್ಯವ್ಯಾಪ್ತಿ, ಕಾಲಾವಧಿ, ಕಾರ್ಯಚಟುವಟಿಕೆ, ಇತ್ಯಾದಿಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

3) ಪುಸ್ತಕಗಳನ್ನು ಆಯ್ಕೆ ಮಾಡುವ ಬಗ್ಗೆ ವರ್ಷಕ್ಕೆ ಕನಿಷ್ಠ ಮೂರು ಬಾರಿಯಾದರೂ ರಾಜ್ಯದ ಎಲ್ಲಾ ಪ್ರಮುಖ ಕನ್ನಡ ಮತ್ತು ಆಂಗ್ಲ ಭಾಷೆಯ ದಿನ ಪತ್ರಿಕೆಗಳೂ ಒಳಗೊಂಡಂತೆ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಣೆ/ಜಾಹಿರಾತು ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಇವರು ನೀಡಿ, ಆ ವರ್ಷದ ನಿರಂತರ ಆಯ್ಕೆ ವಿಷಯವು ಸಾರ್ವಜನಿಕರ ಗಮನಕ್ಕೆ ಬರುವಂತೆ ಮಾಡತಕ್ಕದ್ದು.

4) ಆಯ್ಕೆಗಾಗಿ ಪುಸ್ತಕಗಳನ್ನು ಸಲ್ಲಿಸುವ ಪ್ರಕಾಶಕರು/ಪುಸ್ತಕ ಮಾರಾಟಗಾರರು /ಸಂಘ ಸಂಸ್ಥೆಗಳು ಷಾಪ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಕಾನೂನಿನ ಅಡಿಯಲ್ಲಿ ನೋಂದಾಯಿಸಿರಬೇಕು. ಅದಕ್ಕೆ ಸಂಬಂಧಿಸಿದ ನೋಂದಣಿ ಪತ್ರದ ಪ್ರತಿಯನ್ನು (ಕಾಲಕಾಲಕ್ಕೆ ನವೀಕರಿಸಿದ) ಅರ್ಜಿಯೊಡನೆ ಲಗತ್ತಿಸತಕ್ಕದ್ದು. ಈ ನಿಬಂಧನೆ ಲೇಖಕ–ಪ್ರಕಾಶಕರಿಗೆ ಅನ್ವಯಿಸುವುದಿಲ್ಲ.

5) ಪುಸ್ತಕಗಳನ್ನು ಆಯ್ಕೆಗಾಗಿ ಸಲ್ಲಿಸುವ ಮಾರಾಟ ಅಥವಾ ಪ್ರಕಾಶನ ಸಂಸ್ಥೆ ಸಂದರ್ಭಾನುಸಾರ ರಾಜ್ಯ/ಕೇಂದ್ರ ತೆರಿಗೆ ಇಲಾಖೆಯಿಂದ ನೊಂದಾಯಿತ ಸಂಸ್ಥೆಯಾಗಿರಬೇಕು. ಈ ನಿಬಂಧನೆ ಲೇಖಕಪ್ರಕಾಶಕರಿಗೆ ಅನ್ವಯಿಸುವುದಿಲ್ಲ.

6) ಮಂಜೂರಾದ ಆಯವ್ಯಯದಲ್ಲಿ ಪುಸ್ತಕ ಖರೀದಿಗಾಗಿ ನಿಗದಿಪಡಿಸಿದ ಮೊತ್ತದಲ್ಲಿ ಕನ್ನಡ ಪುಸ್ತಕಗಳಿಗೆ ಶೇ.80 ಹಾಗೂ ಇಂಗ್ಲೀಷ್ ಮತ್ತು ಭಾರತೀಯ ಇತರ ಭಾಷೆಗಳ ಪುಸ್ತಕಗಳಿಗೆ ಶೇ.20ರಷ್ಟು ಹಣವನ್ನು ಖರೀದಿಸಲು ಅನುಕೂಲವಾಗುವಂತೆ ಪುಸ್ತಕಗಳ ಆಯ್ಕೆಯನ್ನು ಮಾಡುವುದು.

7) ಆಯ್ಕೆಗೆ ಸಲ್ಲಿಸುವ ಎಲ್ಲಾ ಭಾಷೆಗಳ ಪುಸ್ತಕಗಳ ಶೀರ್ಷಿಕೆಯು ವರ್ಷದಲ್ಲಿ ಪ್ರಥಮ ಮುದ್ರಣಗೊಂಡು, ಪ್ರಥಮ ಆವೃತ್ತಿಯಾಗಿ ಪ್ರಕಟಿತವಾಗಿರತಕ್ಕದ್ದು. ಆದರೆ, ಪರಿಷ್ಕೃತಗೊಂಡ ಆವೃತಿಯ ಗ್ರಂಥಗಳನ್ನು (revised editioη) ಆಯ್ಕೆಗೆ ಪರಿಗಣಿಸಬಹುದು.

8) ಪುಸ್ತಕ ಆಯ್ಕೆಗಾಗಿ ಪುಸ್ತಕಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಕರ್ನಾಟಕ ಮುದ್ರಣ ಮತ್ತು ನೊಂದಣಿ ಕಾನೂನು ಕಾಪಿರೈಟ್ ಕಾಯ್ದೆ ಮೇರೆಗೆ ಬೆಂಗಳೂರಿನ ರಾಜ್ಯ ಕೇಂದ್ರ ಗ್ರಂಥಾಲಯದ ಕಾಪಿ ರೈಟ್ ವಿಭಾಗದಲ್ಲಿ ಮೂರು ಪ್ರತಿಗಳನ್ನು ಉಚಿತವಾಗಿ ಸಲ್ಲಿಸಿ ನೊಂದಾಯಿಸತಕ್ಕದ್ದು. ಅಲ್ಲದೆ, ನೊಂದಣಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.

9) ಪ್ರಥಮ ಮುದ್ರಣಗೊಂಡ ವರ್ಷದಿಂದ ಕನಿಷ್ಟ 10 ವರ್ಷಗಳ ಅವಧಿಯ ನಂತರ ಮರುಮುದ್ರಣಗೊಳ್ಳುವ ಉತ್ತಮ ಪುಸ್ತಕಗಳನ್ನು ಆಯ್ಕೆಗಾಗಿ ಪರಿಗಣಿಸಬಹುದು.

10) ಮೂವತ್ತು ಪುಟಗಳಿಗಿಂತ ಕಡಿಮೆ ಇರುವ ಯಾವ ಭಾಷೆಗಳ ಪುಸ್ತಕಗಳನ್ನು (ಮಕ್ಕಳ ಹಾಗೂ ನವಸಾಕ್ಷರ ಪುಸ್ತಕಗಳನ್ನು ಹೊರತುಪಡಿಸಿ) ಆಯ್ಕೆ ಮಾಡಬಾರದು.

11) ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಶೇಕಡ 90ರಷ್ಟು ಕನ್ನಡ ಪುಸ್ತಕಗಳನ್ನೇ ಆಯ್ಕೆ ಮಾಡಬೇಕು.

12) ಲೇಖಕರೇ ಪ್ರಕಾಶಕರಾಗಿರುವ ಸಂದರ್ಭದಲ್ಲಿ ಲೇಖಕರೇ ಅರ್ಜಿ ಸಲ್ಲಿಸಬೇಕು.

13) ಪುಸ್ತಕಗಳನ್ನು ಪ್ರಕಟಿಸುವ ಮೂಲ ಪ್ರಕಾಶಕರು ಅಥವಾ ಅವರ ಅನುಮತಿಯನ್ನು ಅಧಿಕೃತವಾಗಿ ಪಡೆದ ಪುಸ್ತಕ ವ್ಯಾಪಾರಿಗಳು ಮಾತ್ರ ಅರ್ಜಿ ಸಲ್ಲಿಸಬೇಕು.

14) ಮುದ್ರಣಕ್ಕೆ ಉತ್ತಮ ಕಾಗದ ಬಳಸಿರಬೇಕು. ನ್ಯೂಸ್‌ಪ್ರಿಂಟ್ ಅಥವಾ ಇತರೆ ಅಗ್ಗದ ಕಾಗದದಲ್ಲಿ ಮುದ್ರಿಸಿರುವ ಪುಸ್ತಕಗಳನ್ನು ಪರಿಗಣಿಸಕೂಡದು.

15) ಪುಸ್ತಕದ ಒಳ ಎರಡನೇ ಪುಟದಲ್ಲಿ (ಶೀರ್ಷಿಕೆ ಪುಟದ ಹಿಂಬದಿಯಲ್ಲಿ) ಕಡ್ಡಾಯವಾಗಿ ಗ್ರಂಥದ ಶೀರ್ಷಿಕೆ, ಲೇಖಕರ ಹೆಸರು, ಪ್ರಕಾಶಕರ ಹೆಸರು, ಒಟ್ಟು ಪುಟಗಳ (ಮುಖಪುಟಗಳೂ ಸೇರಿದಂತೆ) ಸಂಖ್ಯೆ, ಪ್ರಕಟಣೆಯ ವರ್ಷ, ಮಾರಾಟ ಬೆಲೆ ಹಾಗೂ ಮರು ಮುದ್ರಣದ (ಮರು ಮುದ್ರಣ ಆಗಿದ್ದರೆ) ವಿವರಗಳನ್ನು ಮುದ್ರಿಸಿರಬೇಕು. ಪುಸ್ತಕದ ಮೇಲೆ ಬೆಲೆಗಳು ಮುದ್ರಿತವಾಗಿದ್ದು, ಎದ್ದು ಕಾಣುವಂತಿರಬೇಕು. ಸೀಸದ ಕಡ್ಡಿಯಿಂದ ಬರೆಯಲಾದ, ರಬ್ಬರ್ ಸ್ಟ್ಯಾಂಪ್‌ನಿಂದ ಮುದ್ರಿಸಲಾದ ಅಥವಾ ಬೇರೆಯಾಗಿ ಅಂಟಿಸಲಾದ ಬೆಲೆಗಳಿದ್ದಲ್ಲಿ ಅಂತಹ ಪುಸ್ತಕಗಳನ್ನು ಆಯ್ಕೆಮಾಡದೇ ತಿರಸ್ಕರಿಸಬೇಕು. ಆದರೆ ಅಂಥಹ ಪುಸ್ತಕಗಳನ್ನು ಆಯ್ಕೆಗಾಗಿ ಪರಿಗಣಿಸುವಾಗ ಅತ್ಯಂತ ಅಗತ್ಯವೆಂದು ಸಮಿತಿಗೆ ಕಂಡು ಬಂದಲ್ಲಿ ಸಮಿತಿಯು ಅದರ ಬೆಲೆಯನ್ನು ನಿಗದಿತ ಕಾರ್ಯ ವಿಧಾನದ ಪ್ರಕಾರ ನಿಗದಿ ಪಡಿಸತಕ್ಕದ್ದು. ಅಗತ್ಯವಿದ್ದಲ್ಲಿ, ಪ್ರಕಾಶಕರ ಮುದ್ರಿತ ಬೆಲೆ ಪಟ್ಟಿಯನ್ನು ಗಮನಿಸಿ ಬೆಲೆ ನಿಗದಿ ಪಡಿಸತಕ್ಕದ್ದು. ಅಲ್ಲದೆ, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಗ್ರಂಥಾಲಯಗಳನ್ನು ಹೊರತುಪಡಿಸಿ, ಶಾಲಾ ಕಾಲೇಜುಗಳು, ಸಾರ್ವಜನಿಕ ಸಂಸ್ಥೆಗಳು ಮುಂತಾದ ಬೇರೆ ಖರೀದಿದಾರರಿಗೂ ಸಹ ಮೊಹರಿನಿಂದ ನಮೂದಿಸಿದ ಅಥವಾ ಚೀಟಿ ಅಂಟಿಸುವ ಮೂಲಕ ನಮೂದಿಸಿದ ಪರಿಷ್ಕೃತ ದರಕ್ಕೆ ತಾವು ಈ ಪುಸ್ತಕಗಳನ್ನು ಮಾರಾಟ ಮಾಡುತ್ತಿಲ್ಲ ಎಂಬುದಾಗಿ ಲಿಖಿತವಾಗಿ ಹೇಳಿಕೆ ನೀಡತಕ್ಕದ್ದು. ಅಂತಹ ಹೇಳಿಕೆ ಏನಾದರೂ ವಾಸ್ತವವಲ್ಲದ ಅಥವಾ ತಪ್ಪಾಗಿರುವ ಹೇಳಿಕೆ ಎಂಬುದಾಗಿ ಕಂಡು ಬಂದಲ್ಲಿ ಅಂತಹ ಪುಸ್ತಕಗಳ ಖರೀದಿಗೆ ತನಗೆ ಸಂದಾಯವಾಗಿರುವ ಅಥವಾ ಸಂದಾಯವಾಗಬೇಕಾಗಿರುವ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳತಕ್ಕದ್ದು. ಅಷ್ಟೇ ಅಲ್ಲದೆ, ಸರ್ಕಾರದ ಇಲಾಖೆಗಳಿಗೆ ಅಥವಾ ಸರ್ಕಾರದ ನಿಯಂತ್ರಣದಲ್ಲಿ ಬರುವ ಯಾವುದೇ ಸಂಸ್ಥೆಗೆ, ಸ್ವಾಯುತ್ತ ಸಂಸ್ಥೆಗೆ, ಶಿಕ್ಷಣ ಸಂಸ್ಥೆಗೆ ಮುಂತಾದುವುಗಳಿಗೆ ಪುಸ್ತಕ ಸರಬರಾಜು ಮಾಡುವ ವಿಷಯದಲ್ಲಿ ಕಪ್ಪು ಪಟ್ಟಿಗೆ ಸೇರಿಸಲ್ಪಡಲು ತಾನು ಬದ್ಧನು ಎಂಬ ಮುಚ್ಚಳಿಕೆಯನ್ನು ಪುಸ್ತಕಗಳ ಆಯ್ಕೆಗೆ ಸಲ್ಲಿಸುವಾಗ ಬರೆದುಕೊಡತಕ್ಕದ್ದು.

16) ಪುಸ್ತಕದ ಆಯ್ಕೆ ಹಾಗೂ ಅವುಗಳ ಬೆಲೆ ನಿಗದಿ ವಿಷಯದಲ್ಲಿ ಸಮಿತಿಯ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

17) ಅಗತ್ಯ ಕಂಡು ಬಂದಲ್ಲಿ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯು ರಾಜ್ಯದಲ್ಲಿ ನಡೆಯುವ ಪುಸ್ತಕ ಪ್ರದರ್ಶನಗಳಿಗೆ

ಭೇಟಿ ನೀಡಿ ಪುಸ್ತಕಗಳನ್ನು ಆಯ್ಕೆ ಮಾಡಬಹುದು.

18) ರಾಜ್ಯ ಕೇಂದ್ರ ಗ್ರಂಥಾಲಯ ಹಾಗೂ ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯ ಹಾಗೂ ಪೀಣ್ಯದಲ್ಲಿರುವ ತಾಂತ್ರಿಕ ಗ್ರಂಥಾಲಯಗಳು ಪರಾಮರ್ಶನ (reference) ಗ್ರಂಥಾಲಯಗಳು ಆಗಿರುವುದರಿಂದ, ಮೇಲೆ (ಕಂಡಿಕೆ 6ರಲ್ಲಿ) ಹೇಳಿದ ಶೇಕಡವಾರು ಅವುಗಳಿಗೆ ಅನ್ವಯಿಸುವುದಿಲ್ಲ.

19) ಗ್ರಂಥಗಳನ್ನು ಖರೀದಿಸಲು ಆಯ್ಕೆ ಮಾಡುವಾಗ ಗ್ರಂಥಗಳಲ್ಲಿ ಅಡಕವಾಗಿರುವ ವಿಷಯ ಕ್ರಮಬದ್ಧವಾಗಿದ್ದು, ಪುಟಗಳು, ರಟ್ಟು ಕಟ್ಟುವಿಕೆ ಹಾಗೂ ಗ್ರಂಥಗಳ ಇನ್ನಿತರ ಬಾಹ್ಯ ರಚನೆಯನ್ನು ಸಹ ಗಮನದಲ್ಲಿಟ್ಟುಕೊಳ್ಳಬೇಕು. ಯಾವುದೇ ಪುಸ್ತಕದ ಕ್ಯಾಲಿಕೋ ಪ್ರತಿಗಳು ಲಭ್ಯವಿಲ್ಲದಿದ್ದಲ್ಲಿ ಮಾತ್ರ ಸಾದಾ ಪ್ರತಿಗಳನ್ನು ಖರೀದಿಸತಕ್ಕದ್ದು.

20) ಜ್ಞಾನಪೀಠ, ಕೇಂದ್ರ ಸಾಹಿತ್ಯ ಅಕಾಡೆಮಿಗಳಿಂದ ಪ್ರಶಸ್ತಿ ಪಡೆದು ಭಾಷಾಂತರಗೊಂಡ ಗ್ರಂಥಗಳನ್ನು, ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಕೇಂದ್ರ/ರಾಜ್ಯ ಸಾಹಿತ್ಯ ಅಕಾಡೆಮಿಗಳಿಂದ ಪ್ರಶಸ್ತಿಗಳಿಸಿದ ಪುಸ್ತಕಗಳು ಹಾಗೂ ನ್ಯಾಷನಲ್ ಬುಕ್ ಟ್ರಸ್ಟ್ ಮತ್ತು ಇತರ ಸರ್ಕಾರಿ ಸಂಸ್ಥೆಗಳು ಪ್ರಕಟಿಸಿರುವಂತಹ ಪುಸ್ತಕಗಳನ್ನು ಖರೀದಿಸಲು ಪ್ರಸ್ತುತ ಆಯ್ಕೆ ಪ್ರಕ್ರಿಯೆಗೆ ಒಳಪಡುವುದಿಲ್ಲ, ಹಾಗಾಗಿ ಅವುಗಳನ್ನು ರಾಜ್ಯ ಕೇಂದ್ರ ಗ್ರಂಥಾಲಯಕ್ಕೆ ಸಂಬಂಧಿಸಿದಂತೆ ನಿರ್ದೇಶಕರು ಮತ್ತು ಉಳಿದ ನಗರ/ಜಿಲ್ಲಾ ಗ್ರಂಥಾಲಯಗಳಿಗೆ ಸಂಬಂಧಿಸಿದಂತೆ, ಆಯಾಯ ಮುಖ್ಯ ಗ್ರಂಥಾಲಯಾಧಿಕಾರಿಗಳು ನೇರವಾಗಿ ಖರೀದಿಸಬಹುದು.

21) ಪಾರದರ್ಶಕತೆಯ ದೃಷ್ಟಿಯಿಂದ ಸಮಿತಿಯು ಯಾವುದೇ ಪುಸ್ತಕವನ್ನು ಆಯ್ಕೆ ಮಾಡದೇ ಇದ್ದಲ್ಲಿ ಅದಕ್ಕೆ ಕಾರಣವನ್ನು ದಾಖಲಿಸತಕ್ಕದ್ದು.

ಅನುಬಂಧ-2

(ದಿನಾಂಕ:07-02-2005ರ ಆದೇಶ ಸಂಖ್ಯೆ: ಇಡಿ 1 ಎಲ್‌ಬಿಪಿ 2004)

ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಸ್ವರೂಪ ಮತ್ತು ಕಾರ್ಯವ್ಯಾಪ್ತಿ

1) ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯು, ಅನುಬಂಧ-1ರಲ್ಲಿ ಒಳಗೊಂಡ ಕಾರ್ಯವಿಧಾನ ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸತಕ್ಕದ್ದು.

(2) **ಸಮಿತಿಯ ವ್ಯಾಪ್ತಿ:**

ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯು ಈ ಕೆಳಕಂಡ ಪುಸ್ತಕಗಳನ್ನು ಆಯ್ಕೆ ಮಾಡತಕ್ಕದ್ದು:-

ಅ) ರಾಜ್ಯ ಕೇಂದ್ರ ಗ್ರಂಥಾಲಯಕ್ಕೆ ಬೇಕಾಗುವ ಪುಸ್ತಕಗಳು.

ಆ) ಸಾರ್ವಜನಿಕ ಗ್ರಂಥಾಲಯ ಇಲಾಖೆಯಡಿ ಬರುವ ಜಿಲ್ಲಾ ಕೇಂದ್ರ ಗ್ರಂಥಾಲಯ ಹಾಗೂ ನಗರ ಕೇಂದ್ರ ಗ್ರಂಥಾಲಯಗಳಿಗಾಗಿ ಬೇಕಾಗುವ ಪುಸ್ತಕಗಳು.

ಇ) ರಾಜಾರಾಂ ಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನ (ಆರ್.ಆರ್.ಎಲ್.ಎಫ್) ಯೋಜನೆಯಡಿಯಲ್ಲಿ ಖರೀದಿಸುವ ಪುಸ್ತಕಗಳು.

ಈ) ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಬೇಕಾಗುವ ಪುಸ್ತಕಗಳು.

(3) **ಸಮಿತಿಯ ಸ್ವರೂಪ**

1) ಅಧ್ಯಕ್ಷರು - ಶಿಕ್ಷಣ/ಸಾಹಿತ್ಯ ಕ್ಷೇತ್ರದ ಖ್ಯಾತ ವ್ಯಕ್ತಿಗಳು. (ಸರದಿಯ ಪ್ರಕಾರ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಿಂದ).
2) ಸದಸ್ಯರು - 5 - ರಾಜ್ಯದ 4 ಕಂದಾಯ ವಿಭಾಗಗಳಿಂದ ನಾಲ್ವರು ಹಾಗೂ ಬೆಂಗಳೂರು ನಗರದಿಂದ ಒಬ್ಬರು ಸೇರಿದಂತೆ ಆಯ್ದ ಪ್ರಖ್ಯಾತ ದಲಿತ ಸಾಹಿತಿಗಳು, ಯುವ ಲೇಖಕರು ಹಾಗೂ ಶಿಕ್ಷಣ ತಜ್ಞರು.
3) ಮಹಿಳಾ ಸದಸ್ಯರು - ಸಾಹಿತಿಗಳು/ಶಿಕ್ಷಣ ತಜ್ಞರು (ಇಬ್ಬರು) (ಒಬ್ಬರು ಮೈಸೂರು-ಬೆಂಗಳೂರು ವಿಭಾಗದಿಂದ, ಮತ್ತೊಬ್ಬರು ಬೆಳಗಾಂ-ಗುಲ್ಬರ್ಗಾ ವಿಭಾಗದಿಂದ)
4) ವಿಜ್ಞಾನ ಕ್ಷೇತ್ರದ ಒಬ್ಬ ತಜ್ಞರು (ಸರದಿಯ ಪ್ರಕಾರ ಕಂದಾಯ ವಿಭಾಗಗಳಿಂದ)
5) ಮಾನವಿಕ ಶಾಸ್ತ್ರದ ಒಬ್ಬ ತಜ್ಞರು (ಸರದಿಯ ಪ್ರಕಾರ ಕಂದಾಯ ವಿಭಾಗಗಳಿಂದ)
6) ಮಕ್ಕಳ ಸಾಹಿತ್ಯ ಕ್ಷೇತ್ರದ ಒಬ್ಬ ತಜ್ಞರು (ಸರದಿಯ ಪ್ರಕಾರ ಕಂದಾಯ ವಿಭಾಗಗಳಿಂದ)
7) ಗ್ರಂಥಾಲಯ ವಿಜ್ಞಾನದ ಒಬ್ಬ ತಜ್ಞರು (ಸರದಿಯ ಪ್ರಕಾರ ಕಂದಾಯ ವಿಭಾಗಗಳಿಂದ)
8) ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ ಅಥವಾ ಅವರಿಂದ ನಾಮನಿರ್ದೇಶನಗೊಂಡ ಪ್ರಾಧಿಕಾರದ ಒಬ್ಬ ಸದಸ್ಯರು.
9) ಪುಸ್ತಕ ಪ್ರಕಾಶಕರ/ಮಾರಾಟಗಾರರ ಸಂಘದ ಒಬ್ಬ ಪ್ರತಿನಿಧಿ (ಸರದಿಯ ಪ್ರಕಾರ ಕಂದಾಯ ವಿಭಾಗಗಳಿಂದ)
10) ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು ಅಥವಾ ಅವರಿಂದ ನಾಮನಿರ್ದೇಶಿತ ಒಬ್ಬ ಕಾರ್ಯದರ್ಶಿ/ವ್ಯಕ್ತಿ.
11) ರಾಜ್ಯದ ವಿಶ್ವವಿದ್ಯಾನಿಲಯಗಳ ಪ್ರಸರಾಂಗಗಳ ನಿರ್ದೇಶಕರು (ಸರದಿಯ ಪ್ರಕಾರ)
12) ಅಧ್ಯಕ್ಷರು, ಕರ್ನಾಟಕ ವಿಜ್ಞಾನ ಪರಿಷತ್ ಅಥವಾ ಅವರಿಂದ ನಾಮ ನಿರ್ದೇಶಿತ ಒಬ್ಬ ಕಾರ್ಯದರ್ಶಿ ಅಥವಾ ವ್ಯಕ್ತಿ.
13) ರಾಜ್ಯ ಗ್ರಂಥಾಲಯ ಪ್ರಾಧಿಕಾರದಿಂದ ನಾಮನಿರ್ದೇಶನಗೊಂಡ ಒಬ್ಬ ಸದಸ್ಯರು (ಸರದಿಯ ಪ್ರಕಾರ)
14) ಅಖಿಲ ಭಾರತ ಪ್ರಕಾಶಕರ ಸಂಘದ ಮಾನ್ಯತೆ ಪಡೆದ ಕರ್ನಾಟಕ ಪ್ರಕಾಶಕರ ಸಂಘದ ಒಬ್ಬ ಪ್ರತಿನಿಧಿ.
15) ಕನ್ನಡ ಮತ್ತು ಆಂಗ್ಲ ಭಾಷೆಯ ಪುಸ್ತಕಗಳನ್ನು ಹೊರತುಪಡಿಸಿ ಇತರೆ ಭಾರತೀಯ ಭಾಷೆಯ ಪುಸ್ತಕಗಳನ್ನು ಆಯ್ಕೆ ಮಾಡಲು ಆಯಾಯಾ ಭಾಷೆಯ ಭಾಷಾ/ವಿಷಯ ಪರಿಣಿತರನ್ನು ಕೋ-ಆಪ್ಟ್ ಮಾಡಿಕೊಳ್ಳುವುದು.
16) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ - ಸದಸ್ಯ ಕಾರ್ಯದರ್ಶಿ.

(4) **ಸಮಿತಿಯ ಕಾಲಾವಧಿ:**

ಸಮಿತಿಯನ್ನು ರಚಿಸಿ ಆದೇಶವನ್ನು ಹೊರಡಿಸಿದ ದಿನಾಂಕದಿಂದ 2 ವರ್ಷಗಳ ಅವಧಿಗೆ ಅಥವಾ ಮುಂದಿನ ಸಮಿತಿ ಅಸ್ತಿತ್ವಕ್ಕೆ ಬರುವವರೆಗೆ ಇವರೆಡರಲ್ಲಿ ಯಾವುದು ನಂತರವೋ ಅಲ್ಲಿಯವರೆಗೆ ಇರುತ್ತದೆ.

(5) **ಪುಸ್ತಕ ಬೆಲೆ ನಿಗದಿ ಸಮಿತಿ:**

(ಅ) ಆಯ್ಕೆಯಾದ ಪ್ರತಿಯೊಂದು ಪುಸ್ತಕವು ಬೆಲೆ ನಿಗದಿಪಡಿಸುವ ಉಪಸಮಿತಿಯ ಪರಿಶೀಲನೆಗೆ ಒಳಪಡುತ್ತದೆ.

(ಆ) ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ಅಧ್ಯಕ್ಷರೂ ಸೇರಿದಂತೆ, ಲೇಖಕರು, ಪ್ರಕಾಶಕರು ಹಾಗೂ ಮುದ್ರಣ ಇಲಾಖೆ ಪ್ರತಿನಿಧಿಗಳನ್ನು ಒಳಗೊಂಡಂತೆ ಸದರಿ ಉಪಸಮಿತಿಯನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ರಚಿಸಿಕೊಳ್ಳತಕ್ಕದ್ದು.

(ಇ) ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಅಧ್ಯಕ್ಷರೇ ಈ ಉಪ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸತಕ್ಕದ್ದು. ಗ್ರಂಥಾಲಯ ಇಲಾಖೆ ನಿರ್ದೇಶಕರು ಇದರ ಕಾರ್ಯದರ್ಶಿ ಆಗಿರತಕ್ಕದ್ದು. ಈ ಉಪ ಸಮಿತಿಗೆ ಸರ್ಕಾರಿ ಮುದ್ರಣಾಲಯದ ನಿರ್ದೇಶಕರನ್ನು ಅಥವಾ ಉಪ ನಿರ್ದೇಶಕರನ್ನು ತಾಂತ್ರಿಕ ಸಲಹೆಗಾರರನ್ನಾಗಿ ಆಹ್ವಾನಿಸತಕ್ಕದ್ದು. ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಇಬ್ಬರು ಸದಸ್ಯರು ಈ ಉಪಸಮಿತಿಯ ಸದಸ್ಯರಾಗಿರತಕ್ಕದ್ದು. ಅದೇ ರೀತಿಯಲ್ಲಿ ವೈಜ್ಞಾನಿಕ, ವೈದ್ಯಕೀಯ, ಕಾನೂನು ಮಾನವ ಶಾಸ್ತ್ರಗಳು ಮುಂತಾದ ವಿಶಿಷ್ಟ ವಿಷಯಗಳ ಬಗ್ಗೆ ಪುಸ್ತಕಗಳನ್ನು ಆಯ್ಕೆ ಮಾಡುವಾಗ ಸಮಿತಿಯು ಆಯಾ ಕ್ಷೇತ್ರಗಳಲ್ಲಿ ಪರಿಣಿತರಾದವರೊಬ್ಬರನ್ನು ಕೋ-ಆಪ್ಟ್ ಮಾಡಿಕೊಳ್ಳತಕ್ಕದ್ದು.

(ಈ) ಸದರಿ ಉಪಸಮಿತಿಯು ಖರೀದಿ ಬೆಲೆಯನ್ನು ನಿಗದಿಪಡಿಸುವಾಗ, ಗ್ರಂಥದ ಸತ್ವ ಹಾಗೂ ಮೌಲಿಕತೆ ಜೊತೆಗೆ ಅದಕ್ಕೆ ಉಪಯೋಗಿಸುವ ಕಾಗದದ ಜಿ.ಎಸ್.ಎಂ. ಹಾಗೂ ಗುಣಮಟ್ಟ (ಸಾಮಾನ್ಯ ಕಾಗದ, ಮ್ಯಾಫ್‌ಲಿಥೋ ಕಾಗದ ಇತ್ಯಾದಿ), ಮುದ್ರಣದ ಗುಣಮಟ್ಟ ಹೊದಿಕೆಯ ಸ್ವರೂಪ (ಒಂದು ಬಣ್ಣ, ಎರಡು ಬಣ್ಣ ಇತ್ಯಾದಿ) ಮತ್ತು ಬಳಸಿದ ಕಾಗದ (ಲ್ಯಾಮಿನೇಷನ್ ಇತ್ಯಾದಿ), ಬೈಂಡಿಂಗ್ (ಪಿನ್ನಿಂಗ್ ಸಕ್ಷನ್ ಸ್ಟಿಚ್ಚಿಂಗ್ ಇತ್ಯಾದಿ) ಒಳಪಟಗಳಲ್ಲಿ ಉಪಯೋಗಿಸಲಾದ ಚಿತ್ರಗಳು ಇತ್ಯಾದಿಗಳನ್ನು ಗಮನಿಸಬೇಕು.

(6) **ಬೆಲೆಯ ನಿಗಧಿ ಬಗ್ಗೆ ಮೇಲ್ಮನವಿ:**
ಬೆಲೆ ನಿಗದಿಪಡಿಸುವ ಉಪಸಮಿತಿಯು ಬೆಲೆ ನಿಗದಿಯಿಂದ ಬಾಧಿತರಾದವರು ರಾಜ್ಯ ಮಟ್ಟದ ಸಮಿತಿಗೆ ಮೇಲ್ಮನವಿ ಸಲ್ಲಿಸಬಹುದು. ಅಂತಹ ಮೇಲ್ಮನವಿಯನ್ನು ಆಯ್ಕೆ ಪಟ್ಟಿ ಪ್ರಕಟವಾದ 15 ದಿನಗಳೊಳಗಾಗಿ ಸಲ್ಲಿಸತಕ್ಕದ್ದು. ಅದರ ಕುರಿತು ರಾಜ್ಯ ಮಟ್ಟದ ಸಮಿತಿಯ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.

ಅನುಬಂಧ-3

(ದಿನಾಂಕ:07-02-2005ರ ಆದೇಶ ಸಂಖ್ಯೆ: ಇಡಿ 1 ಎಲ್‌ಬಿಪಿ 2004)

ಪುಸ್ತಕ ಖರೀದಿ ವಿಧಾನಗಳು

1) ಪುಸ್ತಕ ಆಯ್ಕೆ ಸಮಿತಿ ಆಯ್ಕೆ ಮಾಡಿದ ಪುಸ್ತಕಗಳನ್ನು ಮಾತ್ರ ಖರೀದಿಸಬೇಕು. ಆಯ್ಕೆಯಾದ ಪುಸ್ತಕಗಳನ್ನು ಪಟ್ಟಿ ಬಿಡುಗಡೆ ಆದ ದಿನಾಂಕದಿಂದ ಎರಡು ವರ್ಷ ಮಾತ್ರ ಖರೀದಿಸಬಹುದು.

2) ಪುಸ್ತಕಗಳನ್ನು ಖರೀದಿಸುವಾಗ, ಆಯಾ ಜಿಲ್ಲಾ/ನಗರ/ಕೇಂದ್ರ ಗ್ರಂಥಾಲಯಗಳ ಆಯವ್ಯಯದಲ್ಲಿ ಪುಸ್ತಕ ಖರೀದಿಗೆ ಮಂಜೂರಾದ ಮೊತ್ತದಲ್ಲಿ ಕನ್ನಡ ಪುಸ್ತಕಗಳಿಗೆ ಶೇ.80, ಇಂಗ್ಲೀಷ್ ಮತ್ತು ಭಾರತೀಯ ಇತರ ಭಾಷಾ ಪುಸ್ತಕಗಳಿಗೆ ಶೇ. 20ರಂತೆ ಖರೀದಿಸಲು ಬಳಸತಕ್ಕದ್ದು.

3) ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಈ ಕೆಳಕಂಡ ಮೂರು ಹಂತದಲ್ಲಿ ಪುಸ್ತಕ ಖರೀದಿ ಪ್ರಕ್ರಿಯೆಯನ್ನು ಕಾರ್ಯಗತಗೊಳಿಸತಕ್ಕದ್ದು:-

ಅ) ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳ ಪೈಕಿ ಯಾವ ಪುಸ್ತಕಗಳನ್ನು ಖರೀದಿಸಬೇಕೆಂಬ ಬಗ್ಗೆ ಹಣಕಾಸಿನ ಲಭ್ಯತೆಗೆ ಒಳಪಟ್ಟು, ತೀರ್ಮಾನಿಸಲು ಆಯಾ ಜಿಲ್ಲಾ/ನಗರ ಗ್ರಂಥಾಲಯ ಪ್ರಾಧಿಕಾರಗಳೇ ಅಂತಿಮ ಅಧಿಕಾರ ಹೊಂದಿರುತ್ತವೆ.

ಆ) ಇಲಾಖೆಯ, ಜಿಲ್ಲಾ ಹಾಗೂ ನಗರ ಕೇಂದ್ರ ಗ್ರಂಥಾಲಯಗಳ ಆಯವ್ಯಯದಲ್ಲಿ ಪುಸ್ತಕ ಖರೀದಿಗೆ ಮಂಜೂರಾದ ಮೊತ್ತದಲ್ಲಿ ಶೇ.80ರಷ್ಟು (ಎಂಭತ್ತು) ಮೊತ್ತವನ್ನು ಉನ್ನತ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳನ್ನು ಖರೀದಿಸಲು ಮೀಸಲಿಡತಕ್ಕದ್ದು.

ಇ) ಆಯಾ ಜಿಲ್ಲೆಯ ಸ್ಥಳೀಯ ಲೇಖಕರು, ಲೇಖಕ ಪ್ರಕಾಶಕರು ಮತ್ತು ಪ್ರಕಾಶಕರ ಪುಸ್ತಕಗಳನ್ನು ಮಾತ್ರ ಶೇ.10ರಷ್ಟು ಮೊತ್ತಕ್ಕೆ ಆಯಾ ಜಿಲ್ಲಾ/ನಗರ ಪ್ರಾಧಿಕಾರ ಆಯ್ಕೆಮಾಡಿ ಖರೀದಿಸಬಹುದು.

ಈ) ಗ್ರಂಥಾಲಯದ ಓದುಗರ ಬೇಡಿಕೆಯ ಪ್ರಕಾರ ಪುಸ್ತಕಗಳನ್ನು ಖರೀದಿಸಲು ಶೇ.10ರಷ್ಟನ್ನು ಆಯಾ ಜಿಲ್ಲಾ/ನಗರ ಮುಖ್ಯ ಗ್ರಂಥಾಲಯಾಧಿಕಾರಿಯವರ ವಿವೇಚನೆಯಡಿಯಲ್ಲಿ ಖರೀದಿಸಬಹುದು. ಯಾವುದೇ ಭಾಷೆಯ ಯಾವುದೇ ಪ್ರಕಾರದ ಪುಸ್ತಕಗಳನ್ನು ಈ ವಿವೇಚನಾ ಕೋಟಾದಲ್ಲಿ ಖರೀದಿಸಬಹುದು. ಆದರೆ, ಬೆಂಗಳೂರು ನಗರ ಗ್ರಂಥಾಲಯ ಪ್ರಾಧಿಕಾರದ ವ್ಯಾಪ್ತಿಯೊಳಗೆ ಬರುವ ಮುಖ್ಯ ಗ್ರಂಥಾಲಯಾಧಿಕಾರಿಗಳಿಗೆ ಸಂಬಂಧಿಸಿದಂತೆ, ಈ ವಿವೇಚನಾ ಕೋಟಾ ಕೇವಲ ಶೇ.5ಕ್ಕೆ ಸೀಮಿತಗೊಳಿಸಿ ನಿಗದಿಪಡಿಸಿದೆ ಮತ್ತು ನಗರ ಗ್ರಂಥಾಲಯ ಪ್ರಾಧಿಕಾರವು ಶೇಕಡ 15ರಷ್ಟು ಮೊತ್ತಕ್ಕೆ ಖರೀದಿಸುವ ಅಧಿಕಾರ ಹೊಂದಿರುತ್ತದೆ.

4) ಗ್ರಂಥಾಲಯಕ್ಕೆ ಬರುವ ಓದುಗರ ದೃಷ್ಟಿಯಿಂದ ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಸಂಗ್ರಹಿಸುವಾಗ ಎಲ್ಲಾ ಪ್ರಕಾರಗಳು ಇರುವಂತೆ ಕ್ರಮ ಕೈಗೊಳ್ಳಲು ಈ ಕೆಳಕಂಡ ಶೇಕಡಾವಾರು ಪ್ರಮಾಣದಲ್ಲಿ ಖರೀದಿ ಮಾಡತಕ್ಕದ್ದು.

1. ಸಾಹಿತ್ಯ	ಶೇ. 40
2. ಮಕ್ಕಳ ಸಾಹಿತ್ಯ	ಶೇ. 10
3. ಕಲೆ (ಕ್ರೀಡಾ ಸಾಹಿತ್ಯ ಒಳಗೊಂಡಂತೆ)	ಶೇ. 10
4. ವಿಜ್ಞಾನ, ವೃತ್ತಿ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಆದಾಯ ಉತ್ಪಾದನಾ ಯೋಜನೆ	ಶೇ. 10
5. ಸ್ಪರ್ಧಾತ್ಮಕ	ಶೇ. 10
6. ಪಠ್ಯ ಪುಸ್ತಕ	ಶೇ. 10
7. ಸಾಂದರ್ಭಿಕ ಮತ್ತು ಪರಾಮರ್ಶನ	ಶೇ. 10

ಆದರೆ, ಒಂದೊಮ್ಮೆ ಯಾವುದೇ ಪ್ರಕಾರದ ಗ್ರಂಥಗಳು ಸದರಿ ಶೇಕಡಾವಾರಿನ ಪ್ರಕಾರ ಲಭ್ಯವಿಲ್ಲದಿದ್ದಲ್ಲಿ ಹಾಗೂ ಖರೀದಿ ನಂತರ ಹಣ ಉಳಿದಲ್ಲಿ, ಅವಶ್ಯಕತೆ ಇರುವ ಇತರೇ ಪ್ರಕಾರದ ಪುಸ್ತಕಗಳನ್ನು ಖರೀದಿಸಲು ವಿನಿಯೋಗಿಸಬಹುದು.

5) ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳಿಗೆ ಯಾವುದೇ ಭಾಷೆಯ ಪುಸ್ತಕಗಳನ್ನು (ವಿದೇಶಿ ಪುಸ್ತಕಗಳೂ ಸೇರಿದಂತೆ) ಖರೀದಿಸುವಾಗ ಕನಿಷ್ಠ ಶೇ.15 ರಂತೆ ಸೋಡಿಯನ್ನು (ಡಿಸ್ಕೌಂಟ್) ಆಯ್ಕೆ ಸಮಿತಿ ನಿರ್ಣಯಿಸಿದ ನಿವ್ವಳ ಬೆಲೆಯ ಮೇಲೆ ಪಡೆಯತಕ್ಕದ್ದು. ಶೇ.15ಕ್ಕಿಂತ ಹೆಚ್ಚಿನ ಸೋಡಿಯನ್ನು ನೀಡಲು ಮುಂದೆ ಬಂದಲ್ಲಿ, ಒಪ್ಪಬಹುದು.

6) ಹೊರದೇಶದ ಪುಸ್ತಕಗಳನ್ನು ಖರೀದಿಸುವಾಗ ಚಾಲ್ತಿಯಲ್ಲಿರುವ ಗುಡ್ ಆಫೀಸ್ ಕಮಿಟಿಯಿಂದ ವಿದೇಶಿ ಕರನ್ಸಿ ವಿನಿಮಯದ ದರದ ಬಗ್ಗೆ ಕಾಲಕಾಲಕ್ಕೆ ಜಾರಿಯಾಗುವ ಪರಿಷ್ಕೃತ ದರಪಟ್ಟಿಯ ಅಧಿಕೃತ ಪಟ್ಟಿಯನ್ನು ಸರಬರಾಜುದಾರರಿಂದ ಪಡೆಯಬೇಕು, ಗುಡ್ ಆಫೀಸ್ ಕಮಿಟಿಯವರು ನಿಗದಿಪಡಿಸಿದ ದರವನ್ನೇ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಅನ್ವಯಿಸತಕ್ಕದ್ದು.

7) ಒಂದೇ ಶೀರ್ಷಿಕೆಯನ್ನು ಪುನ: ಖರೀದಿಸಬಾರದು. ಆದರೆ ಹೆಚ್ಚು ಪ್ರತಿಗಳ ಅವಶ್ಯಕತೆಯಿದ್ದಲ್ಲಿ, ಓದುಗರ ಬೇಡಿಕೆಯನ್ನು ಗಣನೆಗೆ ತೆಗೆದುಕೊಂಡು, ಆಯ್ಕೆ ಸಮಿತಿಯ ಒಪ್ಪಿಗೆ ಪಡೆದು ಖರೀದಿಸಬಹುದು.

ಅ) ಸರಬರಾಜು ಆದೇಶವನ್ನು ಸಾಧ್ಯವಾದಷ್ಟು ಮಟ್ಟಿಗೆ ಲೇಖಕ, ಲೇಖಕ-ಪ್ರಕಾಶಕರಿಗೆ ನೀಡಬೇಕು.

8) ಯಾವುದೇ ಸಂಸ್ಥೆ/ಲೇಖಕ-ಪ್ರಕಾಶಕ/ಪ್ರಕಾಶಕರಿಂದ ಒಂದು ಆರ್ಥಿಕ ವರ್ಷದಲ್ಲಿ ಒಟ್ಟು ಐವತ್ತು ಸಾವಿರ ರೂಪಾಯಿಗಳು (ರೂ.50,000-00) ಬೆಲೆಗಿಂತ ಹೆಚ್ಚು ಬೆಲೆಯ ಪುಸ್ತಕಗಳನ್ನು ಖರೀದಿಸಬಾರದು (ಸದರಿ ಮೊತ್ತದಲ್ಲಿ ಸೋಡಿಯ ಮೊತ್ತ ಸೇರಿರುವುದಿಲ್ಲ).

9) (ಅ) ಗ್ರಂಥಗಳ ಗುಣಮೌಲ್ಯ, ಬೇಡಿಕೆ, ಉಪಯುಕ್ತತೆ ಮತ್ತು ಬೆಲೆಗಳನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾ/ನಗರ/ಸಂಚಾರಿ ಗ್ರಂಥಾಲಯಗಳಿಗೆ ಒಂದರಿಂದ ಮೂರು ಹಾಗೂ ಗ್ರಾಮ ಪಂಚಾಯತ್ ಗ್ರಂಥಾಲಯಕ್ಕೆ ಒಂದು ಪ್ರತಿಯಂತೆ ಖರೀದಿಸತಕ್ಕದ್ದು.

ಆ) ಇಲಾಖೆಯ ಗ್ರಂಥಾಲಯಗಳ ಸರ್ವತೋಮುಖ ಅಭಿವೃದ್ಧಿ ದೃಷ್ಟಿಯಿಂದ ಆರ್ಥಿಕವಾಗಿ ದುರ್ಬಲವಾದ ಜಿಲ್ಲಾ/ನಗರ ಕೇಂದ್ರ ಗ್ರಂಥಾಲಯಗಳಿಗಾಗಿ ಪುಸ್ತಕಗಳನ್ನು ದಾನರೂಪದಲ್ಲಿ ನೀಡಲು ಅನುವುಮಾಡಿಕೊಳ್ಳುವ ದೃಷ್ಟಿಯಿಂದ ಬೆಂಗಳೂರು ನಗರ ಕೇಂದ್ರ ಗ್ರಂಥಾಲಯದ ಐದು ವಲಯಗಳಲ್ಲಿ ತಲಾ ಒಂದು ಶೀರ್ಷಿಕೆಯ 1 ರಿಂದ 6 ಪ್ರತಿಗಳನ್ನು ಖರೀದಿಸಿ ಅಂತಹ ದುರ್ಬಲವಾದ ಗ್ರಂಥಾಲಯಗಳಿಗೆ ನಿರ್ದೇಶಕರ ಪೂರ್ವಾನುಮತಿಯೊಂದಿಗೆ ವಿತರಿಸುವುದು.

10) ಹೊಸದಾಗಿ ಪ್ರಾರಂಭವಾಗುವ ಗ್ರಂಥಾಲಯಗಳಿಗೆ, ಪ್ರಾರಂಭಿಕ ವರ್ಷದಲ್ಲಿ ಮಾತ್ರ ಸಾಂದರ್ಭಿಕ ಗ್ರಂಥಗಳು ಅಂದರೆ, ಪದಕೋಶ, ವಿಶ್ವಕೋಶ, ವಾರ್ಷಿಕ ಪುಸ್ತಕಗಳು ಹಾಗೂ ಇತರ ಶೈಕ್ಷಣಿಕ ಅಗತ್ಯಕ್ಕೆ ತಕ್ಕಂತೆ ಇರುವ ಪುಸ್ತಕಗಳು, ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆ ಹಾಗೂ ಉತ್ತಮ ಮೌಲ್ಯಗಳುಳ್ಳ ಗ್ರಂಥಗಳ ಮಹಾನ್ ಲೇಖಕರ ಪುಸ್ತಕಗಳ ಮರು ಮುದ್ರಣ ಸೇರಿದಂತೆ ಆಯಾಯಾ ವರ್ಷದಲ್ಲಿ ಪ್ರಕಟಗೊಂಡಿರಬೇಕೆಂಬ ಷರತ್ತು ಇಲ್ಲದೆ ಗ್ರಂಥಗಳನ್ನು ಖರೀದಿಸಬಹುದು. ಹಾಗೂ ಸದರಿ ಪುಸ್ತಕ ಆಯ್ಕೆಗಾಗಿ ಆಯಾಯಾ ಜಿಲ್ಲಾ/ನಗರ ಗ್ರಂಥಾಲಯ ಪ್ರಾಧಿಕಾರದ ಅನುಮೋದನೆಯನ್ನು ಪಡೆಯುವುದು.

11) (ಅ) ಪುಸ್ತಕಗಳ ಪ್ಯಾಕಿಂಗ್ ಹಾಗೂ ರವಾನಿಸುವ ಪುಸ್ತಕಗಳ ಸಾಗಾಣಿಕಾ ವೆಚ್ಚ ಮತ್ತು ಡ್ಯಾಮರೇಜ್ ಇದ್ದಲ್ಲಿ, ಪುಸ್ತಕ ಸರಬರಾಜುದಾರರು ಭರಿಸಬೇಕು.

ಆ) ಎಲ್ಲಾ ಪುಸ್ತಕಗಳ ಖರೀದಿಯನ್ನು ಈ ಅದೇಶದನ್ವಯ ನಿಗದಿಪಡಿಸಿದ ಕಾರ್ಯ ವಿಧಾನವನ್ನು ಪಾಲಿಸಿ ಮಾಡತಕ್ಕದ್ದು. ಅದರ ಉಲ್ಲಂಘನೆ ಮಾಡುವ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ಇ) ಹೆಚ್ಚು ಬೇಡಿಕೆ ಇರುವ ಪುಸ್ತಕಗಳ ಅಗತ್ಯದಷ್ಟು ಸಂಖ್ಯೆಯ ಪ್ರತಿಗಳನ್ನು ಮಾತ್ರ ಕೊಂಡುಕೊಂಡು, ಅವುಗಳನ್ನು ಅನುಪಯುಕ್ತವಾಗಿ ಹಾಳು ಮಾಡುವುದು ಕಂಡು ಬಂದಲ್ಲಿ, ಸಂಬಂಧಪಟ್ಟ ಮುಖ್ಯ ಗ್ರಂಥಾಲಯಾಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳತಕ್ಕದ್ದು.

ಈ) ಯಾವ ಓದುಗರಿಂದಲೂ ಉಪಯೋಗಿಸಲ್ಪಡದ ಕಪಾಟಿನಲ್ಲಿಯೇ ಹೆಚ್ಚಿಗೆ ಇರುವ ಗ್ರಂಥಗಳ ಹಾಗೂ ಹರಿದುಹೋಗಿರುವ ಗ್ರಂಥಗಳ ವಿವರಣಾತ್ಮಕ ಪಟ್ಟಿಯನ್ನು ತಯಾರಿಸಿ, ಕೈಗೊಳ್ಳಬೇಕಾಗಿರುವ ಕ್ರಮವನ್ನು ಸೂಚಿಸಿ, ನಿರ್ದೇಶಕರ ಕಛೇರಿಗೆ ವರದಿಯನ್ನು ಸಲ್ಲಿಸತಕ್ಕದ್ದು.

12) ಗ್ರಂಥಾಲಯದ ಸಂಗ್ರಹದಲ್ಲಿರುವ ಪುಸ್ತಕಗಳು ಹರಿದು ಹಾಳಾದ/ಕಳೆದು ಹೋದ ಮತ್ತು ಲಭ್ಯವಿಲ್ಲದ ಸಂದರ್ಭದಲ್ಲಿ ಅಂತಹ ಗ್ರಂಥಗಳನ್ನು ನೇರವಾಗಿ ಮುಖ್ಯ ಗ್ರಂಥಾಲಯಾಧಿಕಾರಿಗಳೇ ಖರೀದಿಸಿ ಗ್ರಂಥಾಲಯದಲ್ಲಿಡುವುದು.

13) ಮುಖ್ಯ ಗ್ರಂಥಾಲಯಾಧಿಕಾರಿಗಳು, ಜಿಲ್ಲಾ/ನಗರ ಪ್ರಾಧಿಕಾರ ಈ ಪುಸ್ತಕ ಖರೀದಿ ಬಗ್ಗೆ ಕೈಗೊಂಡ ಕ್ರಮವನ್ನು ಕುರಿತು ನಿರ್ದೇಶಕರ ಕಛೇರಿಗೆ ವಾರ್ಷಿಕ ವರದಿ ಸಲ್ಲಿಸತಕ್ಕದ್ದು. ಪುಸ್ತಕಗಳ ಆಯ್ಕೆ ಬಗ್ಗೆ ಏನಾದರೂ ದೂರುಗಳಿದ್ದಲ್ಲಿ ನಿರ್ದೇಶಕರಿಗೆ ವರದಿ ಮಾಡತಕ್ಕದ್ದು.

14) (ಅ) ಪುಸ್ತಕ ಸರಬರಾಜು : ಮಾರಾಟದ ಬಗ್ಗೆ ಅನ್ವಯವಾಗುವ ತೆರಿಗೆ ಪಾವತಿ ಸೇರಿದಂತೆ, ವಿವಿಧ ಕಾಯಿದೆಗಳನ್ನು ಚಾಚೂ ತಪ್ಪದೆ ಅನುಸರಿಸುವುದು ಮಾರಾಟಗಾರನ : ಸರಬರಾಜುದಾರನ : ಲೇಖಕನ ಜವಾಬ್ದಾರಿಯಾಗಿರುತ್ತದೆ.

ಆ) ಪುಸ್ತಕ ಸರಬರಾಜಿಗೆ ಮೊದಲು, ಸರಬರಾಜು ಕಾಲದಲ್ಲಿ ಅಥವಾ ಸರಬರಾಜು ನಂತರ ಇಲಾಖೆಗೆ ತಪ್ಪು ಮಾಹಿತಿಯನ್ನು ನೀಡಿ, ಬೆಲೆಗಳನ್ನು ಸರಿಯಾಗಿ ತಿಳಿಸದೇ, ಗುಣಮಟ್ಟವನ್ನು ಕಾಪಾಡಿಕೊಳ್ಳದೇ ಅಥವಾ ಇನ್ನಾವುದೇ ರೀತಿಯಿಂದಲೂ ಪುಸ್ತಕಗಳ ಸರಬರಾಜು : ಮಾರಾಟ ಸರಿಯಾಗಿ ಆಗದೇ ಇರುವುದು ಕಂಡು ಬಂದಲ್ಲಿ, ಅಂತಹ ಸರಬರಾಜುದಾರರಿಗೆ : ಮಾರಾಟಗಾರರಿಗೆ ಪಾವತಿಯಾಗಿರುವ ಅಥವಾ ಪಾವತಿಯಾಗಬೇಕಾಗಿರುವ ಒಟ್ಟು ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಮತ್ತು ಅಂತಹವರನ್ನು ಸರ್ಕಾರಿ ಇಲಾಖೆಗೆ ಮತ್ತು ಸರ್ಕಾರದ ನಿಯಂತ್ರಣದಲ್ಲಿ ಬರುವ ಎಲ್ಲಾ ಸಂಸ್ಥೆಗಳಿಗೆ ಸಂಬಂಧಿಸಿದ ಪುಸ್ತಕ ಖರೀದಿಗೆ ಸಂಬಂಧಪಟ್ಟಂತೆ ಕಪ್ಪು ಪಟ್ಟಿಗೆ ಸೇರಿಸಬಹುದೆಂದು ಇಲಾಖೆಗೆ ಸ್ಟ್ಯಾಂಪ್ ಪೇಪರ್‌ನಲ್ಲಿ ಮುಚ್ಚಳಿಕೆಯನ್ನು ಸರಬರಾಜು : ಖರೀದಿ ಆದೇಶ ನೀಡುವ ಮೊದಲು ಅಂತಹ ಸರಬರಾಜುದಾರರು : ಮಾರಾಟಗಾರರು ನೀಡತಕ್ಕದ್ದು. ಪರಂತು, ಮೇಲೆ ನಮೂದಿಸಿದಂತೆ ಉಲ್ಲಂಘನೆ ಅಥವಾ ಲೋಪದೋಷಗಳಿಗೆ ಅಂತಹ ಕ್ರಮಗಳಿಂದ ಬಾಧಿತನಾಗಬಹುದಾದ ವ್ಯಕ್ತಿಗೆ ಅಥವಾ ಬಾಧಿತವಾಗಬಹುದಾದ ಸಂಸ್ಥೆಗೆ ತನ್ನ ಅಹವಾಲುಗಳನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡದ ಹೊರತು ಅಂತಹ ಕ್ರಮಗಳನ್ನು ಕೈಗೊಳ್ಳತಕ್ಕದ್ದಲ್ಲ.

ಎಂ.ಎನ್. ಸೋಮಶೇಖರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

ಪಿ.ಆರ್. 224

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಸುತ್ತೋಲೆ

ಸಂಖ್ಯೆ: ಸಿಆಸುಇ 41 ಸೇಸ್ಥಅ 2004, ಬೆಂಗಳೂರು, ದಿನಾಂಕ: 28ನೇ ಜನವರಿ, 2005

ವಿಷಯ : ದಿನಾಂಕ: 01.07.84ರ ನಂತರ ನೇಮಕಾತಿ ಹೊಂದಿರುವ ದಿನಗೂಲಿ ನೌಕರರು- ನ್ಯಾಯಾಲಯದ ಮುಂದಿರುವ ಪ್ರಕರಣಗಳಲ್ಲಿ ಅನುಸರಿಸಬೇಕಾದ ಕ್ರಮದ ಬಗ್ಗೆ -ಸೂಚನೆಗಳು.

ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 8307-11:83 ರಲ್ಲಿ ದಿನಾಂಕ: 23.02.1990ರಂದು ನೀಡಿದ ತೀರ್ಪಿನಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ: 01.07.84ರಂದು ಅಥವಾ ಅದಕ್ಕಿಂತ ಹಿಂದೆ ತೊಡಗಿಸಲಾದ ಹಾಗೂ 10 ವರ್ಷಗಳ ಸತತ ಸೇವೆ ಸಲ್ಲಿಸಿದ ಸಾಂದರ್ಭಿಕ: ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಬೇಕೆಂದು ರಾಜ್ಯ ಸರ್ಕಾರಕ್ಕೆ ಆದೇಶ ನೀಡಿದ್ದ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 2 ಎಸ್‌ಎಲ್‌ಸಿ 90, ದಿನಾಂಕ: 06.08.1990ರಲ್ಲಿ ಈ ಬಗ್ಗೆ ಸೂಚನೆ ನೀಡಲಾಗಿದೆ. ಸರ್ವೋಚ್ಚ ನ್ಯಾಯಾಲಯದ ಮೇಲ್ಕಂಡ ದಿನಾಂಕ: 23.02.1990ರ ತೀರ್ಪಿನ ಪ್ರಕಾರ ದಿನಾಂಕ: 01.07.84ರ ನಂತರ ತೊಡಗಿಸಲಾದ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲು ಆಸ್ಪದವಿರುವುದಿಲ್ಲ.

ಕರ್ನಾಟಕ ಉಚ್ಚ ನ್ಯಾಯಲಯದ ವಿಭಾಗೀಯ ಪೀಠವು ರಿಟ್ ಮೇಲ್ಮನವಿ ಸಂಖ್ಯೆ: 120 ಮತ್ತು 128-329/1999ರಲ್ಲಿ ದಿನಾಂಕ: 01.02.2001ರಂದು ನೀಡಿರುವ ತೀರ್ಪಿನಲ್ಲಿ ದಿನಾಂಕ: 01.07.84ರ ನಂತರ ನೇಮಕಾತಿ ಹೊಂದಿರುವ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲು ಅವಕಾಶವಿಲ್ಲವೆಂದು ತೀರ್ಪನ್ನು ನೀಡಿದೆ. ಈ ತೀರ್ಪಿನ ವಿರುದ್ಧ ಕರ್ನಾಟಕ ಕ್ಯಾಷುಯಲ್ ಮತ್ತು ಡೈಲಿ ರೇಟೆಡ್ ವರ್ಕರ್ಸ್ ಯೂನಿಯನ್ ಹುಬ್ಬಳ್ಳಿ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್‌ಎಲ್‌ಪಿ ಸಂಖ್ಯೆ: 3112-3314/2001ನ್ನು ಸಲ್ಲಿಸಿದ್ದು (ಸಿವಿಲ್ ಅಪೀಲು ಸಂಖ್ಯೆ: 1861-2063/2001) ಈ ಪ್ರಕರಣವು ಸಿವಿಲ್ ಅಪೀಲು ಸಂಖ್ಯೆ: 3595-3612/1999 ಕರ್ನಾಟಕ ಸರ್ಕಾರ ಮತ್ತು ಇತರರು ವಿರುದ್ಧ ಉಮಾ ದೇವಿ ಮತ್ತು ಇತರರು ಪ್ರಕರಣದೊಂದಿಗೆ ಸರ್ವೋಚ್ಚ ನ್ಯಾಯಾಲಯದ ಐದು ನ್ಯಾಯಾಧೀಶರು ಪೀಠದ ಮುಂದಿದೆ.

ದಿನಾಂಕ: 01.07.84ರ ನಂತರ ನೇಮಕಾತಿ ಹೊಂದಿರುವ ದಿನಗೂಲಿ ನೌಕರರು ಸೇವೆಯನ್ನು ಸಕ್ರಮಗೊಳಿಸುವ ಕುರಿತು ನಿರ್ದೇಶನ ನೀಡುವಂತೆ ಕೋರಿ ನ್ಯಾಯಾಲಯದಲ್ಲಿ/ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಸಲ್ಲಿಸಿರುವ ಅರ್ಜಿಗಳಿಗೆ/ ರಿಟ್ ಅರ್ಜಿಗಳಿಗೆ ಸಂಬಂಧಿಸಿದಂತೆ ಆಕ್ಷೇಪಣಾ ಹೇಳಿಕೆ/ ಕಂಡಿಕೆವಾರು ಉತ್ತರವನ್ನು ತಯಾರಿಸುವಾಗ ಮೇಲ್ಕಂಡ ಅಂಶಗಳನ್ನು ಹಾಗೂ ದಿನಾಂಕ: 01.07.84ರ ನಂತರ ನೇಮಕಾತಿ ಹೊಂದಿರುವ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲು ಸಾಧ್ಯವಿಲ್ಲವೆಂದು ಸರ್ಕಾರವು ತಳೆದಿರುವ ನಿಲುವು ಮತ್ತು ದಿನಗೂಲಿ ನೌಕರರ ಸಕ್ರಮಾತಿ ಕುರಿತ ಸಾಮಾನ್ಯ ವಿಷಯ (general issue)ವು ಈಗ ಸುಪ್ರೀಂ ಕೋರ್ಟಿನ ಮುಂದಿದೆ ಎಂಬ ಅಂಶಗಳನ್ನು ಕಡ್ಡಾಯವಾಗಿ ಸೇರ್ಪಡೆ ಮಾಡಲು ಮತ್ತು ಸರ್ಕಾರಿ ವಕೀಲರಿಗೆ ಈ ಬಗ್ಗೆ ಮಾಹಿತಿಯನ್ನು ಸದರಿ ದಿನಗೂಲಿ ನೌಕರರು ಸೇವೆ ಸಲ್ಲಿಸುತ್ತಿರುವ ಇಲಾಖೆಯಲ್ಲಿನ ಸಂಬಂಧಿಸಿದ ಅಧಿಕಾರಿಗಳು/ ಪ್ರತಿವಾದಿಗಳು ತಪ್ಪದೇ ಒದಗಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

ದಿನಾಂಕ: 01.07.84ರ ನಂತರ ನೇಮಕಾತಿ ಹೊಂದಿರುವ ದಿನಗೂಲಿ ನೌಕರರ ಪ್ರಕರಣಗಳಲ್ಲಿ ನ್ಯಾಯಾಲಯಗಳ ತೀರ್ಪು ಹೊರಬಿದ್ದ ನಂತರ ಅವುಗಳ ದೃಢೀಕೃತ ಪ್ರತಿಗಳನ್ನು ಪಡೆಯಲು ಕೂಡಲೇ ಕ್ರಮ ತೆಗೆದುಕೊಂಡು ನ್ಯಾಯಾಲಯದ ಆದೇಶವನ್ನು/ ತೀರ್ಪನ್ನು ಕೂಲಂಕಷವಾಗಿ ಪರಿಶೀಲಿಸಿ ಸದರಿ ತೀರ್ಪು ಸರ್ಕಾರದ ನಿಲುವಿಗೆ ವಿರುದ್ಧವಾಗಿದ್ದಲ್ಲಿ ನಿಗದಿತ ಅವಧಿಯೊಳಗೆ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಮೇಲ್ಕಂಡ ದಿನಗೂಲಿ ನೌಕರರು ಸೇವೆಯಲ್ಲಿರುವ ಇಲಾಖೆಯಲ್ಲಿನ ಸಂಬಂಧಿಸಿದ ಅಧಿಕಾರಿಗಳು/ ಪ್ರತಿವಾದಿಗಳು ಸೂಕ್ತ ಕ್ರಮವನ್ನು ತೆಗೆದುಕೊಳ್ಳತಕ್ಕದ್ದೆಂದು ಸೂಚಿಸಲಾಗಿದೆ. ಈ ವಿಚಾರದಲ್ಲಿ ಅನಗತ್ಯ ವಿಳಂಬ ಮಾಡಿರುವುದು ಹಾಗೂ ಕ್ರಮ ಜರುಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ತಾರಾ ಅಜಯ್‌ಸಿಂಹ

ಸರ್ಕಾರದ ಪ್ರಧಾನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

ಪಿ.ಆರ್.225

ವಿಷಯ : ಶ್ರೀ ಎನ್.ಎಸ್. ಸಂಗೊಳ್ಳಿ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಿಗೆ ವಿಚಾರಣಾ ವರದಿ ಸಲ್ಲಿಸಿದ್ದಕ್ಕಾಗಿ ಗೌರವ ಧನ ವಾಹನ ಭತ್ಯೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಎಸ್‌ಇಎನ್ 2003, ದಿನಾಂಕ: 12.04.2004.
2. ಶ್ರೀ ಎನ್.ಎಸ್. ಸಂಗೊಳ್ಳಿ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ವರದಿ ದಿನಾಂಕ: 27.01.2005.

ಪ್ರಸ್ತಾವನೆ:

ಬೆಂಗಳೂರು ಜಿಲ್ಲೆ ಕೃಷ್ಣರಾಜಪುರ ನಗರ ಸಭೆ ವಾರ್ಡ್ ನಂ.15 ರಿಂದ 21 ರ ವರೆಗಿನ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಅಭ್ಯರ್ಥಿಯ ಸಹಿ ಇಲ್ಲದೇ ನೋಟರಿಯಿಂದ ದೃಢೀಕರಿಸಲ್ಪಟ್ಟ ಘೋಷಣಾ ಪತ್ರವನ್ನು ಅಂಗೀಕರಿಸುವ ಮೂಲಕ ದುರ್ನಡತೆ ಎಸಗಿದ ಆರೋಪಕ್ಕಾಗಿ ಶ್ರೀ ಡಿ. ಬಸವರಾಜು ಕೆ.ಎ.ಎಸ್ (ಕಿರಿಯ ಶ್ರೇಣಿ) ಅಧಿಕಾರಿ ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ಮೇಲೆ (1)ರಲ್ಲಿ ಓದಲಾದ ದಿನಾಂಕ: 12.04.2004ರ ಸರ್ಕಾರಿ ಆದೇಶದಲ್ಲಿ ಶ್ರೀ ಎನ್.ಎಸ್. ಸಂಗೊಳ್ಳಿ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಮೇಲೆ (2)ರಲ್ಲಿ ಓದಲಾದ ದಿನಾಂಕ: 27.01.2005ರ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ಈ ಸಂಬಂಧ ಅವರಿಗೆ ಗೌರವ ಧನ ಹಾಗೂ ವಾಹನಭತ್ಯೆ ಮಂಜೂರು ಮಾಡಲು ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಆದೇಶ ಸಂಖ್ಯೆ: ಸಿಆಸುಇ 97 ಎಸ್‌ಇಎನ್ 2003, ಬೆಂಗಳೂರು, ದಿನಾಂಕ: 8ನೇ ಫೆಬ್ರವರಿ, 2005

ಸರ್ಕಾರವು ಶ್ರೀ ಎನ್.ಎಸ್. ಸಂಗೊಳ್ಳಿ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಇವರು ವಿಚಾರಣಾ ವರದಿ ಸಲ್ಲಿಸಿದ ಕಾರಣ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 3 ಸೇಇವಿ 96, ದಿನಾಂಕ; 24.04.1998ರನ್ವಯ 5,000/- (ಐದು ಸಾವಿರ ರೂಪಾಯಿಗಳು ಮಾತ್ರ)

ರೂಪಾಯಿಗಳ ಗೌರವ ಧನವನ್ನು ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 45 ಸೇಇವಿ 2001, ದಿನಾಂಕ: 04.03.2002ರನ್ವಯ 1,000/- (ಒಂದು ಸಾವಿರ ರೂಪಾಯಿಗಳು ಮಾತ್ರ) ರೂಪಾಯಿಗಳ ವಾಹನ ಭತ್ಯೆಯನ್ನು ಇವರಿಗೆ ಪಾವತಿ ಮಾಡಬೇಕೆಂದು ಈ ಮೂಲಕ ಆದೇಶಿಸುತ್ತದೆ.

ಈ ಬಗೆಗಿನ ವೆಚ್ಚವನ್ನು ಆಯವ್ಯಯದ ಲೆಕ್ಕ ಶೀರ್ಷಿಕೆ "2052 ಸಚಿವಾಲಯ ಸಾಮಾನ್ಯ ಸೇವೆಗಳು-090-ಸಚಿವಾಲಯ-01, ಕರ್ನಾಟಕ ಸರ್ಕಾರದ ಸಚಿವಾಲಯದ-014 ಇತರೆ ಭತ್ಯೆಗಳು" ರಲ್ಲಿ ಭರಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಚ್.ಆರ್. ನಾಗೇಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3).

ಪಿ.ಆರ್.226

ವಿಷಯ : ಶ್ರೀಮತಿ ಎಸ್. ಇಂದುಮತಿ, ಸರ್ಕಾರದ ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಸಚಿವಾಲಯರವರಿಂದ ದಂಡನೆ ವಿಧಿಸಿದ ಸರ್ಕಾರಿ ಆದೇಶದ ವಿರುದ್ಧ ಸನ್ಮಾನ್ಯ ರಾಜ್ಯಪಾಲರಿಗೆ ಮೇಲ್ಮನವಿ ಸಲ್ಲಿಕೆ ಹಾಗೂ ಮೇಲ್ಮನವಿ ಎತ್ತಿ ಹಿಡಿದು ಸರ್ಕಾರಿ ಆದೇಶ ರದ್ದುಗೊಳಿಸಿ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 98 ಎಸ್‌ಇಎನ್ 97 ದಿನಾಂಕ: 12.08.2003.
2. ಶ್ರೀಮತಿ ಎಸ್. ಇಂದುಮತಿ ರವರ ದಿನಾಂಕ: 10.11.2003ರ ಮೇಲ್ಮನವಿ.

ಪ್ರಸ್ತಾವನೆ:

ಕರ್ನಾಟಕ ಸರ್ಕಾರ ಸಚಿವಾಲಯದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಕಾರ್ಯದರ್ಶಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಸಹಕಾರ ಸಂಘದ ಸದಸ್ಯರುಗಳಿಗೆ ನಿವೇಶನ ಮಾಡಿ ಹಂಚುವ ಸಲುವಾಗಿ ಬೆಂಗಳೂರು ಹೊರವಲಯದ ಯಶವಂತಪುರ ಹೋಬಳಿ ಮಲ್ಲತ್ತಹಳ್ಳಿ, ಪಾಪರೆಡ್ಡಿ ಪಾಳ್ಯ ಗ್ರಾಮಗಳಿಗೆ ಸೇರಿದ ವಿವಿಧ ರೈತರುಗಳಿಂದ ಸಂಘಕ್ಕಾಗಿ ಖರೀದಿಸಲ್ಪಟ್ಟ 28 ಎಕರೆ ಜಮೀನಿನ ಖರೀದಿಯಲ್ಲಿ ಸಹಕಾರ ಸಂಘಕ್ಕೆ ಮತ್ತು ರೈತರುಗಳಿಗೆ ಮೋಸ ಮಾಡಿ ರೈತರುಗಳಿಂದ ಆದಾಯ ತೆರಿಗೆ ಪಾವತಿಸಲು ತಲಾ ರೂ.8,000-00 ಗಳನ್ನು ಪಡೆದು ಆದಾಯ ತೆರಿಗೆ ಪಾವತಿಸದೇ ವಂಚಿಸಿದ ಆರೋಪಗಳಿಗಾಗಿ ಇಲಾಖಾ ವಿಚಾರಣೆ ನಡೆಸಿದ ಲೋಕಾಯುಕ್ತರು, 1ನೇ ಆರೋಪ ಸಾಬೀತಾಗಿರುವುದಿಲ್ಲ. 2ನೇ ಆರೋಪ ಸಾಬೀತಾಗಿದೆ ಎಂದು ವರದಿ ನೀಡಿದ್ದು ಆರೋಪಿತ ಅಧಿಕಾರಿಯಾದ ಶ್ರೀಮತಿ ಇಂದುಮತಿ ಅಧೀನ ಕಾರ್ಯದರ್ಶಿ ರವರ ಎರಡು (2) ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಬೀರುವಂತೆ ತಡೆಹಿಡಿಯುವ ದಂಡನೆ ವಿಧಿಸಬೇಕೆಂದು ಮಾಡಿರುವ ಲೋಕಾಯುಕ್ತರ ಶಿಫಾರಸ್ಸನ್ನು, ಆಪಾದಿತ ಅಧಿಕಾರಿಯ ದುರ್ನಡತೆಗೆ ಅಸಮ ಪ್ರಮಾಣದಲ್ಲಿರುವುದನ್ನು ಮನಗಂಡು ಮೇಲೆ (1)ರಲ್ಲಿ ಓದಲಾದ ದಿನಾಂಕ: 12.08.2003ರ ಆದೇಶದಲ್ಲಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಬೀರುವಂತೆ ತಡೆಹಿಡಿಯುವ ದಂಡನೆ ವಿಧಿಸಲಾಗಿತ್ತು.

ಈ ಬಗ್ಗೆ ಶ್ರೀಮತಿ ಎಸ್. ಇಂದುಮತಿ, ಸರ್ಕಾರದ ಅಧೀನ ಕಾರ್ಯದರ್ಶಿರವರು ಕೆ.ಸಿ.ಎಸ್.(ಸಿ.ಸಿ.ಎ.) ನಿಯಮಾವಳಿ 1957ರ ನಿಯಮ 18ರಂತೆ ಸನ್ಮಾನ್ಯ ರಾಜ್ಯಪಾಲರಿಗೆ ಮೇಲ್ಮನವಿ ಸಲ್ಲಿಸಿ, ತಮ್ಮ ಮೇಲೆ ವಿಧಿಸಿದ ದಂಡನೆಯನ್ನು ರದ್ದುಪಡಿಸಲು ಕೋರಿದ್ದಾರೆ. ಶ್ರೀಮತಿಯವರ ಮೇಲ್ಮನವಿ ಮತ್ತು ತತ್ಸಂಬಂದ ಶಿಸ್ತು ಪ್ರಾಧಿಕಾರದ ಪರಿಶೀಲನಾ ಟಿಪ್ಪಣಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 129 ಎಸ್‌ಇಎನ್ 2003, ಬೆಂಗಳೂರು, ದಿನಾಂಕ: 4ನೇ ಫೆಬ್ರವರಿ, 2005

"I have perused the appeal petition submitted by Smt. S. Indumathi, Under Secretary to Government, Housing Department against the orders of the Government as Disciplinary Authority imposing the Penalty of with-holding of one annual increment with Cumulative effect vide Government Order No. DPAR 98 SEN 97 Dated 12.08.2003. I have considered the appeal petition in the light of the contentions made in the appeal and the connected inquiry records and the appeal records.

